ಛಂದೋದರ್ಪಣಂ

ಕ. ಪು. ಸೀತಾರಾಮ ಕೆದಿಲ್ಲಾಯ, ಶಿಶಿಲ

ಭಾರದ್ವಾಜ ಪ್ರಕಾಶನ, ಕದಿರೆ
ಮಂಗಳೂರು – 575002

ಎಳೆಯರಿಗಾಗಿ ಪ್ರಕಾಶನದ ಧ್ಯೇಯ ಸಾಧನೆಗಳ

- ಎಳೆಯರಲ್ಲಿ ಸ್ಫೂರ್ತಿ ತುಂಬುವ ಸಾಹಿತ್ಯ - ಚಟುವಟಿಕೆ
- ಉಚ್ಚ ವಿಚಾರಗಳ ಕಡೆಗೆ ಪ್ರೇರಣೆ - ಜನ ಜಾಗ್ರತಿ
- ಶಿಕ್ಷಣದಲ್ಲಿ ಪಾಂಡಿತ್ಯ ಪರಂಪರೆಗಳ ಬೆಳವಣಿಗೆ
- ಸಾಮಾಜಿಕ ಸಹೋದರ ಭಾವನೆ - ಶೀಲ ಸಂವರ್ಧನೆ
- ವಿಚಾರ ಕ್ರಾಂತಿಯ ಮೂಲಕ ದೇಶಹಿತದ ಕಡೆಗೆ ಪ್ರೇರಣೆ

—ಈ ಪಂಚತತ್ವಗಳನ್ನೊಳಗೊಂಡ ಸೃಜನಾತ್ಮಕ ಶಿಶು ಸಾಹಿತ್ಯ

—ಇಂದಿನ ಎಳೆಯರೇ ಮುಂದಿನ ಸಮಾಜಶಿಲ್ಪಿಗಳಾಗಬೇಕೆಂಬ ನೈತಿ
ಪ್ರೇರಣೆ ನೀಡುವ ಎಳೆಯರ ಸಾಹಿತ್ಯ.

—ಅಧ್ಯಾಪನ, ಅಧ್ಯಯನಗಳ ಜೊತೆಜೊತೆಯಾಗಿ ಅರ್ಹತೆ ಪ
ಕೊಳ್ಳುವ ರೀತಿಯ ರಚನಾತ್ಮಕ ಬಾಲ ಸಾಹಿತ್ಯ.

—ಎಳೆಯರ ನಾಟಕ, ಗೀತೆಗಳು, ಲಘುಬರಹ, ಕಥೆಗಳು ಇವುಗಳನ್ನೊ
ಗೊಂಡ ಸಾಹಿತ್ಯ ವಿಭಾಗ - ಮುಂದಿನ ಯೋಜನೆ.

ಈ ಗುರಿಯಲ್ಲಿ ಎಳೆಯರ ವಿಚಾರ ಸಾಹಿತ್ಯ ರಚನೆ
'ಎಳೆಯರ ಸಾಹಿತ್ಯ ಮಾಲೆ'ಯ ಕುರಿತು

—: ವಿವರಗಳಿಗೆ ಪತ್ರ ವ್ಯವಹಾರ :—

ಕಾವ್ಯ ಕುಸುಮ: ೧೯

ಛಂದೋದರ್ಪಣಂ

ಕ. ಪು. ಸೀತಾರಾಮ ಕೆದಿಲ್ಲಾಯ, ಶಿಶಿಲ

1985

ಭಾರದ್ವಾಜ ಪ್ರಕಾಶನ, ಕದಿರೆ, ಮಂಗಳೂರು-೨

"CHANDODARPANA"

By Ka. Pu. Seetharama Kedillaya, Shishila, D. K.

Published by BHARADWAJA PRAKASHANA
Kadri Mangalore - 575002

First Edition 1985

Price Rs. 18-00

Printed at:

Prasanna Press, Puttur, D. K.

ಪ್ರಕಾಶನದ ಮೊದಲ ಮಾತು

ಭಾರದ್ವಾಜ ಪ್ರಕಾಶನದ ಒಲವು ಶೈಕ್ಷಣಿಕ ಸಾಹಿತ್ಯದ ಕಡೆಗೇ ಸಾಗುವುದು ಎಂಬುದನ್ನು ಈ ವರೆಗಿನ ಪ್ರಕಟಣೆಗಳೇ ಸಾರುತ್ತವೆ. ಚಂಡ ಕೌಶಿಕ ನಾಟಕ (ದಿ। ಗಣಪತಿಮೊಳೆಯಾರ) ಕ್ಷ - ಕಿರಣ (ಅಂಶುಮಾಲಿ) ವರ್ತಮಾನದ ಹತ್ತು ಮುಖಗಳು (ವ್ಯಕ್ತಿ ಚಿತ್ರಣ) ಬದುಕಿನ ಹಿನ್ನೋಟ (ದಿ। ಚಂದ್ರರಾಜ ಶೆಟ್ಟಿ) ಕನ್ನಡ ಪಂಚರಾತ್ರ (ಪ್ರೊ। ಎಸ್. ವಿ. ಪಿ.) ಕನ್ನಡ ನಾರಾಯಣೀಯಮ್ (ನಾರಾಯಣ ಭಟ್ಟಾದ್ರಿ) ದ್ವಾದಶೀ (ನವಿನಿಕೇತನ), ಮದುವೆ ಮಂಟಪ (ಮದುವೆಯ ಹಾಡುಗಳು) ಓಲಿ ಪಟಾಕಿ (ತುಳು - ಕನ್ನಡ ಒಗಟುಗಳು - ವಾಮನನಂದಾವರ) ಹವೀಕ (ವಡಾರು ಮಹಾಬಲೇಶ್ವರ ಭಟ್ಟ) ಬೇಟೆಯ ಉರುಳು (ಕೆದಂಬಾಡಿ ಜತ್ತಪ್ಪ ರೈ). ಕೋಹಿನೂರು ದುರಂತ (ಕಾದಂಬರಿ), ರಾಜಮುಕುಟ (ಖಂಡಕಾವ್ಯ - ತಲೆಂಗಳ ರಾಮಕೃಷ್ಣ ಭಟ್ಟ), ಪಂಚವಟಿ - ಪದ್ಯಾನುವಾದ (ಡಾ। ಉಪ್ಪಂಗಳ ರಾಮ ಭಟ್ಟ), ಬೆಳ್ಳಿಹಬ್ಬದ ಹಾಡುಗಳು (ಕವನಸಂಕಲನ - ವಿ. ಬಿ. ಹೊಸಮನೆ), ಇಮ್ಮಡಿ ನಾಗವರ್ಮ (ಸಂಶೋಧನಕೃತಿ - ಭೀಮರಾವ್ ಚಿಟಗುಪ್ಪಿ), ಬ್ರಾಹ್ಮಣ ಬಂಡಾಯ (ಕವನಸಂಕಲನ - ಡಾ। ಗುಂಡ್ಮಿ, ಚಂದ್ರಶೇಖರ ಐತಾಳ), ಹೀಗೆ ಬೆಳಕು ಕಂಡವುಗಳಲ್ಲಿ ಕೆಲವು ಪ್ರಥಮ ಹಾಗೂ ಜನಪ್ರಿಯ ದ್ವಿತೀಯ ಮುದ್ರಣ ಕಂಡೂ ಮುಗಿದಿವೆ. ಹಲವು ಧೂಳಿನ ಬಾಯಿಗೂ ಗೆದ್ದಲಿನ ಕಡಿತಕ್ಕೂ ಬಲಿಯಾಗುತ್ತಿವೆ, ಆದರೂ ಇದೊಂದು ವ್ಯವಸಾಯದ ಗೀಳು.

ಇದೀಗ ದ್ವಿತೀಯ ಬಾರಿ ಮಂಗಳೂರಿನಲ್ಲಿ ಸೇರುತ್ತಿರುವ ದ. ಕ. ಜಿಲ್ಲಾ ಸಾಹಿತ್ಯ ಸಮ್ಮೇಳನದಲ್ಲಿ ಬಿಡುಗಡೆಗೆ ಸಿದ್ಧವಾದ 'ಛಂದೋದರ್ಪಣ' ಮತ್ತು ಏಕಾದಶೀ' ಸಾಹಿತ್ಯ ಕ್ಷೇತ್ರದಲ್ಲಿ ವಿಶಿಷ್ಟ ರೀತಿಯ ಕೃತಿಗಳಾಗಿ ಬೆಳಕು ಕಾಣುತ್ತಿವೆ. ಪುಷ್ಪಪರಾಗ, ರೂಪಕ ರಾಮಾಯಣ ಇತ್ಯಾದಿ ಕೆಲವು ಕೃತಿಗಳೂ ಮುದ್ರಣಕ್ಕೆ ಸರದಿಯ ಸಾಲಲ್ಲಿವೆ. ಇದರ ಜೊತೆಗೆ, "ಕಲಾದರ್ಶನ" ವೈಚಾರಿಕ ಮಾಸ ಪತ್ರಿಕೆ, ಕಲೆ - ಸಾಹಿತ್ಯ - ಇತಿಹಾಸ - ಶಿಕ್ಷಣ ಸಂಶೋಧನೆಗಳಿಗೆ ಮೀಸಲಾದ ವಿಚಾರಗಳನ್ನೊಳ

ಗೊಂಡು ಪ್ರಕಾಶನದ ಧೈರ್ಯಕ್ಕೆ ಅನುಗುಣವಾಗಿ ಪ್ರತಿ ತಿಂಗಳಲ್ಲಿ ಬೆಳಕು ಕಾಣುತ್ತಿದೆ. ಇದಕ್ಕೆಲ್ಲ ಅಭಿಮಾನಿಗಳ ನೆರವು ಕಾರಣ ಎಂದು ಹೇಳಿಕೊಳ್ಳ ಬಹುದು,

"ಛಂದೋದರ್ಪಣ"–ನಾಗವರ್ಮನ ಛಂದೋಂಬುದಿ ಏಳೆಂಟು ಶತಮಾನಗಳ ಹಿಂದಿನ ಕಾಲದ ಲಕ್ಷ್ಯ-ಲಕ್ಷಣ ಸಹಿತವಾದ ಛಂದಶ್ಶಾಸ್ತ್ರ ಗ್ರಂಥವಾಗಿದ್ದರೆ, ಅಲ್ಲಿಂದ ಮುಂದೆ ಕನ್ನಡದಲ್ಲಿ ಅಂತಹ ಒಂದು ಕೃತಿ ಬಾರದಿದ್ದುದರ ಕೊರತೆಯನ್ನು ದೂರಮಾಡುವ ಐತಿಹಾಸಿಕ ಕೃತಿ ಎನ್ನಬಹುದಾದುದು ಈ ಛಂದೋದರ್ಪಣ. ಕನ್ನಡದಲ್ಲಿ ಈ ಛಂದಶ್ಶಾಸ್ತ್ರ ಕೃತಿಯನ್ನು ಬರೆದ ಆತ್ಮೀಯ ಮಿತ್ರರಾದ ಶ್ರೀ ಕ. ಪು.ಸೀತಾರಾಮ ಕೆದಿಲಾಯರು, ಭಾರದ್ವಾಜ ಪ್ರಕಾಶನದಲ್ಲಿ ಬೆಳಕುಕಾಣಿಸಲು ಬಯಸಿರುವುದು ಅಭಿಮಾನದ ಸಂಗತಿ. ಇವರು ನನಗೆ ಲಾಭನಷ್ಟಗಳ ಹೊಣೆಗಾರಿಕೆಯಲ್ಲಿ ಸಹಭಾಗಿಗಳಾಗುವುದಾಗಿಯೂ ಧೈರ್ಯ ಹೇಳಿದ್ದಾರೆ ಭಾರದ್ವಾಜ ಪ್ರಕಾಶನದ ಬಳಗವೆಲ್ಲವೂ ಇಂಥವರಿಂದಲೇ ತುಂಬಿರ ಲೆಂದು ಹಾರೈಕೆ.

ಸಂಸ್ಕೃತದಲ್ಲಿ ಪಿಂಗಲಾಚಾರ್ಯರು ಹೇಳಿದಂತೆ ವೈದಿಕ ಛಂದಸ್ಸು -ಲೌಕಿಕ ಛಂದಸ್ಸುಗಳೆಂಬ ಪೃಥಕ್ಕರಣ ಹೇಗೆ ಬೆಳೆದು ಬಂತೋ ಹಾಗೆಯೆ, ಕನ್ನಡ ಛಂದಸ್ಸಿನ ಮೂಲವನ್ನೂ ಆಳವಾಗಿ ಅಭ್ಯಾಸ ಮಾಡಿದಾಗ ಸಂಸ್ಕೃತಜನ್ಯ - ದ್ರಾವಿಡಜನ್ಯ ಛಂದಸ್ಸುಗಳ ಪ್ರಕಾರಗಳನ್ನು ಮಾತ್ರ ಗುರುತಿಸಿಕೊಳ್ಳಬಹುದು. ಆದರೆ 'ಬಿಎಂಶ್ರೀ' ಅವರಂತಹ ವಿದ್ವಾಂಸರು, ಕನ್ನಡ ಸಾಹಿತ್ಯದಲ್ಲಿ ಸಂಸ್ಕೃತದಿಂದ ತೆಗೆದುಕೊಂಡಿರುವ ಛಂದಸ್ಸುಗಳೆಂದೂ ಅಚ್ಚ ಕನ್ನಡ ಛಂದಸ್ಸೆಂದೂ ಗುರುತಿಸಿಬಿಟ್ಟಿದ್ದಾರೆ. ಈಗ ನಮಗೆ ಬೇಕಾಗಿರುವುದು ಸೃಷ್ಟಿಯ ಅನಂತರದ ಬೆಳವಣಿಗೆಯ ವಿಚಾರ ಮಾತ್ರ.

ಕೇಶಿರಾಜನ ಶಬ್ದಮಣಿದರ್ಪಣದಂತೆ, ಶ್ರೀ ಕೆದಿಲ್ಲಾಯರ ಈ ಕೃತಿ ಛಂದಶಾಸ್ತ್ರಕ್ಕೊಂದು ಮಣಿದರ್ಪಣವಾಗಿಯೇ ತೋರಬಹುದು. ಸಂಜ್ಞಾ ಪ್ರಕರಣಂ (ಪ್ರಥಮ), ಸಮವೃತ್ತ ಪ್ರಕರಣಂ (ದ್ವಿತೀಯ) ಅರ್ಧಸಮ

* [ಕನ್ನಡ ಕೈಪಿಡಿ ಸಂಪುಟ ೧ರಲ್ಲಿ ಕರ್ಣಾಟಕ ಛಂದಸ್ಸು ನೋಡಿ]

ವೃತ್ತ. ವಿಷಮ ವೃತ್ತ, ಉಪಜಾತಿ ವೃತ್ತ ಅನುಷ್ಟುಪ್ ಶ್ಲೋಕ ಪ್ರಕರಣಂ (ತೃತೀಯ) ವೈತಾಳೀಯ ಮಾತ್ರಾ ಸಮಕಪ್ರಕರಣಂ (ಚತುರ್ಥ) ಆರ್ಯಾದಿಜಾತಿ ಪ್ರಕರಣಂ (ಪಂಚಮ) ಕರ್ಣಾಟಕ ವಿಷಯ ಜಾತಿ ಪ್ರಕರಣಂ (ಷಷ್ಠ) ಷಟ್ಪದೀ ಚತುಷ್ಪದೀ ಪ್ರಕರಣಂ(ಸಪ್ತಮ) ಷಟ್ಪ್ರತ್ಯಯ ಪ್ರಕರಣಂ (ಅಷ್ಟಮ) ಎಂಬ ಎಂಟು ಅಧ್ಯಾಯಗಳಲ್ಲಿ ವಿಸ್ತರಿಸಿರುವ ಈ ಕೃತಿಯಲ್ಲಿ ಉಕ್ತಾ ಅತ್ಯುಕ್ತಾದಿ ಛಂದಸ್ಸಿನ ವರ್ಣ ವೃತ್ತಗಳಲ್ಲಿ ಕನ್ನಡ ಸಾಹಿತ್ಯಕ್ಕೆ ಹೊಂದಿಕೊಂಡ ಪ್ರಸಿದ್ಧ ವೃತ್ತಗಳನ್ನೆಲ್ಲ ಲಕ್ಷಣ ಸಹಿತ ಲಕ್ಷ್ಯದಲ್ಲಿ ರಚಿಸಿದ್ದಾರೆ. ಮಾತ್ರಾಗಣ, ಅಂಶಿಗಣಗಳ ವಿವಿಧ ಪದ್ಯಗಳನ್ನು ನಿರೂಪಿಸಿ, ಹಲವಕ್ಕೆ ನಾಮಕರಣವನ್ನು ಮಾಡಿದ್ದಾರೆ. ಛಂದಶಾಸ್ತ್ರಕ್ಕೆ ಇದೊಂದು ವಿದ್ವತ್ಪೂರ್ಣ ಕಾಣಿಕೆಯೇ ಸರಿ.

ಇಂತಹ ಕೃತಿಯನ್ನು ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನದ ವೇಳೆಗೆ ಬಿಡುಗಡೆ ಮಾಡಲು ಪ್ರಕಾಶನಕ್ಕೆ ಒದಗಿಸಿಕೊಟ್ಟ ಕವಿಗಳಿಗೂ, ಮುದ್ರಿಸಿ ಪುಸ್ತಕದ ಅಂದವನ್ನು ವಾಚಕರ ಕೈಗೊಪ್ಪುವಂತೆ ಮಾಡಿಕೊಟ್ಟ ಪುತ್ತೂ[illegible] ಪ್ರಸನ್ನ ಮುದ್ರಣಾಲಯದ ಶ್ರೀ ಕೆ. ಚೆನ್ನಪ್ಪ ಗೌಡ ಅವ[illegible], ಸಹಕರಿಸಿದ ಎಲ್ಲ ಅಭಿಮಾನಿ ಬಳಗಕ್ಕೂ, ಕೊಂಡುಕೊಂಡು ಓದಿ ಪ್ರೋತ್ಸಾಹಿಸುವ ಕನ್ನಡ ಸಾಹಿತ್ಯಲೋಕದ ಬಂಧುಗಳಿಗೂ ಹೃತ್ಪೂರ್ವಕ ವಂದನೆಗಳೊಂದಿಗೆ ವಾಚಕರ ಕೈಗೊಪ್ಪಿಸುತ್ತೇವೆ.

ಕದಿರೆ ಮಂಗಳೂರು ೨
ರಕ್ತಾಕ್ಷಿ, ಪೌಷ ಕೃಷ್ಣ ೬
೧೨ - ೧ - ೧೯೮೫

ಪ್ರಕಾಶಕ:
ಭಾರದ್ವಾಜ ಪ್ರಕಾಶನ

ಪ್ರಸ್ತಾವನೆ

ಕನ್ನಡದಲ್ಲಿ ನಾಗವರ್ಮ ಕವಿಯ ಛಂದೋಂಬುಧಿ ಈಶ್ವರ ಕವಿಯ ಕವಿಜಿಹ್ವಾಬಂಧನ-ಗುಣಚಂದ್ರನ ಛಂದಸ್ಸಾರ-ವೀರಭದ್ರ ಕವಿಯ ನಂದಿ ಛಂದೋರ್ಣವಗಳು ಪ್ರಸಿದ್ಧ ಛಂದೋಗ್ರಂಥಗಳಾಗಿವೆ. ಇವುಗಳಲ್ಲಿ ಕನ್ನಡದ ಪ್ರಾಚೀನ ಛಂದೋಬಂಧಗಳ ಲಕ್ಷಣವನ್ನು ಲಕ್ಷ್ಯಪದ್ಯಗಳಲ್ಲಿಯೇ ನಿರೂಪಿಸಲಾಗಿದೆ. ಆದರೆ ಇವುಗಳಲ್ಲಿ ಉಲ್ಲೇಖಿಸದ ಕೆಲವು ಪದ್ಯಗಳು ಪೂರ್ವಕಾವ್ಯಗಳಲ್ಲಿ ಗೋಚರಿಸುತ್ತವೆ. ಅದಲ್ಲದೆ ಅನಂತರದ ಕೃತಿಗಳಲ್ಲಿ ವಿವಿಧ ರೀತಿಯ ವಿನೂತನ ಛಂದೋಬಂಧಗಳು ಪ್ರಯೋಗಗೊಂಡಿವೆ. ಆದುದರಿಂದ ಈ ಛಂದೋಗ್ರಂಥಗಳನ್ನು ಸಂಪಾದಿಸಿದ ಮಹಾಶಯರೂ ಕನ್ನಡ ಛಂದಸ್ಸಿನ ಕುರಿತು ಸಂಶೋಧನಕೃತಿಗಳನ್ನು ರಚಿಸಿದ ವಿದ್ವಾಂಸರೂ ಸಂಸ್ಕೃತ ಪ್ರಾಕೃತಾದಿ ಅನ್ಯ ಭಾಷೆಗಳ ಛಂದಶ್ಶಾಸ್ತ್ರಗಳಿಂದ ಅನೇಕ ಪದ್ಯಗಳನ್ನು ಉದ್ಧರಿಸಿ ಲಕ್ಷಣವನ್ನು ವಿವರಿಸಬೇಕಾಯಿತು. ಹಿಂದಿ ಮರಾಠಿ ಮುಂತಾದ ಅರ್ವಾಚೀನ ಭಾಷೆಗಳಲ್ಲಿ ಪುರಾತನ ನೂತನ ಛಂದೋಬಂಧಗಳ ಲಕ್ಷಣವನ್ನು ನಿರೂಪಿಸುವ ಛಂದಶ್ಶಾಸ್ತ್ರಗಳನ್ನು ಆಧುನಿಕ ಕವಿಗಳು ನಿರ್ಮಿಸಿರುವರು. ಆದರೆ ಕನ್ನಡದಲ್ಲಿ ಯಾರೂ ನವೀನ ಛಂದೋಗ್ರಂಥವನ್ನು ರಚಿಸಲಿಲ್ಲ. ಆದುದರಿಂದ ನಾನು ಈ ಛಂದೋದರ್ಪಣವನ್ನು ಬರೆಯಲು ಕಾರಣವಾಯಿತು, ಹಿಂದೆ ಪ್ರಕಟವಾಗಿರುವ ಕನ್ನಡ - ಸಂಸ್ಕೃತ-ಪ್ರಾಕೃತ - ತೆಲುಗು - ಮಲೆಯಾಳ-ಹಿಂದಿ ಇತ್ಯಾದಿ ಭಾಷೆಗಳ ಛಂದಶ್ಶಾಸ್ತ್ರಗಳು ಈ ಕೃತಿಗೆ ಆಧಾರ ಗ್ರಂಥಗಳಾಗಿವೆ, ಇವುಗಳಿಂದ ಕನ್ನಡಕ್ಕೆ ಅವಶ್ಯವಾದ ಛಂದೋವಿಷಯಗಳನ್ನು ಪರಿಗ್ರಹಿಸಿ ಇವುಗಳಲ್ಲಿ ಉಕ್ತವಾಗದ ಕೆಲವು ವಿಶಿಷ್ಟ ವಿಚಾರಗಳನ್ನು ಸೇರಿಸಿ ಲಕ್ಷ್ಯ ಲಕ್ಷಣ ಸಮವಾಯ ಪದ್ಧತಿಯಲ್ಲಿ ಈ ಛಂದೋಗ್ರಂಥವನ್ನು ವಿರಚಿಸಿರುವೆನು.

ಈ ಕೃತಿಯಲ್ಲಿ ಕೆಲವು ನೂತನ ಛಂದೋಬಂಧಗಳಿಗೆ ನಾನೇ ಕಲ್ಪಿಸಿಕೊಟ್ಟ ನಾಮಧೇಯಗಳ ಕುರಿತು ವಿವರಿಸುವ ಅವಶ್ಯವಿದೆ. ನಾಗವರ್ಮನ ಛಂದೋಂಬುಧಿ ಜಯಕೀರ್ತಿಯ ಛಂದೋನು ಶಾಸನ

ಗಳಲ್ಲಿ ಕರ್ಣಾಟಕ ವಿಷಯ ಜಾತಿಗೆ ಸೇರಿದ ಒಂದು ರೂಪವನ್ನು ಮಾತ್ರವೇ ಉಲ್ಲೇಖಿಸಲಾಗಿದೆ. ಆದರೆ ಕವಿರಾಜ ಮಾರ್ಗಾದಿ ಗ್ರಂಥಗಳಲ್ಲಿ ವಿಭಿನ್ನ ಲಕ್ಷಣದ ಗೀತಿಕೆಗಳು ಕಂಡುಬರುವುದರಿಂದ ಗೀತಿಕೆ - ಸಮಗೀತಿಕೆ - ವಿಷಮ ಗೀತಿಕೆಗಳೆಂಬ ಮೂರು ಪ್ರಭೇದಗಳನ್ನು ಕಲ್ಪಿಸಬೇಕಾಯಿತು. ಹಿಂದಿನ ಛಂದೋ ಗ್ರಂಥಗಳಲ್ಲಿ ಇಲ್ಲದ ಅಂಶಗಣಬದ್ಧ ಗೀತೆಗಳಿಗೆ ಬೇರೆ ಬೇರೆ ಹೆಸರಿಟ್ಟು ಲಕ್ಷಣವನ್ನು ನಿರೂಪಿಸಬೇಕಾಯಿತು.

ಕನ್ನಡದಲ್ಲಿ ಈಗ ಮಾತ್ರಾಗಣ ಬದ್ಧ ಚತುಷ್ಪದಿಗಳು ಬಹಳ ಪ್ರಚಾರದಲ್ಲಿವೆ. ಪ್ರಾಕೃತ ಹಿಂದಿ ಇತ್ಯಾದಿ ಭಾಷೆಗಳಲ್ಲಿಯೂ ವಿವಿಧ ರೀತಿಯ ಮಾತ್ರಾ ಚತುಷ್ಪದಿಗಳು ಪ್ರಯೋಗಗೊಂಡಿವೆ. ಆದರೆ ಇವುಗಳಲ್ಲಿ ಕನ್ನಡದ ಮಾತ್ರಾಬಂಧಗಳಂತೆ ತಾಳಲಯ ಬದ್ಧವಾದ ಗಣವಿನ್ಯಾಸವಿರುವ ಕೆಲವು ಚತುಷ್ಪದಿಗಳು ಮಾತ್ರ ಲಭಿಸುವುವು. ಆದುದರಿಂದ ಅವುಗಳ ನಾಮಧೇಯಗಳನ್ನು ಕೆಲವು ಪದ್ಯಗಳಿಗಿಟ್ಟು ಇತರ ಅನೇಕ ಚತುಷ್ಪದಿಗಳಿಗೆ ಬೇರೆ ಹೆಸರುಗಳನ್ನು ಸೂಚಿಸಬೇಕಾಯಿತು. ಕನ್ನಡದ ಪೂರ್ವಕವಿಗಳು ಉತ್ಸಾಹ-ಮಂದಾನಿಲ-ಲಲಿತ ಇತ್ಯಾದಿ ಸಮವೃತ್ತಗಳ ಅಂಕಿತ ನಾಮಗಳನ್ನು ಅದೇ ಛಂದೋಲಯವಿರುವ ರಗಳೆಗಳಿಗೂ, ಮಾತ್ರಾ ಚತುಷ್ಪದಿಗಳಿಗೂ ಪ್ರಯೋಗಿಸಿದ ಕ್ರಮವನ್ನು ಅನುಸರಿಸಿ ಕೆಲವು ಸಮವೃತ್ತಗಳ ಹೆಸರುಗಳನ್ನು ಹಲವು ಸಮಚತುಷ್ಪದಿಗಳಿಗೆ ಕೊಟ್ಟಿರುವೆನು. ಆದರೆ ಕನ್ನಡದ ಅರ್ಧಸಮ-ವಿಷಮ ಚತುಷ್ಪದಿಗಳಿಗೆ ಸಮಾನವಾದ ಪದ್ಯಗಳು ಬೇರೆ ಭಾಷೆಗಳಲ್ಲಿ ಕಂಡು ಬರುವುದಿಲ್ಲ. ತಾಳಲಯಬದ್ಧವಾದ ಈ ಗೀತೆಗಳಿಗೆ ತಾಳಾನುಗುಣವಾದ ಅಭಿಧಾನವಿಟ್ಟಿರುವೆನು.

ಈ ಕೃತಿಯಲ್ಲಿ ವಿವರಿಸಿದ ಪದ್ಯಗಳಲ್ಲದೆ ನಾನಾ ವಿಧದ ಅಸಂಖ್ಯಾತ ಛಂದೋಬಂಧಗಳು ಈಗ ಕನ್ನಡದಲ್ಲಿ ರೂಪುಗೊಂಡಿವೆ. ಆದರೆ ಅವುಗಳಿಗೆ ಬೇರೆ ಬೇರೆ ಹೆಸರಿಟ್ಟು ಲಕ್ಷಣವನ್ನು ಸೂಚಿಸಲು ಸಾಧ್ಯವಾಗದು. ಇದರಲ್ಲಿ ನಿರೂಪಿಸಿದ ಪದ್ಯಗಳ ಸಂಯೋಗದಿಂದಲೇ ಇತರ ಛಂದೋ

ಬಂಧಗಳ ಆವಿಷ್ಕಾರವಾಗುವುದರಿಂದ ಅವುಗಳ ಛಂದೋಲಕ್ಷಣವ ಸುಲಭವಾಗಿ ಗುರುತಿಸಿ ತಿಳಿಯಬಹುದು.

ಈ ಛಂದೋದರ್ಪಣದ ಮೂಲ ಹಸ್ತಪ್ರತಿಯಲ್ಲಿ ಇನ್ನೂ ಅ ಪದ್ಯಗಳಿವೆ. ಆದರೆ ವಿಸ್ತಾರವಾದ ಸಂಪೂರ್ಣ ಕೃತಿಯನ್ನು ಪ್ರಕಟಿಸಲು ಪ್ರಕಾಶಕರು ಹಿಂಜರಿದುದರಿಂದ ಅತಿಮುಖ್ಯವಾದ ಪದ್ಯಗಳನ್ನು ಮಾತ್ರ ಸಂಗ್ರಹಿಸಿ ಈ ಪುಸ್ತಕವನ್ನು ಸಿದ್ಧಪಡಿಸಲಾಗಿದೆ.

ಕನ್ನಡದ ಪ್ರಸಿದ್ಧ ವಿದ್ವಾಂಸರಾದ ಶ್ರೀ ಸೇಡಿಯಾಪು ಕೃಷ್ಣ ಭಟ್ಟರೂ, ಪ್ರೊ। ಎಂ. ವಿ. ಸೀತಾರಾಮಯ್ಯನವರೂ ಶ್ರೀ ಕುಕ್ಕಿಲ ಕೃಷ್ಣ ಭಟ್ಟರೂ, ಟಿ. ಕೇಶವ ಭಟ್ಟರೂ ಈ ಕೃತಿ ರಚನೆಗೆ ಮಾರ್ಗದರ್ಶಕರಾಗಿ ಅತ್ಯಮೂಲ್ಯವಾದ ಸೂಚನೆಗಳನ್ನು ನೀಡಿರುವರು. ಹಿರಿಯರಾದ ಈ ಮಹನೀಯರಿಗೆ ವಿನಮ್ರ ಭಾವದಿಂದ ಅಭಿವಂದನೆಗಳನ್ನು ಸಮರ್ಪಿಸುತ್ತೇನೆ.

ಈ ಪುಸ್ತಕವನ್ನು ಪ್ರಕಟಿಸಿದ ಭಾರದ್ವಾಜ ಪ್ರಕಾಶನದ ಮುಖ್ಯಸ್ಥರಾದ ಶ್ರೀ ವಿ. ಬಿ. ಹೊಸಮನೆಯವರಿಗೆ ಅಭಿನಂದನೆಗಳನ್ನು ಅರ್ಪಿಸುತ್ತೇನೆ.

ಇದರ ಮುದ್ರಣ ಕಾರ್ಯವನ್ನು ಚೆನ್ನಾಗಿ ನೆರವೇರಿಸಿಕೊಟ್ಟ ಪುತ್ತೂರಿನ ಪ್ರಸನ್ನ ಮುದ್ರಣಾಲಯದ ಒಡೆಯರಾದ ಶ್ರೀ ಚೆನ್ನಪ್ಪ ಗೌಡರಿಗೂ, ಕಾರ್ಯನಿರ್ವಾಹಕರಿಗೂ ಹಾರ್ದಿಕ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ಕ. ಪು. ಸೀತಾರಾಮ ಕೆದಿಲಾಯ

॥ ಶ್ರೀ ॥

ಛಂದೋದರ್ಪಣಂ

ಪ್ರಥಮಾಧ್ಯಾಯಂ

ಶ್ರೀಮದ್ಗೋತ್ರಸುತಾಂಬಿಕೋತ್ಪಲಶರಚ್ಚಂದ್ರಂ ಸಮಸ್ತಾಮರ ।
ಸ್ತೋಮಾರಾಧಿತಪಾದ ಪದ್ಮಯುಗಳಂ ಭಕ್ತೌಘಕಲ್ಪದ್ರುಮಂ ।
ಭೂಮಿವ್ಯೋಮಜಲಾಗ್ನಿ ಭಾಸ್ಕರ ಮರುತ್ಸೋಮಾತ್ಮರೂಪಂ ಜಗ ।
ತ್ಸ್ವಾಮಿ ಶ್ರೀ ಶಿಶಿಲೇಶ್ವರಂ ಸಲಹುಗೆಮ್ಮಂ ಕೂರ್ಮೆಯಿಂದಾವಗಂ ॥ ೧ ॥

ಅತಿಶಯ ಲಕ್ಷಣಾನ್ವಿತೆ ಲಸತ್ಪದ ಶೋಭಿತೆ ಶುದ್ಧವರ್ಣರಂ ।
ಜಿತೆ ಸರಸಪ್ರಶಾಂತೆ ಸದಲಂಕೃತಿರಾಜಿತೆ ಭವ್ಯಭಾವಸಂ ।
ಯುತೆ ಘನರೀತಿ ಸಂಗತೆ ಗುಣೋನ್ನತೆ ಮಂಜುಳ ನಾದಯುಕ್ತೆ ಭಾ ।
ರತಿಯೊಲವಿಂದಮೆಮ್ಮರಸನಾಲಯದೊಳ್ ನೆಲಸಿರ್ಕೆ ಸಂತತಂ ॥ ೨ ॥

ಛಂದಶ್ಶಾಸ್ತ್ರವ ಕವಿಜನ ।
ವೃಂದಂ ಕನ್ನಡದೊಳೋದಿ ಭಾವಿಪ ತೆಱದಿಂ ।
ಛಂದೋದರ್ಪಣ ಕೃತಿಯಂ ।
ಸುಂದರ ಕರ್ಣಾಟ ಭಾಷೆಯೊಳ್ ವಿರಚಿಸುವೆಂ ॥ ೩ ॥

ಸಂಜ್ಞಾಪ್ರಕರಣಂ

ಪರಿಕಿಸೆ ಛಂದೋವಿಧಿಯೊಳ್ ।
ಪರಮಾಕ್ಷರ ವಿತತಿ ಲಘುಗುರುಪ್ಲುತ ಸಂಜ್ಞಾ ।
ಪರಿಭೇದಂಗಳ ತಳೆಗುಂ ।
ನಿರತಂ ಹ್ರಸ್ವಾಕ್ಷರಂ ಲಸಲ್ಲಘುವೆನಿಕುಂ ॥ ೪ ॥

ದೃಷ್ಟಾಂತಂ :— ಇ ಮ

ವರ ದೀರ್ಘಾಕ್ಷರವೆಂದುಂ ।
ಗುರುವೆ ನಿಕುಂ ಯೋಗವಾಹವುಂಸಂಯುಕ್ತಾ ।
ಕ್ಷರ ಮುಂ ವ್ಯಂಜನವರ್ಣವ ।
ಪರದೊಳ್ ತಳೆದಿರ್ಪಪೂರ್ವ ಲಘು ಗುರುವಕ್ಕುಂ ॥ ೫ ॥

ದೃಷ್ಟಾಂತಂ:– ಕೇಡಂ ಚಿಃ ಗೆಯ್ವರ್

ಅತಿಶಯ ದೀರ್ಘವ ತಳೆದು ।
ನ್ನತಿಯಿಂದುಚ್ಚಾರ ಸಮಯದೊಳ್ ಸನ್ಮಾತ್ರಾ ।
ತ್ರಿತಯುವ ಪೊರ್ದುವ ವರ್ಣಂ ।
ಪ್ಲುತ ಸಂಜ್ಞೆಯ ನಾಂತು ಮೂಡುಗುಂ ಕೆಲವೆಡೆಯೊಳ್ ॥ ೬ ॥

ದೃಷ್ಟಾಂತಂ:– ಹಾ಼

ಸ್ಫುರದಕ್ಷರದೊಳ್ ನಿರ್ಮಲ ।
ತರ ಲಘುವಿಂಗೊಂದು ಮಾತ್ರೆ ಗಣನೆಗೆ ಬರ್ಕುಂ ।
ಗುರುವಿಂಗೆಣಿಕೆಯ ಮಾತ್ರೆಗ ।
ಳೆರಡಕ್ಕುಂ ಪ್ಲುತಕೆ ಮೂಱು ಮಾತ್ರೆಗಳಕ್ಕುಂ ॥ ೭ ॥

ಶ್ರುತಿಸುಮಧುರತರ ದಿವ್ಯ ।
ಶ್ರುತಿಗಳೊಳುಚಿತ ಪ್ಲುತಾಕ್ಷರಂ ನೆರೆದಿರ್ಕುಂ ॥
ನುತಲೌಕಿಕ ಕೃತಿತತಿಯೊಳ್ ।
ಪ್ಲುತಮುಂ ದೀರ್ಘತೆಯನಾಂತ ಗುರುವೆಂದೆನಿಕುಂ ॥ ೮ ॥

ಛಂದೋಗಣನೆಯ ಸೂತ್ರ ।
ಕ್ಕೊಂದುವ ತೆಱದಿಂದೆ ವಿಮಲ ಲಘುವ 'ಲ'ವೆಂದುಂ ॥
ಕುಂದದ ಗುರ್ವಕ್ಷರವ 'ಗ' ।
ವೆಂದುಂ ಸಂಜ್ಞೆಗಳೊಳೊರೆವ ಪದ್ಧತಿಯಿರ್ಕುಂ ॥ ೯ ॥

ಲ=ಲಘು ಗ=ಗುರು

ಪರಿಶುದ್ಧಾಕ್ಷರ ನಿಕರದೆ ।
ಸುರುಚಿರಲಘುವಿಂಗೆ ಸಯ್ತೆಸೆವ ನೀಳ್ಗೆರೆಯಿಂ ।
ಗುರುವಿಂಗೆ ಪಿಂತೆ ಕೊಂಕಿದ ।
ಗೆರೆಯುಂ ಪ್ರಸ್ತಾರ ಚಿಹ್ನೆಯಕ್ಕುಂ ಕ್ರಮದಿಂ ॥ ೧೦ ॥

ಲಘು । ಗುರು s

ಸದಮಳ ಪದ್ಯದೆ ನಿಶ್ಚಿತ ।
ಪದಾಂತ್ಯದೊಳ್‌ಬರ್ಪ ಲಲಿತ ಲಘ್ವಕ್ಷರದ s ॥
ತುದಿಗುಚ್ಚಾರದೆ ದೀರ್ಘತೆ ।
ಯುದಯಿಸುವಂತಿರೆ ತದಕ್ಷರಂ ಗುರುವೆನಿಕುಂ ॥ ೧೧ ॥

ಪರಪದದಾದಿಯೊಳೊಪ್ಪುವ ।
ಸರೇಫ ಸಂಯುಕ್ತ ವರ್ಣದಿಂದಂ ಮೊದಲೊಳ್ ।
ನೆರೆದ ಪದಾಂತದ* ಹ್ರಸ್ವಂ ।
ಗುರುವಾಗದೆ ಲಘುವೆನಿಕ್ಕು ಮುಚಿತ s ಕ್ರಮದಿಂ ॥ ೧೨ ॥

ದೃಷ್ಟಾಂತಂ :– ಹರಿ* ತ್ರಿಲೋಕ ಪೂಜ್ಯಂ.
ಅಪವಾದಂ:– ಶಬ್ದಾಂತರ್ಗತ ಸರೇಫ ಸಂಯುಕ್ತಾಕ್ಷರದ ಪೂರ್ವಾಕ್ಷರಕ್ಕೆ ಶಿಥಿಲತ್ವವಿಲ್ಲಂ:- ಚsಕ್ರಂ.

ಶಿಥಿಲದ್ವಿತ್ವ ವಿಚಾರಂ

ನಿರತಂ ಹ್ರಸ್ವಾಕ್ಷರದಿಂ ।
ಪರದೊಳ್ ಶಿಥಿಲತೆಯಸಾಂತ ಮ*ರ್ದು ಸಂಯುಕ್ತಾ ।
ಕ್ಷರಮಿರೆ ಪೂರ್ವದ ವರ್ಣಂ ।
ಗುರುವೆನಿಸದೆ ಲಘುವಿನಂತೆ ಗಣನೆಯ ಪಡೆಗುಂ ॥ ೧೩ ॥

ಬ*ರ್ದಿಲಂ ಚೆಲ್ವದಿ*ವರ್ಱತ್ತೆಯು ।
ಮ*ರ್ದಱ ಬೆಳೆದೆಸೆವ ಮ*ರ್ದಱವಳ್ಳಿ ಮೆಲ್ಲೆ*ರ್ದೆಯೆ*ರ್ದೆವಾಯ್ ॥
ಗ*ರ್ದಱಗು ಬ*ರ್ದಱಂಕು ಬ*ರ್ದಱಕುಸಲೆ ।
ಕ*ರ್ದಱಂಕು ಕ*ರ್ದಱಕೆಣೆಸೆ ಸಹಜ ಶಿಥಿಲತೆವಡೆಗುಂ ॥೧೪ ॥

ಲಳಿತ ಲಘೂಪಧೆಯೊಪ್ಪಿದ ।
ಕುಳ ಱಟ ರೇಫಾಂತ ಲಿಂಗ ದಿದಿರೊಳ್ "ಗಳ್"ಸಂ।
ಗಳಿಸೆ ಚತುರ್ಥಿಗೆ ಸಲ್ವ"ಗೆ"
ಮೊಳೆದಿರೆ ಶೈಥಿಲ್ಯ ಮುದಯಿಕುಂ ಬಹುಳತೆಯಿಂ ॥ ೧೫ ॥

ಕುಳಾಂತಕ್ಕೆ :– ಮುಗು*ಳ್ಗಳ್–ಅಮು*ಳ್ಗೆ.
ಱಟಾಂತಕ್ಕೆ :– ನೆಗ*ಟ್ಗಳ್ – ಅಗ*ಟ್ಗೆ.
ರೇಫಾಂತಕ್ಕೆ:– ಅಲ*ರ್ಗಳ್ – ತಳಿ*ರ್ಗೆ.
ಱ ಕಾರಾದೇಶ ರೇಫಾಂತಕ್ಕೆ:– ಎಡ*ರ್ಗಳ್ – ಪೆಸ*ರ್ಗೆ.
ಅಪವಾದಂ:– ಕುರುಳ್ಗಳ್ – ಮರುಳ್ಗಳ್ – ಪುರುಳ್ಗಳ್–ಎಂಬಂತೆ ಕೆಲ ವೆಡೆಯೊಳ್ ಶಿಥಿಲತ್ವಮಿಲ್ಲಂ.
ಆದಿಗುರುವಾದೊಡೆ ಶಿಥಿಲತೆಯಿಲ್ಲಂ:– ಬಾಸುಟ್ಗಳ್– ಇಕ್ಕುಟ್ಗೆ.
ಆದಿಗುರುವಾದೊಡ ಮುಪಾಂತ್ಯಂ ಲಘುವಾದೊಡೆ ಶಿಥಿಲತೆಯಕ್ಕುಂ:– ಕಾದಲ*ರ್ಗಳ್.

ವಿದಿತ ಲಘೂಪಾಂತ್ಯಮನೊಂ ।
ದಿದ ಕುಳ ಱ ಟ ರಾಂತ ಧಾತು ವಿಂಗಿದಿರೊಳ್ "ಗುಂ" ।
"ದ" "ದಪ" "ವ"ಕಾರಂ ವಿಧಿಯು"ಗೆ" ।
ಯೊದವಿರೆ ಬಹುಳತೆಯಿ ನೊಂದುಗುಂ ಶಿಥಿಲತ್ವಂ ॥ ೧೬ ॥

ಕುಳಾಂತಕ್ಕೆ:- ನುಸು*ಳ್ದಂ ನುಗು*ಳ್ದಪಂ-ಮಗು*ಳ್ವಂ-ಮಸು*ಳ್ಗೆ
ನುಸು*ಳ್ಗೆ .
ಟ ಟಾಂತಕ್ಕೆ:- ತುಮು*ಬ್ದಂ-ಜಗು*ಬ್ದಪಂ-ಪೊಗ*ಬ್ವಂ - ತೆಗ*ಬ್ಗಂ-
ನೆಗ*ಬ್ಗೆ .
ರೇಫಾಂತಕ್ಕೆ:- ತಳ*ರ್ದಂ-ತೊಡ*ರ್ದಪಂ-ಮಿಳಿ*ರ್ವಂ - ಅಮ*ರ್ಗುಂ-
ಆಡ*ರ್ಗೆ.
ಅಪವಾದಂ:- ಪೊರಳ್ದಂ-ತಗುಳ್ದಂ-ಎಂಬಿವು ಶಿಥಿಲದ್ವಿತ್ವಮುಂದ್ವಿತ್ವಮು
ಮಕ್ಕುಂ. ಸುರುಳ್ದಂ-ತೆರಳ್ದಂ-ಪೊದಳ್ದುದು - ಎಂಬಂತೆ ಕೆಲವೆಡೆಯೊಳ್
ಶಿಥಿಲತ್ವಮಿಲ್ಲಂ.
ದೀರ್ಘಾದಿಗೆ ಶಿಥಿಲತೆಯಿಲ್ಲಂ:- ಸಾರ್ದಂ-ಪಾರ್ದಂ.

ಸುರುಚಿರ ಸಮಾಸ ಪದದೊಳ್ ।
ಪರಮಲಘೂಪಧೆಯುನಾಂತಳಾಂತಂರಾಂತಂ ।
ಪರಕಿರ್ಪ "ಗದವಜಾ"ದಿಯ ।
ಬೆರೆದೈಕ್ಯದೊಳೆಸೆಯೆ ಪೊರ್ದುಗುಂ ಶಿಥಿಲತೆಯುಂ ॥ ೧೭ ॥

ಕುಳಾಂತಕ್ಕೆ:- ಮುಗು*ಳ್ಗಾಯ್ - ಅಮ*ಳ್ದೊಂಗಲ್ - ಎಸ*ಳ್ವಸೆ-
ಅಮ*ಳ್ಜಂತ್ರಂ.
ರಾಂತಕ್ಕೆ:- ಅಲ*ರ್ಗೊಂಚಲ್ - ಬಿದಿ*ರ್ದಟ್ಟೆ - ಬೆರ್ಮ*ರ್ವನಿ - ಕದಿ*
ರ್ಜೊನ್ನಂ.

ಅಕ್ಷರಗಣ ಭೇದ ನಿರೂಪಣಂ

ಅತಿಶಯ ವೃತ್ತದ ಗಣನೆಗೆ ।
ಹಿತಮೆನಿಸುವ "ಮಯರಸತಜಭನ "ಗಣನಿಚಯಂ ।
ನುತ ಮಧ್ಯಾಖ್ಯೆಯ ವರ್ಣ ।
ತ್ರಿತಯಪ್ರಸ್ತಾರದಿಂದೆ ಸಂಜನಿಯಿಸುಗುಂ ॥ ೧೮ ।

ಗುರು ಮೂಱಾಗಿರೆ ಮಗಣಂ ।
ನಿರುಪಮ ಲಘುಗುರು ಯುಗಂಗಳೊಂದಿರೆಯಃಗಣಂ ॥
ಗುರುಲಘು ಗುರುವಿರೆ ರಗಣಂ ।
ಸುರುಚಿರ ಲಘುಯುಗ್ಮ ಗುರುಗಳೊಡನಿರೆ ಸಗಣಂ ॥ ೧೯ ॥

ಸೊಗಯಿಪ ಗುರುಯುಗ ಲಘುವಿರೆ ।
ತಗಣಂ ಲಘುಗುರುಲಘೂತ್ಕರಂಬರೆ ಜಗಣಂ ॥
ಸುಗುರು ಲಘುದ್ವಯ ಮೊಂದಿರೆ ।
ಭಗಣಂ ಲಘುಮೂಱು ಮೂಡೆ ನಗಣಮೆಃನಿಕ್ಕುಂ ॥ ೨೦ ॥

ಮಯರಸತಜಭನಗಣಸಂ ।
ಜಯಮುರ್ವೀಚಕ್ರ ವಾರಿ ವಹ್ನಿನಭಸ್ವ ।
ದ್ವಿಯದರ್ಕೇಂದು ತ್ರಿದಶಾ ।
ಲಯಾಹ್ವಯಂಗಳ ವಿಕಲ್ಪ ವಿಧಿಯಿಂತಳೆಗುಂ ॥ ೨೧ ॥

ಗುರುವರ್ಣಂಕೆಲವೆಡೆಯೊಳ್ ।
ಹರಾಭಿಧಾನವ ವಿಶುದ್ಧ ಲಘು ಕೆಲವೆಡೆಯೊಳ್ ॥
ಹರಿನಾಮವ ವರ ವೃತ್ತ ।
ಸ್ವರೂಪ ಲಕ್ಷಣ ನಿರೂಪಣದೊಳಾಂತಿರ್ಕುಂ ॥ ೨೨ ॥

ಅಕ್ಷರ ಗಣ ಪ್ರಸ್ತಾರಂ

ಮಗಣಂ - (ಭೂಮಿ) - ಭೂಚಕ್ರಂ s s s
ಯಗಣಂ - (ಜಲಂ) - ಕಬಂಧಂ । s s
ರಗಣಂ - (ಅಗ್ನಿ) - ಪಾವಕಂ s । s
ಸಗಣಂ - (ವಾಯು) - ಪವನಂ । । s
ತಗಣಂ - (ಆಕಾಶ) - ಆಕಾಶ s s ।
ಜಗಣಂ - (ಸೂರ್ಯಂ) - ದಿವಾಂಶು । s ।
ಭಗಣಂ - (ಚಂದ್ರಂ - ಚಂದ್ರಮ s । ।
ನಗಣಂ (ಸ್ವರ್ಗಂ) - ತ್ರಿದಿವ । । ।

ಮಾತ್ರಾಗಣ ಭೇದ ನಿರೂಪಣಂ

ನಿರುಪಮ ಮಾತ್ರಾಸಂಖ್ಯಾ ।
ಪರಿಮಿತಿ ಸಮನಾಗಿ ಬರೆ ಕಳಾಗಣಮಕ್ಕುಂ ।
ಪರಿಕಿಸೆ ರಸ ಶರ ಶರನಿಧಿ ।
ಪುರ ಕರ ಮಾತ್ರಾಗಣಂ ಪ್ರಚಾರದೊಳಿರ್ಕುಂ ॥ ೨೩ ॥

ಚಂಚಲಿಸದೆ ಗಣದೊಳ್ಷ ।
ಟ್ಪಂಚ ಚತುಸ್ತ್ರಿ ದ್ವಿ ಮಾತ್ರೆಗಳ್ ನೆರೆಯಲೊಡಂ ।
ಮಿಂಚುವ "ಟಠಡಢಣಾಖ್ಯೆಯು ।
ಸಂಚಿತ "ಷಪಚತದ" ಸಂಜ್ಞೆಯುಂ ಪಡೆದೆಸೆಗುಂ ॥ ೨೪ ॥

ಟಗಣ ಪ್ರಸ್ತಾರಂ

ಗೌರೀಶಂ (ಮಗಣಂ) s s s
ಮೃಗಲಕ್ಷ್ಮಂ (ಸಗಂ) I I s s
ದಿವಾಕರಂ (ಜಗಂ) I s I s
ವಜ್ರಧರಂ (ಭಗಂ) s I I s
ಧರಣಿಧರಂ (ನಲಗಂ) I I I I s
ಬಲಿಧ್ವಂಸಿ (ಯಲಂ) I s s I
ವಾರಿಜಾತ (ರಲಂ) s I s I
ಕಮಲಯೋನಿ (ನಗಲಂ) I I I s I
ಶೂರಾಗ್ರಣಿ (ತಲಂ) s s I I
ಶರಸಂಭವ (ಸಲಲಂ) I I s I I
ಭಕೂಟಮಣಿ (ಜಲಲಂ) I s I I I
ಧರ್ಮನಿಯಮಿ (ಭಲಲಂ) s I I I I
ಬಹುಧನಪತಿ (ನನಗಣಂ I I I I I I

ಕಗಣ ಪ್ರಸ್ತಾರಂ

ಗಜೇಂದ್ರಂ(ಯಗಣಂ) । s s
ಪಕ್ಷಿಪಂ (ರಗಣಂ) s । s
ಘನಧನುಸ್ (ಸಗಂ) । । । s
ಹೀರಾಂಗ (ತಗಣಂ) s s ।
ವರಮೌಳಿ (ಸಲಂ) । । s ।
ಸುಮಾವಳಿ (ಜಲಂ) । s । ।
ಸರ್ಪತತಿ (ಭಲಂ) s । । ।
ಪ್ರಖರಶಿಖಿ (ನಲಲಂ) । । । । ।

ಡಗಣ ಪ್ರಸ್ತಾರಂ

ಕರ್ಣಂ (ಗಗಂ) s s
ಸುಕರಂ (ಸಗಣಂ) । । s
ನರೇಂದ್ರ (ಜಗಣಂ) । s ।
ಶ್ರೀವಸು (ಭಗಣಂ) s । ।
ದ್ವಿಜಮಣಿ (ನಲಂ) । । । ।

ಢಗಣ ಪ್ರಸ್ತಾರಂ

ಧ್ವಜಂ (ಲಗಂ) । s
ತಾಲ (ಗಲಂ) s ।
ಲಲನೆ (ನಗಣಂ) । । ।

ಣಗಣ ಪ್ರಸ್ತಾರಂ

ಶ್ರೀ (ಗಂ)
ಪ್ರಿಯೆ (ಲಲಂ) । ।

ಅಂಶಿಗಣಭೇದ ನಿರೂಪಣಂ

ಸುಮಧುರ ಲಯದಿಂದೊಪ್ಪುವ ।
ವಿಮಲಿನ ಕರ್ಣಾಟ ವಿಷಯ ಜಾತಿವ್ರಜದೊಳ್ ।
ಕಮಲಜ ವಿಷ್ಣುಮಹೇಶ್ವರ ।
ಸಮಾಹ್ವಯಾಂಶಿಗಣ ಸಮಿತಿ ರಂಜಿಸುತಿರ್ಕುಂ ॥ ೨೩ ॥

ಚತುರಾನನ ಹರಿ ಗಿರಿಜಾ ।
ಪತಿವೆಸರೊಂತ ಗಣಸಂಕುಲಂ ಕೆಲವೆಡೆಯೊಳ್ ।
ರತಿ ಮನ್ಮಥಶರ ಮೆಂಬಂ ।
ಕಿತನಾಮದೆ ರಲವಮೆಂಬ ಸಂಜ್ಞೆಯೊಳೆಸೆಗುಂ ॥ ೨೪ ॥

ಶರನಿಧಿ ವಸು ನೃಪ ಸಂಖ್ಯೆಯು ।
ಸರಸಿಜ ಭವ ವಿಷ್ಣು ಮೃಡ ಗಣಂ ದ್ವಿತ್ರಿಚತು ।
ರ್ಗುರು ವರ್ಣ ಪ್ರಸ್ತಾರದೆ ।
ಕರಮುದಯಿಸುಗುಂ ವಿಶಿಷ್ಟ ಪದ್ಧತಿಯಿಂದಂ ॥ ೨೫ ॥

ಪರಿನಿರ್ಮಲ ಗಣದಾದಿಯು ।
ಗುರುವಿಂಗುಭಯು ಲಘು ಸಲೆ ವಿಕಲ್ಪದೆ ನಿಲ್ಗುಂ ।
ಪರದ ಗುರುವಿಂಗೆ ಲಘುಯುಗ ।
ವಿರದೆಂದುಂ ವರ್ಣಮೊಂದೆ ಲೆಕ್ಕಿಸೆ ಬರ್ಕುಂ ॥ ೨೬ ॥

ಬ್ರಹ್ಮಗಣ ಪ್ರಸ್ತಾರಂ

ಬ್ರಹ್ಮಂ	S S
ದ್ರುಹಿಣಂ	I I S
ಧಾತೃ	S I
ವಿಧಿಯೆ	I I I

ವಿಷ್ಣುಗಣ ಪ್ರಸ್ತಾರಂ

ಗೋವಿಂದಂ	s s s
ಕಮಲಾಕ್ಷಂ	I I s s
ಕೇಶವಂ	s I s
ಮುರಹರಂ	I I I s
ದೈತ್ಯಾರಿ	s s I
ವನಮಾಲಿ	I I s I
ಶ್ರೀಪತಿ	s I I
ಮಧುರಿಪು	I I I I

ರುದ್ರಗಣ ಪ್ರಸ್ತಾರಂ

ಗೌರೀಕಾಂತಂ	s s s s
ಪ್ರಮಥಾಧೀಶಂ	I I s s s
ಚಂದ್ರಚೂಡಂ	s I s s
ಭುಜಗಭೂಷಂ	I I I s s
ಮೃತ್ಯುಂಜಯಂ	s s I s
ವೃಷಭಧ್ವಜಂ	I I s I s
ಪಂಚಮುಖಂ	s I I s
ಗಿರಿನಿಲಯಂ	I I I I s
ಗಂಗಾಧಾರಿ	s s s I
ತ್ರಿಪುರಧ್ವಂಸಿ	I I s s I
ಶೂಲಪಾಣಿ	s I s I
ಮಖವಿಭೇದಿ	I I I s I
ದೇವಾಗ್ರಣಿ	s s I I
ತ್ರಿಜಗತ್ಪತಿ	I I s I I
ಭೂತಪತಿ	s I I I
ಮದನರಿಪು	I I I I I

ಸಂಖ್ಯಾ ಸಂಜ್ಞಾ ವಿಧಿ

ಉಚಿತ ವಿಧಿಗನುಸರಿಸಿ ಹಿಮ ।
ರುಚಿ ಭುಜ ಪುರ ಯುಗ ಶರಾದಿ ಸಂಜ್ಞಾ ಪ್ರಚಯಂ ।
ಪ್ರಚುರತೆಯಿಂದೇಕದ್ವಿ ।
ತ್ರಿಚತುಃಪಂಚಾದಿ ಸಂಖ್ಯೆಯಂ ಸೂಚಿಪುಗುಂ ॥ ೨೭ ॥

ಒಂದು=ಚಂದ್ರಂ
ಎರಡು=ಭುಜಂ-ನೇತ್ರಂ-ಪಕ್ಷಂ
ಮೂಱು=ಪುರಂ-ಅಗ್ನಿ
ನಾಲ್ಕು=ವೇದಂ-ಸಮುದ್ರಂ-ಯುಗಂ-ಗತಿ
ಐದು=ಬಾಣಂ-ಭೂತಂ-ಇಂದ್ರಿಯಂ-ವಿಷಯಂ
ಆಱು=ಶಾಸ್ತ್ರಂ-ರಸಂ-ಋತು
ಏೞು=ಪರ್ವತಂ-ಅಶ್ವಂ-ಮುನಿ-ಸ್ವರಂ
ಎಂಟು=ಗಜಂ-ಸರ್ಪಂ-ವಸು
ಒಂಬತ್ತು=ನಿಧಿ-ರತ್ನಂ-ಗ್ರಹಂ-ರಂಧ್ರಂ-ನಂದಂ
ಪತ್ತು=ದಿಕ್ಕು
ಪನ್ನೊಂದು= ರುದ್ರಂ
ಪನ್ನೆರಡು= ಆದಿತ್ಯಂ
ಪದಿಮೂಱು= ವಿಶ್ವಂ
ಪದಿನಾಲ್ಕು= ಮನು
ಪದಿನೈದು= ತಿಥಿ
ಪದಿನಾಱು= ರಾಜಂ

ಯತಿ ವಿಚಾರಂ

ಅತಿಶಯ ಪದ್ಯದ ಪದದೊಳ್ ।
ಶ್ರುತಿಹಿತ ಮೆನಿಪಂತೆ ಬರ್ಪ ನಿಯತ ಸ್ಥಾನ ।

ಸ್ಥಿತ ಸತ್ವದ ವಿಚ್ಛೇದಂ ।
ಯತಿ ಸಂಜ್ಞೆಯು ತಾಳ್ಗು ಮೆಣಿಸೆ ಛಂದೋವಿಧಿಯೊಳ್ ॥ ೨೮ ॥

ಸದಮಳ ಯತಿ ಪದ್ಯಾಂಘ್ರಿಯ ।
ತುದಿಗೊಗೆಗುಂ ವಿಹಿತ ಸೂಚಿತ ಸ್ಥಾನಕೆ ತಾ ।
ನುದಯಿಸುಗುಂ ಪದ್ಯಾರ್ಧದ ।
ಪದಂಗಳಂತ್ಯಕೆ ವಿಶೇಷ ವಿಧಿಯಿಂದಿರ್ಕುಂ ॥ ೨೯ ॥

ವಿಮಳಾವ್ಯಕ್ತ ವಿಭಕ್ತಿಯ ।
ಸಮಾಸ ಪದದಾದಿ ಶಬ್ದದಂತ್ಯಾಕ್ಷರದೊಳ್ ।
ಸಮುಭರ ವಿಭಾಗದೊಳ್ ವಿ ।
ಶ್ರಮಣಂ ಪೊರ್ದದೊಡೆ ದೋಷ ಮೆನಿಸದು ಸಿದ್ಧಂ ॥ ೩೦ ॥

ಯತಿಯುಂ ಪದ್ಯದೆ ಪರಿನಿ ।
ಶ್ಚಿತ ವಿಧಿಯಿಂದಂಘ್ರಿಯಂತ್ಯಕಿರಿಸದೆ ಕವಿಗಳ್ ।
ಸತತಂ ದ್ವಿತೀಯ ವರ್ಣಾ ।
ಶ್ರಿತ ಖಂಡಪ್ರಾಸವಿರಿಸುವರ್ ಕನ್ನಡದೊಳ್ ॥ ೩೧ ॥

ಪ್ರಾಸ ವಿಚಾರಂ

ಆದಿಪ್ರಾಸಂ

ಪ್ರತಿಪದದೆಡೆಯೊಳ್ ಪ್ರಥಮ ।
ದ್ವಿತೀಯ ವಿದಿತ ಸ್ವರಾಕ್ಷರಂಗಳ ನಡುವೊಳ್ ।
ವಿತತ ಸಮಾನ ವ್ಯಂಜನ ।
ಮತಿಶಯದಿಂದೆಸೆಯೆ ಬರ್ಕುಮಾದಿ ಪ್ರಾಸಂ ॥ ೩೨ ॥

ಸರ್ವಾಂಘ್ರಿಯೊಳಂ ಪ್ರಾಸದ ।
ಪೂರ್ವದೆ ಲಘುವೊಪ್ಪೆ ಲಘುವೆ ನೆಲಸುಗೆ ನಿಯತಂ ॥
ಗುರ್ವಕ್ಷರ ಮಾದಿಗೆ ಬರೆ ।
ನಿರ್ವಾದದೆ ತದನುರೂಪ ಗುರುವಿರ್ಕೆಂದುಂ ॥ ೩೩ ॥

ಆದಿಪ್ರಾಸ ಭೇದಂ

ನಿರವದ್ಯ ಹೃದ್ಯ ಪದ್ಯದ ।
ಚರಣದೆ ಸಲೆ ತಪ್ಪದೊಪ್ಪುವಾದಿಪ್ರಾಸಂ ।
ಹರಿ ಗಜ ವೃಷಭಾಜ ತುರಗ ।
ಶರಭ ಪ್ರಾಸಂಗಳೆಂಬ ಭೇದವ ತಳೆಗುಂ ॥ ೩೪ ॥

ಸಿಂಹ ಪ್ರಾಸಂ

ವಿದಿತ ಸುಪದ್ಯದೊಳೆಲ್ಲಾ ।
ಪದಂಗಳೊಳ್ ಪ್ರಾಸವಾಗಿ ನಿಲ್ವಕ್ಕರದಿಂ ।
ಮೊದಲೊಳ್ ಹ್ರಸ್ವಾಕ್ಷರಮೊಡ ।
ನುದಯಿಸೆ ಸಂಜನಿಕುಮೆಸೆವ ಸಿಂಹ ಪ್ರಾಸಂ ॥ ೩೫ ॥

ಗಜ ಪ್ರಾಸಂ

ಭೇದವ ಪೊರ್ದದೆ ಪದ್ಯದ ।
ಪಾದದೆ ಸುಪ್ರಾಸ ವರ್ಣದಿಂ ಮೊದಲೊಳ್ ತಾ ।
ನಾದಿಗೆ ದೀರ್ಘಾಕ್ಷರಮಿಂ ।
ಬಾದೊಡೆ ಸಂಭವಿಕುಮುಚಿತ ಹಸ್ತಿ ಪ್ರಾಸಂ ॥ ೩೬ ॥

ವೃಷಭ ಪ್ರಾಸಂ

ಸುಂದರ ಪದ್ಯದೆ ಸದ್ವಿಧಿ ।
ಯಿಂದಂ ಪ್ರಾಸಾಕ್ಷರಕ್ಕೆ ಪೂರ್ವದೊಳೆಂದುಂ ।
ಬಿಂದು ಸಮಸ್ತಾಂಘ್ರಿಗಳೊಳ್ ।
ನಿಂದೊಡೆ ಮೂಡುವುದು ವಿಶದ ವೃಷಭ ಪ್ರಾಸಂ ॥ ೩೭ ॥

ಅಜ ಪ್ರಾಸಂ

ಅಃ ಪದ್ಯಕೆ ಚೆಲ್ವೆನೆ ಸುವ ।
ಚಃ ಪದದೊಳ್ ಪ್ರಾಸಮೆಸೆಯೆ ಪೂರ್ವಾಕ್ಷರಕಂ ।
ತಃ ಪದದೆ ವಿಸರ್ಗಂ ಛಂ ।
ದಃ ಪದ್ಧತಿಯೊಳಿರೆ ಪುಟ್ಟುವುದಜ ಪ್ರಾಸಂ ॥ ೩೮ ॥

ಅಶ್ವ ಪ್ರಾಸಂ

ಉತ್ತುಂಗ ಪದ್ಯದಂಘ್ರಿಯೊ ।
ಳುತ್ತಮ ಸುಪ್ರಾಸಕಾದಿ ವರ್ಣದ ಪರದೊಳ್ ।
ಮತ್ತ ಸಜಾತಿ ವ್ಯಂಜನ ।
ದೊತ್ತಕ್ಕರ ವೊಗೆದೊಡಕ್ಕು ಮಶ್ವಪ್ರಾಸಂ ॥ ೩೯ ॥

ಶರಭ ಪ್ರಾಸಂ

ಉಕ್ತಿ ವಿಶೇಷಿತ ಪದ್ಯದೆ ।
ಯುಕ್ತ ಪ್ರಾಸಕೆ ವಿಸರ್ಗ ಬಿಂದುವಿರದೆ ಸು ।
ವ್ಯಕ್ತ ವಿಜಾತಿಯ ವಗಸಂ ।
ಯುಕ್ತಾಕ್ಷರಮಿರ್ದೊಡಮಲ ಶರಭ ಪ್ರಾಸಂ ॥ ೪೦ ॥

ಪ್ರಾಸಾಭಾಸ ವಿಚಾರಂ

ಮಿತ್ರಪ್ರಾಸಂ

ವಿಧಿಯೊಳ್ ವ್ಯತ್ಯಯವೊಂದಿತೆ ।
ವಿದಿತಾಲ್ಪಪ್ರಾಣಮುಂ ಮಹಾಪ್ರಾಣಮುಮಿ ।
ವಿಧದಿಂ ಪ್ರಾಸ ಸ್ಥಾನದೊ ।
ಳೊದವಿದೊಡುದಯಿಪುದು ಮಿತ್ರ ವರ್ಣ ಪ್ರಾಸಂ ॥ ೪೧ ॥

ವರ್ಗಪ್ರಾಸಂ

ಪ್ರಕಟ ಪ್ರಾಸದೆ ವರ್ಗೀ ।
ಯ ಖಂಡದನುನಾಸಿಕಂಗಳೊಗೆಯುದೆ ಮೊದಲೊಳ್ ।
ಸೊಗಯಿಪ ವರ್ಗಾಕ್ಷರಮಿರೆ ।
ಸುಘಟನೆಯಿಂದೊಗೆಗುಮೊಡನೆ ವರ್ಗ ಪ್ರಾಸಂ ॥ ೪೨ ॥

ಸಮೀಪ ಪ್ರಾಸಂ

ವಿಶದ ಪದಾಸ್ಪದ ಪದ್ಯದೆ ।
ಶಷಸಂಗಳೆನಿಪ ಸಮೀಪ ವರ್ಣ ತ್ರಿತಯಂ ।
ಪಸರಿಸುತಾದಿ ಪ್ರಾಸ ।
ಕ್ಕೆಸೆದೊಡೆ ಸಂಭವಿಸುಗುಂ ಸಮೀಪ ಪ್ರಾಸಂ ॥ ೪೩ ॥

ಶಾಂತ ಪ್ರಾಸಂ

ಪದ್ಯದೊಳುಭಯ ವ್ಯಂಜನ ।
ಶುದ್ಧ ಪ್ರಾಸದೆ ವಿಭಿನ್ನ ವರ್ಣಂ ಪರದೊಳ್ ।
ಪೆದ್ವರ್ಣಂ ಮೊದಲೊಳ್ ಬೆರೆ ।
ಪುದ್ಭವಿಸಿದೊಡಕ್ಕುಮೊಂದಿ ಶಾಂತ ಪ್ರಾಸಂ ॥ ೪೪ ॥

ಉಪಶಾಂತ ಪ್ರಾಸಂ

ಒಪ್ಪುವ ಸಂಯುಕ್ತಾಕ್ಷರ ।
ವಿರ್ಪ ಪ್ರಾಸದೆ ವಿಭಿನ್ನ ಸದ್ವ್ಯಂಜನಮುಂ ।
ತಪ್ಪದೆ ಸಮಾನ ವರ್ಣಮು ।
ಮಪ್ಪಿದೊಡಕ್ಕುಮುಪಶಾಂತ ನಾಮ ಪ್ರಾಸಂ ॥ ೪೫ ॥

ವಿಭಿನ್ನಪ್ರಾಸಂ

ಉತ್ಕಟ ವರ್ಣ ಪ್ರಾಸದೆ ।
ನಿತ್ಯೈಕ ವ್ಯಂಜನಂ ವಿಜಾತಿಯು ಘನಸಂ ।
ಯುಕ್ತಾಕ್ಷರದೊಳ್ ಸ್ಥಾನ ।
ವ್ಯತ್ಯಯವೊಂದಲೊಗೆಗುಂ ವಿಭಿನ್ನ ಪ್ರಾಸಂ ॥ ೪೬ ॥

ಅಭೇದ ಪ್ರಾಸಂ

ವಿಲಸತ್ಪ್ರಾಸ ಸ್ಥಾನದೆ ।
ಜಟಿಳಾಕ್ಷರಮೊಪ್ಪೆ ಜಟಿಲಮಿರೆ ಲಳವರ್ಣಂ ।
ನೆಲಸೆ ರಜಿಂ ಮೂಡೆ ನಣಂ ।
ಮೊಳೆಯೆ ವಿರಾಜಿಪ್ಪದಭೇದವರ್ಣ ಪ್ರಾಸಂ ॥ ೪೭ ॥

ಅನುನಾಸಿಕ ಪ್ರಾಸಂ

ಸಂಗತ ಚಾರು ಪ್ರಾಸದೆ ।
ಪಿಂಗದನುಸ್ವಾರಮುಂ ಸದನುನಾಸಿಕಮುಂ ।
ಸಂಗಡಮೆಡೆಯೊಳ್ ನಿಂದೊಡೆ ।
ಕಣ್ಗಿಂಬಕ್ಕು ಮನುನಾಸಿಕಾಖ್ಯ ಪ್ರಾಸಂ ॥ ೪೮ ॥

ಅಂತ್ಯಪ್ರಾಸ ವಿಚಾರಂ

ಪದದೊಳ್ ವಾಕ್ಯ ವಿಳಾಸಂ ।
ಪುದಿದೆಸೆವಂದದೆ ಸಮಾನ ವರ್ಣವಿಭಾಸಂ ।
ವಿದಿತ ಸ್ವರದ ವಿಕಾಸಂ ।
ತುದಿಯೊಳ್ ಸಮನಿರ್ದೊಡಕ್ಕುಮಂತ್ಯ ಪ್ರಾಸಂ ॥ ೪೮ ॥

ಉಭಯಪದಾಂತ್ಯ ಪ್ರಾಸಂ

ವರ ವಿಷಮಾಂಘ್ರಿಯ ತುದಿಯೊಳ್ ।
ನಿರುಪಮ ಸಮಪದದ ಕಡೆಯೊಳೊಂದೆ ಸುವಿಧಿಯೊಳ್ ।
ಸುರುಚಿರ ವರ್ಣ ನ್ಯಾಸಂ ।
ಬರೆಮೂಡುಗುಮುಭಯ ಪದ ಗತಾಂತ್ಯ ಪ್ರಾಸಂ ॥ ೫೦ ॥

ಸಮಪದಾಂತ್ಯ ಪ್ರಾಸಂ

ಸಮ ಪಾದಾಂತ್ಯದೆ ಮಾತ್ರಂ ।
ಸಮರೂಪಾನ್ವಿತ ವಿಶುದ್ಧ ವರ್ಣೋದ್ಭಾಸಂ ।
ಸಮುಚಿತ ವಿಧಿಯಿಂದಿರ್ದೊಡೆ ।
ಸಮನಿಸುಗುಂ ಚೆಲ್ವ ಸಮಪದಾಂತ್ಯ ಪ್ರಾಸಂ ॥ ೫೧ ॥

ವಿಷಮಪದಾಂತ್ಯ ಪ್ರಾಸಂ

ಅಸಮಾಂಘ್ರಿಗಳೊಳ್ ಹಿತದಿಂ ।
ಲಸದೇಕ ವಿಧಾಕ್ಷರಂಗಳಿಂದುಂ ಕೊನೆಯೊಳ್
ಬೆಸೆದೊಡೆ ಸಲೆ ಸುವಿಹಿತದಿಂ ।
ದೆಸೆಗುಂ ವರ ವಿಷಮ ಪದ ಗತಾಂತ್ಯ ಪ್ರಾಸಂ ॥ ೫೨ ॥

ಪರ್ಯಾಯಪದಾಂತ್ಯ ಪ್ರಾಸಂ

ಸದಮಳ ವಿಷಮ ಪದಂಗಳ ।
ತುದಿಗೆ ಸಮಾಂಘ್ರಿಗಳ ಕಡೆಗೆ ನಿಯತ ಪ್ರಾಸಂ ।
ಪುದಿದೊಡೆ ಬರ್ಕುಂ ಮಂಗಳ ।
ಪದದಿಂ ಪರ್ಯಾಯ ಪದ ಗತಾಂತ್ಯ ಪ್ರಾಸಂ ॥ ೫೩ ॥

ಸಂವೃತಾಂತ್ಯ ಪ್ರಾಸಂ

ಸುಷಮಾಕ್ಷರ ವಿನ್ಯಾಸಂ ।
ವಿಷಮ ಸಮಾಂಘ್ರಿಗೆ ಸಮಾಸಮಂಘ್ರಿಗೆ ಕೊನೆಯೊಳ್ ॥
ವಿಷಮದೆ ಮೂಡಿದೊಡೆಣೆಯೊಳ್ ।
ವಿಷಮ ಸಮಾಂಘ್ರಿ ಗತ ಸಂವೃತಾಂತ್ಯ ಪ್ರಾಸಂ. ॥ ೫೪ ॥

ವಿಶಿಷ್ಟಪದಾಂತ್ಯ ಪ್ರಾಸಂ

ಸುಮಧುರ ವರ್ಣೋಲ್ಲಾಸಂ ।
ಸಮಾನದಿಂ ಕೆಲವು ಚರಣದಂತ್ಯಕೆ ನಿಯತ ।
ಕ್ರಮಮಂ ಪೊರ್ದದೆ ನಿಂದಿರೆ ।
ಸಮನಿಪುದು ವಿಶಿಷ್ಟ ಪದಗತಾಂತ್ಯ ಪ್ರಾಸಂ ॥ ೫೫ ॥

ವಳಿ ವಿಚಾರಂ

ಮೃದುಪದ ರಂಜಿತ ಗೀತದೆ ।
ಪದದಾದಿಗೆ ಮಧ್ಯ ಯತಿಯು ಪರಕೆ ಬಟಾಕ್ಕಂ ।

ಪದಮುಳ ಸಮಾನ ವರ್ಣಂ ।
ಪದೆದಿರೆ ವಳಿ ಸಂಜ್ಞೆಯಾಂತು ಪರಿಶೋಭಿಸುಗುಂ ॥ ೫೬ ॥

ಸ್ವರ ಮೈತ್ರಿವಳಿ

ಸ್ವರದೆ ಅಆಐಔನಿಲೆ ।
ಇರದೊಡನೆ ಇಈಋೠಎಏಯುದಯಿಸೆತಾಂ ।
ಪರಿಕಿಸೆ ಉಊಒಓಬರೆ ।
ಉರು ಸುಸ್ವರ ಮೈತ್ರಿ ವಳಿಯೆ ಓಜೆಯೊಳಕ್ಕುಂ ॥ ೫೭ ॥

ಸ್ವರ ಪ್ರಧಾನವಳಿ

ಚರಣಾದಿ ಮಧ್ಯದೊಳ್ ಸ್ವರ ।
ಮುರು ಸದ್ವ್ಯಂಜನದೆ ಸಂಧಿಯೊಂದಿ ನಿಲಲೊಡಂ ।
ಸ್ವರ ಸುಪ್ರಧಾನ ವಳಿಕುಂ ।
ದಿರದಕ್ಷರ ಮೈತ್ರಿಯಿಂದಮೆಸೆಗುಂ ನಿಪದಂ ॥ ೫೮ ॥

ಏಕವಳಿ

ಪದದೊಳ್ ಮೊದಲೊಳ್ ಮೂಡಿದ ।
ವಿಧಿತಾಕ್ಷರಮೊಂದುಮೆಡೆಗೆ ವಿರತಿಯು ಬೞಿಕಂ ।
ಪುದುಗಿದೊಡತಿಶಯ ವಿಧಿಯಿಂ ।
ಪದಪಿಂದೇಕವಳಿ ವೆಸಱಪಡೆಗುಂ ಸಿದ್ಧಂ ॥ ೫೯ ॥

ವರ್ಗವಳಿ

ಅನುನಾಸಿಕ ವರ್ಣೇತರ ।
ಘನ ವರ್ಗಾಕ್ಷರಮುಚಿತ ವಿಕಲ್ಪ ಕ್ರಮದಿಂ ।
ವಿನುತಾಂಘ್ರಿಯಾದಿ ಮಧ್ಯಕೆ ।
ಜನಿಯಿಸೆ ವರ್ಗವಳಿಯೆನಿಸಿ ಛಂದದೊಳೆಸೆಗುಂ ॥ ೬೦ ॥

ಸರಸವಳಿ

ಸುರುಚಿರ ಪದಾದಿ ಮಧ್ಯಕೆ ।
ಸರಸದೆ ಸಲೆ ಅಯುಹವೊಂದೆ ಚಛಜಝಃಶಷಸಂ ।
ಬರೆ ನಣವೊಪ್ಪಿರೆ ಸುಮನೋ ।
ಹರ ವರ್ಣದ ಸರಸವಳಿ ನಿಯತಿಯಿಂದೆಸೆಗುಂ ॥ ೬೧ ॥

ಸಂಯುಕ್ತಾಕ್ಷರವಳಿ

ನಯದಿಂ ಪದಾದಿ ಗೆಡೆಗಾ ।
ಶ್ರಯಿಸುತೆ ಸಂಯುಕ್ತ ವರ್ಣ ಶಬ್ದಂ ಮತ್ತಂ
ನಿಯುತ ನಿಜ ವರ್ಣವೊಂದ ।
ನ್ವಯಿಸಿರೆ ಸಂಯುಕ್ತ ವರ್ಣ ವಳಿಯೆಂದೆನಿಕುಂ ॥ ೬೨

ಅಭೇದವಳಿ

ತೊಳಗುವ "ರಜ"ಮುಂ "ವಬ" ಮುಂ ।
"ಲಳ"ಮುಂ"ಲಡ"ಮುಂ ವಿನಿಶ್ಚಳತೆಯಿಂ ಭೇದಂ ।
ದಳೆಯದೆ ಪದಾದಿ ಮಧ್ಯಕೆ ।
ಬಳಕೆಯೊಳಿರೆ ತಾನಭೇದ ವಳಿಯೆಂದೆನಿಕುಂ ॥ ೬೩ ॥

ಅನುನಾಸಿಕವಳಿ

ಭಾಸುರ ಪದ್ಯದೊಳೆಂತುಂ ।
ಮಾಸದೆ ಪಾದಾದಿಗೆಡೆಗೆ ಙಞಣನಮಂವಿ ।
ನ್ಯಾಸಂಗೊಂಡಿರೆ ತಾನನು ।
ನಾಸಿಕ ವಳಿಯೆಂಬ ಸತ್ಸಮಾಖ್ಯೆಯ ತಳೆಗುಂ ॥ ೬೪ ॥

ಬಿಂದುವಳಿ

ಪರಮಾಂಘ್ರಿಯಾದಿಗೆಡೆಗಂ ।
ತರಿಸದೆ ಬಿಂದುವಿನ ಪರದ ನಾಲ್ಕು ಸುವರ್ಗಾ ।

ಕ್ಷರಮುದಱಿಸುನಾಸಿಕಮೊಂ ।
ದಿರೆ ನೆಱೆ ಬಿಂದುವಳಿ ನೋಡೆ ನಿಶ್ಚಯಮಕ್ಕುಂ ॥ ೬೫ ॥

ಮಕಾರವಳಿ

ವರ ಬಿಂದುವಿನಿದಿರೊಳ್ ತಾಂ ।
ಯರಲವ ಶಷಸಹದೊಳೊಂದು ಮತ್ತೆ ಮವರ್ಣಂ ।
ಚರಣಾದಿ ಮಧ್ಯದೊಳ್ ಸಂ ।
ಪರಿಸಿ ನಿಲೆ ಮಕಾರವಳಿ ಸಮಾಪ್ತ್ಯಮಕ್ಕುಂ ॥ ೬೬ ॥

ದ್ವಿತೀಯಾಧ್ಯಾಯಂ

ಉತ್ತಮ ಸುಮನೋಹರ ಸಮ ।
ವೃತ್ತ ಕದಂಬಕದ ಲಕ್ಷಣವ ವರಮಾಲಾ ।
ವೃತ್ತ ವ್ರಾತದ ಬಗೆಯುಂ ।
ಮತ್ತಂ ದಂಡಕದ ರೀತಿಯುಂ ಬಿತ್ತರಿಪೆಂ ॥ ೧ ॥

ಸಮ ವೃತ್ತ ಪ್ರಕರಣಂ

ವಿಮಳಾಕ್ಷರ ಗಣ ನಿಯಮಿತ ।
ಸಮವೃತ್ತಂಗಳ ಚತುಶ್ಚರಣದೊಳ್ ನಿಯತ ।
ಕ್ರಮದಿಂ ಗುರುಲಘು ಸಂಜ್ಞೆಯ ।
ಸಮಾನ ವರ್ಣಂ ಸಮುದ್ಭವಿಸುಗುಂ ಸಿದ್ಧಂ ॥ ೨ ॥

ಉಕ್ತಾ ಸಂಜ್ಞೆಯ ಛಂದೋವರ್ಗದ ೨ ವೃತ್ತಂಗಳೊಳ್–

ಶ್ರೀ ವೃತ್ತಂ – ಗ
ಶ್ರೀ ।
ಕಂ ।
ಠಂ ।
ಶ್ರೀ । ॥ ೩ ॥

ಅತ್ಯುಕ್ತಾ ಸಂಜ್ಞೆಯ ಛಂದೋವರ್ಗದ ೪ ವೃತ್ತಂಗಳೊಳ್

ಗರ್ವವೃತ್ತಂ – ಗಗ

ಶರ್ವಂ ।
ಶರ್ವಂ ।
ಪರ್ವಲ್ ।
ಗರ್ವಂ ॥ ೪ ॥

ಮಧ್ಯಾ ಸಂಜ್ಞೆಯ ಛಂದೋವರ್ಗದ ೮ ವೃತ್ತಂಗಳೊಳ್

ಪಾವನ ವೃತ್ತಂ – ರ

ಪಾವಕಂ ।
ಕೇವಲಂ ।
ತೀವೆತಾಂ ।
ಪಾವನಂ ॥ ೫ ॥

ಪ್ರವರ ವೃತ್ತಂ – ಸ

ಪವನಂ ।
ತವೆಸಂ ।
ಭವಿಸಲ್ ।
ಪ್ರವರಂ ॥ ೬ ॥

ಪ್ರತಿಷ್ಠಾ ಸಂಜ್ಞೆಯ ಛಂದೋವರ್ಗದ ೧೬ ವೃತ್ತಂಗಳೊಳ್

ಕನ್ಯಾವೃತ್ತಂ - ಮಗ

ಭೂಮೀಶಾನರ್ ।
ತಾಮಿರ್ದಂದು ।
ದ್ದಾ ಮಂಕನ್ಯಾ ।
ನಾಮಂವೃತ್ತಂ ॥ ೭ ॥

ಪುಷ್ಪವೃತ್ತಂ - ರಗ

ವೀತಿಹೋತ್ರಂ ।
ಭೂತನಾಥಂ ।
ರೀತಿಗೊಂದಲ್ ।
ಖ್ಯಾತಪುಷ್ಪಂ ॥ ೮ ॥

ಮೃಗನೇತ್ರವೃತ್ತಂ-ಸಗ

ಮೃಗವಾಹಂ ।
ನಗಜೇಶಂ ।
ಬಿಗಿದಾಗಳ್
ಮೃಗನೇತ್ರಂ ॥೯॥

ಜನೋದಯವೃತ್ತಂ – ಜಗ

ದಿನಾಧಿಪಂ ।
ಪಿನಾಕಿತಾಂ ।
ಮನಂಗೊಳಲ್ ।
ಜನೋದಯಂ ॥ ೧೦ ॥

ಸುಂದರೀವೃತ್ತಂ-ಸಿಗ

ಇಂದುಮೃಡರ್ ।
ಬಂದೊಡೆ ತಾಂ ।
ಸುಂದರಿಯೊ ।
ಳ್ಪಿಂದೆಸೆಗುಂ ॥೧೧॥

ಸುರತರು ವೃತ್ತಂ-ನಲ

ಸುರಪತಿ
ಮುರರಿಪು ।
ನೆರೆದಿರೆ ।
ಸುರತರು ॥ ೧೨ ॥

ಸುಪ್ರತಿಷ್ಠಾ ಸಂಜ್ಞೆಯ ಛಂದೋವರ್ಗದ ೩೨ ವೃತ್ತಂಗಳೊಳ್

ನಂದಕ ವೃತ್ತಂ – ರಲಗ

ನಂದ ವಹ್ನಿ ಗೋ ।
ವಿಂದ ಶಂಕರರ್ ।
ನಿಂದೊಡೊಪ್ಪುಗುಂ ।
ನಂದಕಾಹ್ವಯಂ ॥ ೧೩ ॥

ತಿಲಕ ವೃತ್ತಂ – ತಲಗ

ತಾರಾಪಥ ಕಂ ।
ಸಾರಾತಿ ಮೃಡರ್ ।
ಸೇರಿರ್ದೊಡೆನಿ ।
ಧಾರ್ರಂ ತಿಲಕಂ ॥ ೧೪ ॥

ಅನಂಗ ವೃತ್ತಂ – ಜಗಗ

ದಿನೇಶನೀಶಂ ।
ಮನೋಜ ನಾಶಂ।
ಘನಾಂಘ್ರಿಗಿರ್ದಂ ।
ದನಂಗಮಕ್ಕುಂ ॥ ೧೫ ॥

ಕಾಂಚನಮಾಲಾ ವೃತ್ತಂ - ಭಗಗ

ಸಂಚಿತ ಚಂದ್ರಂ ।
ಪಂಚಮುಖೇಶರ್ ।
ಮಿಂಚಿದೊಡಕ್ಕುಂ ।
ಕಾಂಚನಮಾಲೇ ॥ ೧೬ ॥

ಗಾಯತ್ರೀ ಸಂಜ್ಞೆಯ ಛಂದೋವರ್ಗದ ೬೪ ವೃತ್ತಂಗಳೊಳ್

ಮುಕುಳ ವೃತ್ತಂ – ಮಸ

ಉರ್ವೀಪಾಯುಗಣಂ ।
ನಿರ್ವೈಕಲ್ಯದೆ ತಾಂ ।
ಪರ್ವಿರ್ದಂದೆಸೆಗುಂ ।
ನಿರ್ವಾದಂ ಮುಕುಳಂ ॥ ೧೭ ॥

ವಿಚಿತ್ರ ವೃತ್ತಂ – ಯಯ

ಜಲಂ ಜೀವನಂ ತಾ ।
ಮಲಂಪಿಂದ ಮೆಂದುಂ ।
ನಿಲಲ್ ಸಂಭವಿಕ್ಕುಂ ।
ಸುಲಕ್ಷ್ಯಂ ವಿಚಿತ್ರಂ ॥ ೧೮ ॥

ಕುಮುದ ವೃತ್ತಂ – ಸಸ

ಶ್ವಸನಂ ಪವನಂ ।
ಲಸದಂಘ್ರಿಗೆತಾಂ ।
ಬೆಸೆದೊಂದಿರೆ ರಂ ।
ಜಿಸುಗುಂ ಕುಮುದಂ ॥ ೧೯ ॥

ಕಾಮಲತಾವೃತ್ತಂ – ಭಯ

ಸೋಮ ಸಲಿಲಂಗಳ್ ।
ತಾಮೆಸೆಯೆ ಚೆಲ್ವಿಂ ।
ಕಾಮಿತ ಸುವೃತ್ತಂ ।
ಕಾಮಲತೆಯಕ್ಕುಂ ॥ ೨೧ ॥

ಸುರಲತಾವೃತ್ತಂ – ನಯ

ಸುರ ಸಲಿಲಂಗಳ್ ।
ಚರಣದೊಳೆಂದುಂ ।
ನೆರೆದಿರೆ ವೃತ್ತಂ ।
ಸುರಲತೆಯಕ್ಕುಂ ॥ ೨೩ ॥

ತನುಮಧ್ಯಾ ವೃತ್ತಂ – ತಯ

ವ್ಯೋಮಾಂಬುಗಣಂಗಳ್ ।
ಸಾಮಿಪ್ಯದೆ ಸೇರ್ದು ।
ದ್ದಾಮಂ ತನುಮಧ್ಯಾ ।
ನಾಮಾಂಕಿತಮಕ್ಕುಂ ॥ ೨೦ ॥

ಸುಲಲಿತ ವೃತ್ತಂ – ನಮ

ಬಲರಿಪು ಕ್ಷೋಣೀ ।
ವಲಯಮೊಳ್ಪಿಂದಂ ।
ನೆಲಸೆ ರಂಜಿಕ್ಕುಂ ।
ಸುಲಲಿತಂ ವೃತ್ತಂ ॥ ೨೨ ॥

ಉಷ್ಣಿಕ್ ಸಂಜ್ಞೆಯ ಛಂದೋವರ್ಗದ ೧೨೮ ವೃತ್ತಂಗಳೊಳ್

ಚಿತ್ರಾ ವೃತ್ತಂ – ಮಭಗ

ಧಾತ್ರೀ ಚಂದ್ರ ತ್ರಿಪುರಾ ।
ಮಿತ್ರರ್ ಭಾಸ್ವತ್ಪದದೊಳ್ ।
ಸೂತ್ರಂಗೊಂಡೊಪ್ಪಲೊಡಂ ।
ಚಿತ್ರಾಖ್ಯಂ ಸಂಜನಿಕುಂ ॥ ೨೪ ॥

ಶಿಖಾವೃತ್ತಂ – ರಜಗ

ಪಾವಕಂ ಪ್ರಭಾಕರಂ ।
ಭಾವಜಾರಿಯಂಘ್ರಿಯೊಳ್ ।
ತೀವಿ ಸೇರ್ದೆ ರಂಜಿಕುಂ ।
ಪಾವನಂ ಶಿಖಾಹ್ವಯಂ ॥ ೨೫ ॥

ದೀಪ್ತಾ ವೃತ್ತಂ – ಸರಗ

ಮರುದಗ್ನಿತ್ರಿಣೇತ್ರರ್ ।
ಚರಣಕ್ಕೋಜೆಯಿಂದಂ ।
ಬೆರೆದೊಂದಿರ್ದೊಡಕ್ಕಂ ।
ವರ ದೀಪ್ತಾಖ್ಯ ವೃತ್ತಂ ॥ ೨೬ ॥

ಕೋಮಲವೃತ್ತಂ – ಸತಗ

ಪವನಂ ತಾರಾಪಥಂ ।
ಶಿವನುದ್ಯತ್ಪಾದದೊಳ್ ।
ತಪೆ ಚೆಲ್ವಿಂದೊಪ್ಪೆಸಂ ।
ಭವಿಕುಂ ತಾಂ ಕೋಮಲಂ ॥ ೨೭ ॥

ವಿಮಲಾ ವೃತ್ತಂ – ಸಜಗ

ಕ್ರಮದಿಂ ಸಮೀರಣಂ ।
ಕಮಲಾಪ್ತನೀಶ್ವರಂ ।
ವಿಮಲಾಂಘ್ರಿಗೊಂದೆತಾಂ ।
ವಿಮಲಾಖ್ಯವೊಪ್ಪುಗುಂ ॥ ೨೮ ॥

ಕುಮಾರಲಲಿತಾ ವೃತ್ತಂ – ಜಸಗ

ತಪೋರಿಪು ಸಮೀರಂ ।
ಕುಮಾರಪಿತನೆಂದುಂ ।
ಸಮಾಂಘ್ರಿಗಿರೆ ಬರ್ಕುಂ ।
ಕುಮಾರಲಲಿತಾಖ್ಯಂ ॥ ೨೯ ॥

ಅಮಳ ವೃತ್ತಂ – ಭಭಗ

ಇಂದು ಸುಧಾಕಿರಣಂ ।
ಸ್ಕಂದಪಿತಂ ಪದದೊಳ್ ।
ನಿಂದಿರೆ ಸಂಜನಿಕುಂ ।
ಕುಂದದೆ ತಾನಮಳಂ ॥ ೩೦ ॥

ವಿಶಾಲ ವೃತ್ತಂ – ನಸಗ

ಅಮರ ಪವಮಾನ ।
ಪ್ರಮಥಪತಿ ಚೆಲ್ವಿಂ ।
ದಮರೆ ಬಗೆಗೊಳ್ಗುಂ ।
ವಿಮಲಿನ ವಿಶಾಲಂ ॥ ೩೧ ॥

ದ್ರುತಗತಿ ವೃತ್ತಂ – ನನಗ

ಶತಮುಖ ನಗಭಿ ।
ದ್ರತಿಪತಿಮಥನರ್ ।
ಪ್ರತಿಪದಕಿರೆ ತಾಂ ।
ದ್ರುತಗತಿಯೆನಿಕುಂ ॥ ೩೨ ॥

ಅನುಷ್ಟುಪ್ ಸಂಜ್ಞೆಯ ಛಂದೋವರ್ಗದ ೨೫೬ ವೃತ್ತಂಗಳೊಳ್

ವಿದ್ಯುನ್ಮಾಲಾವೃತ್ತಂ – ಮಮಗಗ

ಪ್ರೋದ್ಯದ್ಧಾತ್ರೀ ಪೃಥ್ವೀ ರುದ್ರ।
ಪ್ರದ್ಯುಮ್ನಧ್ವಂಸರ್ ಸೊಂಪಿಂದಂ
ಪದ್ಮಾಂಘ್ರಿ ಸ್ಥಾನಕ್ಕಿರ್ದಾಗಳ್ ।
ವಿದ್ಯುನ್ಮಾಲಾವೃತ್ತಂ ಬರ್ಕುಂ
॥ ೩೩ ॥

ಸಮಾನಿಕಾವೃತ್ತಂ – ರಜಗಲ

ಪಾವಕಕಾ[?]ಭಾವಜಾರಿ ।
ಮಾವರರ್ ಸುರೀತಿಯಿಂದೆ ।
ಪಾವನಾಂಘ್ರಿಗೊಂದೆ ಬರ್ಕು ।
ಮಾವಗಂ ಸಮಾನಿಕಾಖ್ಯೆ ॥ ೩೪॥

ಪ್ರಮಾಣಿಕಾವೃತ್ತಂ – ಜರಲಗ

ತಪೋವಿಭೇದಿ ಪಾವಕಂ ।
ರಮೇಶನೀಶನೊಂದೆ ಸು ।
ಪ್ರಮಾಣದಿಂದೆ ಶೋಭಿಕುಂ ।
ಪ್ರಮಾಣಿಕಾಭಿಧೇಯಕಂ ॥ ೩೫ ॥

ಮಾಣವಕಕ್ರೀಡಿತಕವೃತ್ತಂ-ಭತಲಗ

ಏಣಧರ ವ್ಯೋಮ ಹರಿ ॥
ಸ್ಥಾಣುಗಳೊಂದಾಗೆ ಕರಂ ।
ಮಾಣದೆ ಸಂಶೋಭಿಸುಗುಂ ।
ಮಾಣವಕಕ್ರೀಡಿತಕಂ ॥ ೩೬ ॥

ಚಿತ್ರಪದಾವೃತ್ತಂ – ಭಭಗಗ

ಅತ್ರಿಜ ಚಂದ್ರ ಮನೋಜಾ ।
ಮಿತ್ರ ಭುಜಂಗವಿಭೂಷರ್ ॥
ಚಿತ್ರಪವಕ್ಕಿರೆ ಬರ್ಕುಂ ।
ಚಿತ್ರಪದಾಹ್ವಯವೃತ್ತಂ ॥ ೩೭ ॥

ಬೃಹತೀ ಸಂಜ್ಞೆಯ ಛಂದೋವರ್ಗದ ೫೧೨ ವೃತ್ತಂಗಳೊಳ್

ವನಜವೃತ್ತಂ – ರಸಸ

ಆಶ್ರಯಾಶ ಮರುತ್ಪವನರ್ ।
ಮಿಶ್ರದಿಂ ಘನಪಾದದೆ ತಾ ।
ಮಾಶ್ರಯಂಗೊಳೆ ಸಂಜನಿಕುಂ ।
ವಿಶ್ರುತಂ ವನಜಂ ನಿಸದಂ ॥ ೩೮ ॥

ಭದ್ರಿಕಾವೃತ್ತಂ - ರನರ

ರೌದ್ರಪಾವಕ ಸುರಾನಲರ್ ।
ಛಿದ್ರಮಾಗದೊಡನೈಕ್ಯದಿಂ ।
ಭದ್ರಪಾದಕಿರೆ ನಿರ್ಣಯಂ ।
ಭದ್ರಿಕಾಖ್ಯಮಭಿರಂಜಿಕುಂ ॥ ೩೯ ॥

ಸೌಮ್ಯವೃತ್ತಂ – ಸಸಸ

ಮರುದಾಶುಗ ಗಂಧವಹರ್ ।
ಬೆರೆದೈಕ್ಯದೆ ಸತ್ಪದದೊಳ್ ।
ನೆರೆದೊಪ್ಪಿರೆ ಸಂಭವಿಕುಂ ।
ವರ ಸೌಮ್ಯಮನಾಕುಳದಿಂ ॥ ೪೦ ॥

ಸರೋಜವೃತ್ತಂ - ಸಭಮ

ಶ್ವಸನಂ ಸಾಗರಸಂಜಾತಂ ।
ವಸುಧಾಮಂಡಲಮೊಟ್ಟಿಂಪಂ।
ಬೆಸೆದೊಂದಾಗಿರೆ ಸಿದ್ಧಂರಂ ।
ಜಿಸುಗುಂ ಚೆಲ್ವ ಸರೋಜಾಖ್ಯಂ ॥ ೪೧ ॥

ಉದಯವೃತ್ತಂ – ಭಜಸ

ಶೀತಕಿರಣಂ ದಿನಕರಂ ।
ವಾತನೊಡಗೂಡಿ ಪದದೊಳ್ ।
ರೀತಿವಿಡಿದೊಂದೆ ಮೆಱೆಗುಂ ।
ಸಾತಿಶಯವೃತ್ತಮುದಯಂ ॥೪೨॥

ಉತ್ಸುಕವೃತ್ತಂ - ಭಭರ

ಇಂದು ಸುಧಾಂಶು ಹುತಾಶನರ್ ।
ಕುಂದದೆ ನಿರ್ಮಲ ಪಾದದೊಳ್ ।
ನಿಂದೊಡೆ ರಂಜಿಸುಗುಂ ಕರಂ ।
ಸುಂದರ ಸತ್ಪದಮುತ್ಸುಕಂ ॥ ೪೩ ॥

ಭುಜಗಶಿಶುಸೃತಾವೃತ್ತಂ - ನನಮ

ನಿಜದೊಳಮರ ದೇವೋರ್ವೀ ।
ವ್ರಜಮನವರತಂ ಚೆಲ್ವಿಂ ।
ನಿಜಪದಕಿರೆ ರಂಜಿಕ್ಕುಂ ।
ಭುಜಗಶಿಶುಸೃತಾವೃತ್ತಂ ॥ ೪೪ ॥

ಪಙ್ಕ್ತಿ ಸಂಜ್ಞೆಯ ಛಂದೋವರ್ಗದ ೧೦೨೪ ವೃತ್ತಂಗಳೊಳ್

ಉದ್ಧತ ವೃತ್ತಂ - ಮಸಸಗ - ಆಕ್ಕೆಯತಿ

ಧಾತ್ರೀ ಮಾರುತ - ವಾಯು ಮನೋಜಾ ।
ಮಿತ್ರರ್ ಪಾದದೆ - ಸೇರೆ ವಿರಾಮಂ ।
ಪತ್ರಿಸ್ಥಾನಕೆ - ನಿಂದಿರೆ ಬರ್ಕುಂ ।
ನೇತ್ರಾಹ್ಲಾದಕ - ಮುದ್ಧತವೃತ್ತಂ ॥ ೪೫ ॥

ಕಲ್ಯಾಣವೃತ್ತಂ - ಮಸಜಗ - ೫ಕ್ಕೆಯತಿ

ಕ್ಷೋಣೀ ಸ್ಪರ್ಶನ - ಭಾನು ಪಾರ್ವತೀ ।
ಪ್ರಾಣೇಶರ್ ಪದಕೊಂದೆ ವಿಶ್ರಮಂ ।
ಬಾಣ ಸ್ಥಾನದೊ - ಳಿಣ್ಕೆ ಚೆಲ್ವ ಕ ।
ಲ್ಯಾಣಾಖ್ಯಂ ಘನ - ವೃತ್ತಮೊಪ್ಪುಗುಂ ॥ ೪೬ ॥

ಪಣವ ವೃತ್ತಂ _ ಮನಯಗ _ ೫ಕ್ಕೆಯತಿ

ಭೂದೇವೋದಕ - ಮದನಧ್ವಂಸರ್ ।
ಪಾದಕ್ಕೈಕ್ಯದೆ - ನಿಲೆ ವಿಶ್ರಾಮ ।
ಚ್ಛೇದಂ ಮಾರ್ಗಣ - ಕಿರೆ ರಂಜಿಕ್ಕುಂ ।
ನಾದೋತ್ಕರ್ಷದೆ - ಪಣವಂ ವೃತ್ತಂ ॥ ೪೭ ॥

ಮತ್ತಾವೃತ್ತಂ - ಮಭಸಗ - ೪ಕ್ಕೆಯತಿ

ಭೂಮಿ ಶ್ವೇತ - ದ್ಯುತಿ ಪವಮಾನಂ ।
ಕಾಮಧ್ವಂಸಂ - ಪದಕಿರೆ ಸದ್ವಿ ।
ಶ್ರಾಮಂ ವೇದ - ಕ್ಕಿರೆ ಮೆಱೆಗುಂ ಪ್ರೋ ।
ದ್ದಾಮಂ ಮತ್ತಾ - ಹ್ವಯ ಸಮವೃತ್ತಂ ॥ ೪೮ ॥

ಮೌಕ್ತಿಕವೃತ್ತಂ - ರಯಜಗ - ೫ಕ್ಕೆಯತಿ

ಚಿತ್ರಭಾನು ತೋ - ಯಾರ್ಕ ಶಂಕರರ್ ।
ಸೂತ್ರರೀತಿಯೊಳ್ - ಸೇರೆ ವಿಶ್ರಮಂ ।
ಪತ್ರಿವರ್ಣದೊಳ್ - ತೋಱೆ ಶೋಭಿಕುಂ ।
ಚಿತ್ರಸತ್ಪದಂ - ಮೌಕ್ತಿಕಾಹ್ವಯಂ ॥ ೪೯ ॥

ಮಣಿರಾಗವೃತ್ತಂ _ ರಸಸಗ-೫ಕ್ಕೆಯತಿ

ಪಾವಕಾಶುಗ - ವಾಯು ಮಹೇಶರ್ ।
ತೀವಿ ನಿಂದಿರೆ ವಿಶ್ರಮಣಂ ತಾ ।
ನಾವಗಂ ಶರ - ಕೊಪ್ಪಿರೆ ಸಿದ್ಧಂ ।
ಪಾವನಂ ಮಣಿ - ರಾಗಮೆನಿಕ್ಕುಂ ॥ ೫೦ ॥

ಏಕರೂಪಕವೃತ್ತಂ - ಸಸಜಗ - ೫ಕ್ಕೆಯತಿ

ಪವನಾನಿಲ - ಭಾನು ಶೈಲಜಾ ।
ಧವರಂಘ್ರಿಯೊ - ಳೊಂದೆ ಬಾಣದೊಳ್ ।
ಸುವಿರಾಮಮು - ಜಸ್ರವೊಪ್ಪೆ ಸಂ ।
ಭವಿಕುಂ ಕರ - ಮೇಕರೂಪಕಂ ॥ ೫೧ ॥

ಕಲಗೀತವೃತ್ತಂ-ಸತಯುಗ- ೫ಕ್ಕೆಯತಿ

ಮರುದಾಕಾಶೋ - ದಕ ಗೌರೀಶರ್ ।
ಚರಣಕ್ಕೊಟ್ಟಿಂ - ದಿರೆ ವಿಶ್ರಾಮಂ ।
ಶರವರ್ಣಕ್ಕೈ - ತರೆ ನಿರ್ವಾದಂ ।
ಪರಿರಂಜಿಕ್ಕೊಂ - ಕಲಗೀತಾಖ್ಯಂ ॥ ೫೨ ॥

ಮಂದಾನಿಲವೃತ್ತಂ-ಭಮಸಗ-೫ಕ್ಕೆಯತಿ

ಚಂದ್ರ ಧರಿತ್ರೀ - ಮಾರುತ ರುದ್ರರ್ ।
ಸಾಂದ್ರತೆಯಿಂದಂ ಮೂಡೆ ವಿರಾಮಂ ।
ಕೇಂದ್ರದೆ ಬಾಣ - ಕ್ಕೈತರೆ ಬರ್ಣಂ ।
ರುಂದ್ರಪದಂ ಮಂ - ದಾನಿಲ ವೃತ್ತಂ ॥ ೫೩ ॥

ವೀರವಿಲಸಿತವೃತ್ತಂ - ಭಸಜಗ - ೫ಕ್ಕೆಯತಿ

ವಾರಿಜರಿಪು ವಾಯುಭಾಸ್ಕರಂ ।
ಮಾರಮಥನ - ನೋದೆ ಪಾದದೊಳ್ ।
ಚಾರು ವಿರತಿ - ತೋಡು ಬಾಣದೊಳ್ ।
ವೀರವಿಲಸಿ - ತಾಖ್ಯ ವೊಪ್ಪುಗುಂ ॥ ೫೪ ॥

ಚಿತ್ರಪದವೃತ್ತಂ – ಭಭಭಗ - ೪ಕ್ಕೆಯತಿ

ರಾತ್ರಿಕರಂ ಶಶಿ ಶೀತಕರಂ ।
ಗೋತ್ರಸುತಾ - ಧವನೊಪ್ಪೆ ಯುಗ ।
ಕ್ಷೇತ್ರದೆ ಸ - ದ್ಯತಿಯುಪ್ಪೆ ಕರಂ ।
ಚಿತ್ರಪದಂ - ಪರಿಶೋಭಿಸುಗುಂ ॥ ೫೫ ॥

ತ್ರಿಷ್ಟುಪ್ ಸಂಜ್ಞೆಯು ಛಂದೋವರ್ಗದ ೨೦೪೮ ವೃತ್ತಂಗಳೊಳ್

ಶಾಲಿನೀವೃತ್ತಂ – ಮತತಗಗ – ೪ಕ್ಕೆಯತಿ

ಉರ್ವೀಚಕ್ರಂ - ವ್ಯೋಮಮಾಕಾಶವಿಾಶಂ ।
ಶರ್ವಂ ಪಾದ - ಕ್ಕೊಂದೆ ಭಾಸ್ವದ್ವಿರಾಮಂ ।
ನಿರ್ವಾಹಂಗೊಂ - ಡಬ್ಧಿಗಿಂಬಾಗೆ ನಿತ್ಯಂ ।
ನಿರ್ವಾದಂ ತಾಂ ಶಾಲಿನೀವೃತ್ತಮಕ್ಕುಂ ॥ ೫೬ ॥

ಭ್ರಮರವಿಲಸಿತವೃತ್ತಂ - ಮಭನಲಗ - ೪ಕ್ಕೆಯತಿ

ಧಾತ್ರೀ ಚಂದ್ರಾಮರ ಹರಿ ಮದನಾ ।
ಮಿತ್ರರ್ ಪಾದ - ಕ್ಕಿರೆ ಯತಿ ನಿಗಮ ।
ಕ್ಷೇತ್ರಕ್ಕೆಂದುಂ - ಬರೆ ಜನಿಯಿಸುಗುಂ ।
ಶ್ರೋತ್ರೋಲ್ಲಾಸಂ - ಭ್ರಮರವಿಲಸಿತಂ ॥ ೫೭ ॥

ಅಚ್ಯುತವೃತ್ತಂ - ರಸಸಲಗ - ೬ಕ್ಕೆಯತಿ

ಪಾವಕಂ ಪವನಂ - ಮೃಗವಾಹನಂ ।
ಶ್ರೀವರಂ ಗಿರಿಶಂ - ಪದಕೊಂದೆ ತಾ ।
ನಾವಗಂ ರಸದೊಳ್ - ನಿಲೆ ವಿಶ್ರಮಂ ।
ಭಾವಿಸಲ್ಕೊಡನೊ – ಪ್ಪುಗುಮಚ್ಯುತಂ ॥ ೫೮ ॥

ಶ್ಯೇನೀವೃತ್ತಂ - ರಜರಲಗ - ೬ಕ್ಕೆಯತಿ

ಗಾನಕೊಂದಿ ವಹ್ನಿ - ಭಾನು ಪಾವಕಂ ।
ದಾನವಾರಿ ರುದ್ರ - ನೊಪ್ಪೆ ಪಾದದೊಳ್ ।
ನ್ಯೂನಮಿಲ್ಲದಾ ಜಿ - ಕಪ್ಪೆ ವಿಶ್ರಮಂ ।
ಶ್ಯೇನಿಯೆಂಬ ನಾಮ - ದಿಂದೆ ಶೋಭಿಕುಂ ॥ ೫೯ ॥

ರಥೋದ್ಧತಾವೃತ್ತಂ - ರನರಲಗ - ೭ಕ್ಕೆಯತಿ

ಚಿತ್ರಭಾನು ಸುರ - ವಹ್ನಿ ದಾನವಾ ।
ಮಿತ್ರ ಕಾಮಹರ - ರೊಂದೆ ವಿಶ್ರಮಂ ।
ಸೂತ್ರದಿಂದೆ ರಸ - ಕೊಪ್ಪೆ ರಂಜಿಕುಂ ।
ಚಿತ್ರವಾಕ್ಯದೆ ರ - ಥೋದ್ಧತಾಹ್ವಯಂ ॥ ೬೦ ॥

ಸ್ವಾಗತಾವೃತ್ತಂ - ರನಭಗಗ - ೭ಕ್ಕೆಯತಿ

ಯೋಗದಿಂ ಶಿಖಿ ಶಚೀ - ಪತಿ ಚಂದ್ರಂ ।
ನಾಗಭೂಷನಭವಂ ಬರೆ ಚೆಲ್ವಿಂ ।
ಯೋಗಿ ವರ್ಣಿಕಿರೆ ಸ-ದ್ಯತಿ ನಿತ್ಯಂ ।
ಸ್ವಾಗತಾಹ್ವಯಮಸಾ - ಕುಳಮುಕ್ಕುಂ ॥ ೬೧ ॥

ಮೌಕ್ತಿಕದಂತವೃತ್ತಂ - ಸಸಭಗಗ - ೭ಕ್ಕೆಯತಿ

ಪವನಂ ಶ್ವಸನಂ - ಚಂದ್ರನುಮೀಶಂ ।
ಶಿವನೊಂದಲೊಡಂ - ಶಾಸ್ತ್ರಕಜಸ್ರಂ ।
ಸುವಿರಾಮವೊಡಂ ಬಟ್ಟಿರೆ ಸಿದ್ಧಂ ।
ಕವಿರಂಜಿಸುಗುಂ - ಮೌಕ್ತಿಕದಂತಂ ॥ ೬೨ ॥

ಸಾಯಕವೃತ್ತಂ - ಸಭತಲಗ - ೭ಕ್ಕೆಯತಿ

ಶ್ವಸನಂ ಕೈರವ - ಮಿತ್ರಂ ಗಗನಂ ।
ಬಿಸಜಾಕ್ಷಂ ಸ್ಮರ - ನಾಶಂ ಬರೆತಾಂ ।
ರಸದೊಳ್ ವಿಶ್ರಮ - ಮಿಂಬಾಗಿರೆ ರಂ ।
ಜಿಸುಗುಂ ಸಾಯಕ - ವೃತ್ತಂ ನಿಸದಂ ॥ ೬೩ ॥

ಲಯಗ್ರಾಹಿವೃತ್ತಂ - ತತತಗಗ - ೭ಕ್ಕೆಯತಿ

ವ್ಯೋಮಂ ನಭಂ ಪೇಳ್ - ಮಾರ್ಗಂ ಮಹೇಶಂ ।
ಕಾಮಾರಿ ಪಾದಕ್ಕೆ - ಮೆಯ್ದೋರ್ಜಿ ಸದ್ವಿ ।

ಶ್ರಾಮಂ ರಸಕ್ಕೊಪ್ಪೆ - ಸಂಶೋಭಿಕಂ ಪ್ರೋ ।
ದ್ದಾಮಂ ಲಯಗ್ರಾಹಿ - ವಿಖ್ಯಾತ ವೃತ್ತಂ ॥ ೬೪ ॥

ಇಂದ್ರವಜ್ರವೃತ್ತಂ - ತತಜಗಗ - ೫ಕ್ಕೆಯತಿ

ತಾರಾಧ್ವಮಭ್ರಂ - ತಪನಂ ತ್ರಿಣೇತ್ರಂ ।
ಪಾರಾರಿ ಪಾದ - ಕ್ಕಿರೆ ಸದ್ವಿರಾಮಂ ।
ನಾರಾಚಕೆಂದುಂ - ಬರೆರಂಜಿಕುಂ ನಿ ।
ರ್ಧಾರಂ ಸುವೃತ್ತೋ - ಜ್ವಲಮಿಂಧ್ರವಜ್ರಂ ॥ ೬೫ ॥

ಕುಸುಮವೃಸ್ತಂ – ತಜಜಲಗ – ೫ಕ್ಕೆಯತಿ

ಅಭ್ರಂ ಮಿಹಿರಂ - ರವಿ ಚಕ್ರಧರಂ ।
ಶುಭ್ರಾಂಶುಧರಂ - ಪದಕೊಪ್ಪೆ ಕರಂ ।
ಶುಭ್ರಾಂಬುವಿನೊಳ್ - ಯತಿ ಮೂಡಲೊಡಂ ।
ವಿಭ್ರಾಜಿಸುಗುಂ - ಸೊಬಗಿಂ ಕುಸುಮಂ ॥ ೬೬ ॥

ಉಪೇಂದ್ರವಜ್ರ ವೃತ್ತಂ – ಜತಜಗಗ – ೫ಕ್ಕೆಯಂತಿ

ಸರೋಜಮಿತ್ರಂ - ಗಗನಂ ದಿನೇಶಂ ।
ಸ್ಮರಾರಿ ರುದ್ರಂ - ಪದಕೊಂದೆ ಗುಂಪಿಂ ।
ವಿರಾಮವೆಂದುಂ - ಶರಕೊಪ್ಪೆ ಸೊಂಪಿಂ ।
ವಿರಾಜಿಕುಂ ವೃ - ತ್ತಮುಪೇಂದ್ರ ವಜ್ರಂ ॥ ೬೭ ॥

ಸಾಂದ್ರಪದ ವೃತ್ತಂ – ಭತನಗಗ – ೫ಕ್ಕೆಯತಿ

ಚಂದ್ರ ನಭೋ ನಿ- ರ್ಜರ ಹರ ರುದ್ರರ್ ।
ಸಾಂದ್ರದೆ ಪಾದ – ಕ್ಕಿರೆ ಯತಿ ಚೆಲ್ವಿಂ ।
ದಿಂದ್ರಿಯ ವರ್ಣ – ಕ್ಕಿರೆ ಸೊಗಯಿಕ್ಕುಂ ।
ಸಾಂದ್ರಪದಾಖ್ಯಂ – ಪ್ರವಿದಿತ ವಾಕ್ಯಂ ॥ ೬೮ ॥

ರತಿಲೀಲಾವೃತ್ತಂ ಭಭತಲಗ – ೬ಕ್ಕೆಯತಿ

ಶೀತಕರಂ ವಿಧುವಭ್ರಂ ದನುಜಾ ।
ರಾತಿ ಮೃಡಂ ಬರೆ ಭಾಸ್ವದ್ಯತಿ ಸ ।
ದ್ರೀತಿಯೊಳಾಜಿಕೆ ಮೆಯ್ದೋಱಿ ಸಮು ।
ದ್ಯೋತಿಸುಗುಂ ರತಿ ಲೀಲಾಹ್ವಯದಿಂ ॥ ೬೯ ॥

ದೋಧಕವೃತ್ತಂ – ಭಭಭಗಗ – ೬ಕ್ಕೆಯತಿ

ಇಂದು ನಿಶಾಪತಿ – ಚಂದ್ರಸುಮೇಶಂ ।
ಸ್ಕಂದಪಿತಂ ಪದ – ಕೊಂದೆ ವಿರಾಮಂ ।
ಕಂದದೆ ಶಾಸ್ತ್ರಕೆ – ನಿಂದಿರೆ ಬರ್ಕುಂ ।
ಸುಂದರ ವಾಕ್ಯದೆ – ದೋಧಕ ವೃತ್ತಂ ॥ ೭೦ ॥

ಸಮ್ಮತಾ ವೃತ್ತಂ – ಸರರಲಗ – ೬ಕ್ಕೆಯುಂತಿ

ಹರಿಹಯುಂ ಬೃಹ – ದ್ಭಾನು ಪಾವಕಂ ।
ಹರಿ ಪುರಾಂತ್ರಕಂ – ಸೇರೆ ಪಾದದೊಳ್ ।
ವಿರಮಣಂ ಕರಂ – ತೋಱಿ ಶಾಸ್ತ್ರದೊಳ್ ।
ಭರದೆ ರಂಜಿಕುಂ – ಸಮ್ಮತಾಹ್ವಯುಂ ॥ ೭೧ ॥

ಚಂದ್ರಿಕಾವೃತ್ತಂ – ನನರಲಗ – ೬ಕ್ಕೆಯತಿ

ಸುರ ವಿಬುಧ ಕೃ – ಶಾನು ಮಾಧವ ।
ಸ್ಮರ ವಿಮಥನ – ರೊಂದೆ ಪಾದದೊಳ್ ।
ವಿರತಿ ರಸಕೆ – ಮೂಡೆ ರಂಜಿಕುಂ ।
ಪರಮ ಪದದೆ - ಚಂದ್ರಿಕಾಹ್ವಯುಂ ॥ ೭೨ ॥

ಜಗತೀ ಸಂಜ್ಞೆಯ ಛಂದೋವರ್ಗದ ೪೦೯೬ ವೃತ್ತಂಗಳೊಳ್

ವೈಶ್ವದೇವೀ ವೃತ್ತಂ - ಮಮಯಯ - ೫ಕ್ಕೆಯತಿ

ಕ್ಷೋಣೀಚಕ್ರಂ ಭೂಮಂಡಲಂ ವಾರಿ ತೋಯಂ ।
ತಾಣಂಗೊಂಡುದ್ಯ - ತ್ಪಾದದೊಳ್ ಕೂಡೆ ಗುಣ್ಪಂ ।

ಬಾಣಕ್ಕೆಂದುಂ ಸ - ದ್ವಿಶ್ರಮುಂ ಮೂಡೆ ನುಣ್ಪಿಂ ।
ಕಾಣಲ್ ರಂಜಿಕ್ಕುಂ - ವೈಶ್ವದೇವೀಸುವೃತ್ತಂ ॥ ೭೩ ॥

ಭುಜಂಗಪ್ರಯಾತ ವೃತ್ತಂ – ಯಯಯಯ - ೭ಕ್ಕೆಯತಿ

ಜಲಂ ಮೇಘಪುಷ್ಪಂ - ಪಯಂ ಜೀವನಂ ತಾ ।
ಮಲಂಕಾರದಿಂದಂ - ಪದಕ್ಕೊಂದೆ ನಿತ್ಯಂ ।
ಜ್ವಲತ್ಸದ್ವಿರಾಮಂ - ರಸಕ್ಕೊಪ್ಪೆ ಬರ್ಕುಂ ।
ಕಲಾವರ್ಣ ಬದ್ಧಂ - ಭುಜಂಗ ಪ್ರಯಾತಂ ॥ ೭೪ ॥

ಸ್ರಗ್ವಿಣೀ ವೃತ್ತಂ - ರರರರ - ೭ಕ್ಕೆಯತಿ

ಜಾತವೇದಂ ಬೃಹ - ದ್ಭಾನು ವೈಶ್ವಾನರಂ ।
ವೀತಿಹೋತ್ರಂ ಪದ - ಕ್ಕೊಪ್ಪೆ ಸದ್ವಿಶ್ರಮ ।
ದ್ಯೋತಕಂ ಶಾಸ್ತ್ರದೊಳ್ ತೋಱೆ ಸಂಶೋಭಿಕುಂ ।
ಖ್ಯಾತವೃತ್ತೋತ್ತಮಂ - ಸ್ರಗ್ವಿಣೀನಾಮಕಂ ॥ ೭೫ ॥

ಚಂದ್ರವರ್ತ್ಮವೃತ್ತಂ - ರನಭಸ - ೭ಕ್ಕಯತಿ

ಸಾಂದ್ರದಿಂ ಪದದೊಳಗ್ನಿ ಶತಮುಖಂ ।
ಚಂದ್ರನಾಶುಗನ - ಜಸ್ರಮಿರೆ ಕರಂ ।
ಕೇಂದ್ರ ಕೊಂದಿ ಯತಿ - ನಿಂದಿರೆ ರಸದೊಳ್ ।
ಚಂದ್ರವರ್ತ್ಮ ಸಮ - ವೃತ್ತಮುದಯಿಕುಂ ॥ ೭೬ ॥

ವಜ್ರವೃತ್ತಂ - ಸಯಯಯ - ೭ಕ್ಕೆಯತಿ

ಮೃಗವಾಹನಂ ವಾರಿ - ತೋಯಂ ಜಲಂ ತಾಂ ।
ಬಿಗಿದಂಘ್ರಿಯೊಳ್ ಸೇರೆ - ಭಾಸ್ವದ್ವಿರಾಮಂ ।
ನಗವರ್ಣದಂತ್ಯಕ್ಕೆ - ಮೆಯ್ಯೊೞೆ ಸಿದ್ಧಂ ।
ಸೊಗಯಿಪ್ಪುದೊಳ್ಪಿಂದೆ - ವಜ್ರಾಖ್ಯ ವೃತ್ತಂ ॥ ೭೭ ॥

ತೋಟಕವೃತ್ತಂ - ಸಸಸಸ - ೭ಕ್ಕೆಯತಿ
ಮರುದಾಶುಗ ಮಾ - ರುತ ವಾಯು ಗಣಂ ।
ಚರಣಕ್ಕೊಡನೊಂ - ದಿರೆ ವಿಶ್ರಮಣಂ ।
ನಿರತಂ ರಸದೊಳ್ - ನಿಲೆ ರಂಜಿಸುಗುಂ ।
ವರ ತೋಟಕ ವೃ-ತ್ತಮನಾಕುಳದಿಂ ॥ ೭೮ ॥

ಉಪಜಾತವೃತ್ತಂ - ಸಸಭಸ - ೭ಕ್ಕೆಯತಿ
ಪವನಂ ಪೃಷದ - ಶ್ವಂ ಹಿಮಕಿರಣಂ ।
ಪವಮಾನನೊಡಂ - ಬಟ್ಟಿರೆ ರಸದೊಳ್
ಸುವಿರಾಮಮೊಡಂ - ಮೂಡಿರೆ ಸುಪದೋ ।
ದ್ಭವದಿಂದುಪಜಾ - ತಾಹ್ವಯಮೆಸೆಗುಂ ॥ ೭೯ ॥

ಮಲಯಾನಿಲವೃತ್ತಂ - ಸಸನಯ - ೭ಕ್ಕೆಯತಿ
ಅನಿಲ ಶ್ವಸನ - ತ್ರಿದಶ ಜಲಂಗಳ್ ।
ಘನಪಾದದೊಳೊ - ಪ್ಪಿರೆ ಯತಿ ನುಣ್ಪಿಂ ।
ದನಿಶಂ ಋತುವಿಂ - ಗಿರೆ ಬಗೆಗೊಳ್ಗುಂ ।
ವಿನುತಂ ಮಲಯಾ - ನಿಲ ಸಮವೃತ್ತಂ ॥ ೮೦ ॥

ಪ್ರಮಿತಾಕ್ಷರಾವೃತ್ತಂ - ಸಜಸಸ - ೭ಕ್ಕೆಯತಿ
ಕ್ರಮದಿಂ ಸಮೀರ - ರವಿ ವಾಯು ಮರು ।
ತ್ಸಮುದಾಯಮೊಂದೆ - ಪದದೊಳ್ ವರ ವಿ ।
ಶ್ರಮಣಂ ಸಮಂತು - ರಸಕೊಪ್ಪೆ ಕರಂ ।
ಪ್ರಮಿತಾಕ್ಷರಾಖ್ಯ - ಮೊಸೆದುದ್ಭವಿಕುಂ ॥ ೮೧ ॥

ಬಾಣವೃತ್ತಂ - ಸಭರಯ - ೭ಕ್ಕೆಯತಿ
ಶ್ವಸನ ಶ್ವೇತಮ - ರೀಚಿ ವಹ್ನಿ ತೋಯ ।
ಪ್ರಸರಂ ಪಾದದೆ - ಸೇರೆ ಸದ್ವಿರಾಮಂ ।
ರಸವರ್ಣಕ್ಕೊಡ - ನೊಪ್ಪೆ ಸಂಭವಿಕ್ಕುಂ ।
ರಸವದ್ವಾಕ್ಯವಿ - ಭಾಸಿ ಬಾಣವೃತ್ತಂ ॥ ೮೨ ॥

ಇಂದ್ರವಂಶ ವೃತ್ತಂ –ತತಜರ – ೭ಕ್ಕೆ ಯತಿ

ವ್ಯೋಮಾಂಬರಾಹಸ್ಕರ - ಹವ್ಯವಾಹನ ।
ಸ್ತೋಮಂ ಪದಕ್ಕೊಂದಿರೆ - ದಿವ್ಯ ವಿಶ್ರಮಂ ।
ಭೂಮಿಧ್ರ ವರ್ಣಕ್ಕಿರೆ - ಯಿಂದ್ರವಂಶಸ ।
ನ್ನಾಮಾನ್ವಿತಂ ನಿರ್ಮಲ - ವೃತ್ತಮೊಪ್ಪುಗುಂ ॥ ೮೩ ॥

ಮಾಲತೀವೃತ್ತಂ – ತಜನಸ – ೫ಕ್ಕೆಯತಿ

ವಾತಾಧ್ವ ದಿವಾ - ಕರ ಸುರ ಪವನ ।
ವ್ರಾತಂ ಪದದೊಳ್ - ನೆರೆಯೆ ವಿರಮಣಂ ।
ಭೂತಾಕ್ಷರದೊಳ್ - ನೆಲೆಗೊಳೆ ನಿರತಂ ।
ಖ್ಯಾತೋಜ್ವಲ ಮಾ - ಲತಿಯುದಯಿಸುಗುಂ ॥ ೮೪ ॥

ಶ್ರುತಿವೃತ್ತಂ – ತಭಸಯ – ೪ಕ್ಕೆಯತಿ

ಅಭ್ರಾವೃತ - ದ್ಯುತಿ ಪವಮಾನ ತೋಯಂ ।
ಶುಭ್ರಾಂಘ್ರಿಯೊಳ್ - ಬೆರೆದಿರೆ ವೇದಕೆಂದುಂ ।
ವಿಭ್ರಂಶಮಾ - ಗದೆ ಯತಿ ಮೂಡೆ ಚೆಲ್ವಂ ।
ವಿಭ್ರಾಜಿಕುಂ - ಶ್ರುತಿಪೆಸಱಾಂತ ವೃತ್ತಂ ॥ ೮೫ ॥

ಮತ್ತಗಜವೃತ್ತಂ – ತನಸಸ – ೬ಕ್ಕೆಯತಿ

ಆಕಾಶ ವಿಬುಧ - ಪವನ ಶ್ವಸನಾ ।
ನೀಕಂ ಚರಣದೊ - ಳಿರೆ ಶಾಸ್ತ್ರಕೆ ತಾ ।
ನಾಕಾಂಕ್ಷಿತ ಯತಿ - ತಲೆದೋಱೆ ಕರಂ ।
ಸಾಕಾರದೊಳೆಸೆ - ವುದು ಮತ್ತಗಜಂ ॥ ೮೬ ॥

ಜಲೋದ್ಧತಗತಿವೃತ್ತಂ - ಜಸಜಸ - ೬ಕ್ಕೆಯತಿ

ಜಲೋದ್ಭವ ಸಖಾ - ನಿಲಾರ್ಕ ಪವನರ್ ।
ಜ್ವಲಚ್ಚರಣದೊಳ್ - ನಿಗುಂಬಿಸಲೊಡಂ ।
ಸುಲಕ್ಷ್ಯ ರಸದೊಳ್ - ವಿರಾಮಮಿರೆ ತಾಂ ।
ಜಲೋದ್ಧತಗತಿ - ಪ್ರವೃತ್ತಮೆಸೆಗುಂ ॥ ೮೭ ॥

ವಂಶಸ್ಥವೃತ್ತಂ – ಜತಜರ – ೭ಕ್ಕೆಯತಿ

ದಿನಾಧಿನಾಥಂ ನಭ - ಮಬ್ಜಬಾಂಧವಂ ।
ಧನಂಜಯಂ ಪಾದದೊ - ಳೊಂದೆ ವಿಶ್ರಮಂ ।
ಮುನೀಂದ್ರ ವರ್ಣಕ್ಕೊಡ - ನೊಪ್ಪೆ ನಿಶ್ಚಯಂ ।
ಮನೋಜ್ಞ ವಂಶಸ್ಥ ಸು - ವೃತ್ತಮೊಪ್ಪುಗುಂ ॥ ೮೮ ॥

ಸ್ಮೃತಿವೃತ್ತಂ – ಜಭಸಯ – ೪ಕ್ಕೆಯತಿ

ವಿರೋಚನಂ - ಹಿಮರುಚಿ ವಾಯು ತೋಯಂ ।
ವರಾಂಘ್ರಿಯೊಳ್ - ನೆರೆದಿರೆ ವಾರ್ಧಿಗೆಂದುಂ ।
ವಿರಾಮಮು - ದ್ಭವಿಸಿರೆ ನಿರ್ವಿವಾದಂ ।
ವಿರಾಜಿಕುಂ - ಸ್ಮೃತಿಯತಿರಮ್ಯ ವೃತ್ತಂ ॥ ೮೯ ॥

ಹಂಸಮತ್ತವೃತ್ತಂ – ಭಭರಯ - ೬ಕ್ಕೆಯತಿ

ಇಂದು ಸುಧಾಕರ - ಪಾವಕೋದಕಂಗಳ್ ।
ಸಂದಣಿಗೊಂಡಿರೆ - ಪಾದದೊಳ್ ವಿರಾಮಂ ।
ಕುಂದದೆ ಶಾಸ್ತ್ರಕೆ - ಮೂಡೆ ಸಂಜನಿಕ್ಕುಂ ।
ಛಂದದೊಳೊಪ್ಪುವ - ಹಂಸಮತ್ತ ವೃತ್ತಂ ॥ ೯೦ ॥

ಭುಜಂಗವಿಭೂಷಣವೃತ್ತಂ – ಭಭಭಸ – ೬ಕ್ಕೆಯತಿ

ವಾರಿಧಿ ಸಂಭವ - ನಿಂದು ಹಿಮಕರಂ ।
ಮಾರುತನೊಪ್ಪಿರೆ - ವಿಸ್ತರ ಪದದೊಳ್ ।
ಸೇರಿರೆ ಶಾಸ್ತ್ರಕೆ - ವಿಶ್ರಮಮನಿಶಂ ।
ಚಾರು ಭುಜಂಗವಿ - ಭೂಷಣಮೆಸೆಗುಂ ॥ ೯೧ ॥

ಕುಸುಮವಿಚಿತ್ರವೃತ್ತಂ – ನಯನಯ - ೬ಕ್ಕೆಯತಿ

ಅದಿತಿಜ ತೋಯಾಮರ ಸಲಿಲಂಗಳ್ ।
ಪದದೊಳಜಸ್ರಂ - ನಿಲೆರಸಕೊಳ್ಪಿಂ ।
ವಿದಿತವಿರಾಮಂ ಬರೆಬಗೆಗೊಳ್ಗುಂ ।
ಮೃದುಪದಚಿತ್ರಂ ಕುಸುಮವಿಚಿತ್ರಂ ॥ ೯೨ ॥

ತಾಮರಸವೃತ್ತಂ – ನಜಜಯ – ೭ಕ್ಕೆಯತಿ

ದಿವಿಜ ದಿವಾಕರ - ಭಾಸ್ಕರ ವಾರಿ ।
ಪ್ರವರಗಣಂ ಪದಕೊಂದಿರೆ ನಿತ್ಯಂ ।
ಸುವಿರತಿಯದ್ರಿಗೆ - ನಿಂದಿರೆ ಸಿದ್ಧಂ ।
ಸವನಿಪುದಂದದೆ - ತಾಮರಸಾಖ್ಯಂ ॥ ೯೩ ॥

ದ್ರುತಪದ ವೃತ್ತಂ – ನಭಜಯ – ೪ಕ್ಕೆಯತಿ

ಕ್ರತುಭುಜೋ - ತ್ಪಲ ಸಖಾರ್ಕ ಜಲಂಗಳ್ ।
ಪ್ರತಿಪದ - ಕ್ಕೆಸೆಯೆ ಪದ್ಧತಿಯಿಂದಂ ।
ಶ್ರುತಿಗೆ ಸ - ದ್ವಿರಮಣಂ ಬರೆ ಸೋಂಪಿಂ ।
ದ್ರುತಪದಂ - ಧೃತಪದಂ ಸೊಗಯಿಕ್ಕುಂ ॥ ೯೪ ॥

ಮತ್ತಕೋಕಿಲ ವೃತ್ತಂ – ನಭಜರ – ೭ಕ್ಕೆಯತಿ

ಅನಿಮಿಷೇಂದುದಿನನಾಥಪಾವಕರ್ ।
ಘನಲಸತ್ಪದದೊಳೊಂದೆ ವಿಶ್ರಮಂ ।
ಮುನಿಗೆ ಸಂಭವಿಸೆ ಶೋಭಿಕುಂಕರಂ ।
ವಿನುತಸಲ್ಲಯದೆ ಮತ್ತಕೋಕಿಲಂ ॥ ೯೫ ॥

ದ್ರುತವಿಲಂಬಿತ ವೃತ್ತಂ – ನಭಭರ – ೬ಕ್ಕೆಯತಿ

ಶತಮುಖಂ ಹಿಮ - ದೀಪ್ತಿ ಸುಧಾಕರಂ ।
ಹುತವಹಂ ನೆಲೆ - ಗೊಂಡಿರೆ ಪಾದದೊಳ್ ।
ಯತಿರಸಾಕ್ಷರ - ಕ್ಕೈತರೆ ರಂಜಿಕುಂ ।
ದ್ರುತವಿಲಂಬಿತ - ವೃತ್ತಮನಾಕುಳಂ ॥ ೯೬ ॥

ಪುಟ ವೃತ್ತಂ – ನನಮಯ – ೮ಕ್ಕೆಯತಿ

ಸುರ ದಿವಿಜ ಧರಿತ್ರೀ - ತೋಯವೃಂದಂ ।
ಚರಣದೊಳಿರೆ ಗುಂಪಿಂ - ಸದ್ವಿರಾಮಂ ।
ದ್ವಿರದಕೆ ಹಿತದಿಂದಂ - ಮೂಡೆ ಪೆಂಪಿಂ ।
ನಿರುಪಮ ಪುಟವೃತ್ತಂ - ಸಂಘಟಿಕ್ಕುಂ ॥ ೯೭ ॥

ಕಾಮದತ್ತ ವೃತ್ತಂ - ನನರಯ - ೬ಕ್ಕೆಯತಿ

ಬಲವಿಮಥನ - ನಿಂದ್ರನಾಶ್ರಯಾಶಂ ।
ಸಲಿಲಮೊದಮೆ - ಪಾದದೊಳ್ ವಿರಾಮಂ ।
ಚಲಿಸದೆ ರಸ - ಕುಣ್ಮೆ ಸಂಭವಿಕ್ಕುಂ ।
ಸುಲಲಿತ ಪದ - ಶೋಭಿ ಕಾಮದತ್ತಂ ॥ ೯೮ ॥

ಪ್ರಮುದಿತವದನಾವೃತ್ತಂ - ಸನರರ ೬ಕ್ಕೆಯತಿ

ಅಮರಸುರ ಹುತಾಶನಾಗ್ನಿವ್ರಜಂ ।
ಕ್ರಮದೆಚರಣದೊಳ್ ಪೊದಳ್ದೊಂದೆವಿ ।
ಶ್ರಮಮನವರತಂ - ನಗಕೊಕ್ಕಪ್ಪೆ ತಾಂ ।
ಪ್ರಮುದಿತವದನಾ - ಹ್ವಯಂ ರಂಜಿಕುಂ ॥ ೯೯ ॥

ಅತಿಜಗತೀ ಸಂಜ್ಞೆಯ್ಚ್ಛಂದೋವರ್ಗದ ೮೧೯೨ ವೃತ್ತಂಗಳೊಳ್

ಮತ್ತಮಯೂರ ವೃತ್ತಂ - ಮತಯಸಗ - ೮ಕ್ಕೆಯತಿ

ಉರ್ವೀಚಕ್ರಂ - ವಿಷ್ಣುಪದಂ ವಾರಿ ಸಮೀರಂ ।
ಶರ್ವಂ ಪಾದ - ಕೊಕ್ಕೊಂದಿರೆ ವೇದಕ್ಕೆ ವಿರಾಮಂ ।
ನಿರ್ವೈಕಲ್ಯಂ - ಬೆತ್ತಿರೆ ಚೆಲ್ವಿಂದುದಯಿಕ್ಕುಂ ।
ಸರ್ವಜ್ಞೀಯಂ - ಮತ್ತಮಯೂರಾಹ್ವಯವೃತ್ತಂ ॥ ೧೦೦ ॥

ಪ್ರಹರ್ಷಿಣೀ ವೃತ್ತಂ - ಮನಜರಗ - ೩ಕ್ಕೆಯತಿ

ಭೂಮೀಂದ್ರ - ದ್ಯುಮಣಿ ಹುತಾಶನಾದ್ರಿಜೇಶರ್ ।
ವ್ಯಾಮಿಶ್ರಂ - ಬಡೆದೊಡನಂಘ್ರಿಗೊಂಡೆ ಸದ್ವಿ ।
ಶ್ರಾಮಂ ತಾ - ನಿರೆ ಪುರದೊಳ್ ಪ್ರಹರ್ಷಿಣೀ ಸ ।
ನ್ನಾಮಾಢ್ಯಂ, ವರಸಮವೃತ್ತಮುದ್ಭವಿಕ್ಕುಂ ॥ ೧೦೧ ॥

ಮಂಜುಭಾಷಿಣೀ ವೃತ್ತಂ - ಸಜಸಜಗ - ೮ಕ್ಕೆಯತಿ

ಅನಿಲಂ ಸರೋಜಸಖ - ನೇಣವಾಹನಂ ।
ದಿನಪಂ ಮನೋಜರಿಪು - ಸೇರೆ ಪಾದದೊಳ್ ।
ಸುನಿಯುಕ್ತ ವಿಶ್ರಮಣ - ಮೊಪ್ಪೆ ದಂತಿಯೊಳ್ ।
ಘನ ಮಂಜುಭಾಷಿಣಿ ವಿ - ರಾಜಿಕುಂ ಕರಂ ॥ ೧೦೨ ॥

ಅನಂಗೋದ್ಭವವೃತ್ತಂ — ಸಜತಸಗ - ೭ಕ್ಕೆಯತಿ

ಪವಮಾನ ಭಾಸ್ಕರ - ವ್ಯೋಮ ಮರುದಂಗೋ ।
ದ್ಭವಭಂಜನರ್ ಪದ - ಕ್ಕೊಂದಲೊಡನೆಂದುಂ ।
ಸುವಿರಾಮಮಶ್ವದೊಳ್ - ಮೂಡಲೊಡನಾವಿ ।
ರ್ಭವಿಕುಂ ಸಮಂತನಂ - ಗೋದ್ಭವ ಸಮಾಖ್ಯಂ ॥ ೧೦೩ ॥

ಕಲಕಂಠವೃತ್ತಂ — ಸಭನನಗ - ೭ಕ್ಕೆಯತಿ

ವಿಲಸತ್ಪಾವಕ - ನಿಲಸಮೃತಕರಂ ।
ಬಲನಾಶಂ ನಗ - ರಿಪು ಮೃಡರಿರೆ ನಿ ।
ಶ್ಚಲದಿಂ ಶಾಸ್ತ್ರಕೆ - ಯತಿ ಬರೆ ನಿರತಂ ।
ಕಲಕಂಠಾಹ್ವಯ - ಮೊಡನುದಯಿಸುಗುಂ ॥ ೧೦೪

ಬಹಿರಂಗಿವೃತ್ತಂ - ಸನನಸಗ - ೭ಕ್ಕೆಯತಿ

ದಹನಾಪ್ತ ವಿಬುಧ - ದಿವಿಜ ನಭಸ್ವ ।
ದ್ಗ್ರಹತಾತರೊದವೆ - ಪದದೆ ವಿರಾಮಂ ।
ವಿಹಿತ ಕ್ರಮದೊಳ - ಚಲಕಿರೆ ಸಿದ್ಧಂ ।
ಬಹಿರಂಗಿವೆಸಱ - ತಳೆದುದಯಿಕ್ಕುಂ ॥ ೧೦೫ ॥

ರುಚಿವೃತ್ತಂ - ತಭಸಜಗ - ೪ಕ್ಕೆಯತಿ

ವ್ಯೋಮಂ ಸುಧಾ - ಕರಸನಿಲಂ ದಿವಾಕರಂ ।
ಕಾಮಾಂತಕಂ - ಚರಣದೊಳೊಂದೆ ಚಾರು ವಿ ।
ಶ್ರಾಮಂ ಪಯೋ - ನಿಧಿಯೆಡೆಗೊಪ್ಪೆ ಸತ್ಪದ ।
ಸ್ತೋಮಾಶ್ರಿತಂ - ರುಚಿ ಸಮವೃತ್ತಮೊಪ್ಪುಗುಂ ॥ ೧೦೬ ॥

ಸೌರಂಭವೃತ್ತಂ - ತಭಜಸಗ ೭ಕ್ಕೆಯತಿ

ತಾರಾಧ್ವಮಿಂದು ಖರ - ದೀಪ್ತಿ ಪವಮಾನಂ ।
ಗೌರೀಧವಂ ಪದದೆ - ಸೇರೆ ಹಯಕೆಂದುಂ ।
ಚಾರೂಜ್ವಲದ್ವಿರತಿ - ತೋಱೆ ಬಗೆಗೊಳ್ಗುಂ ।
ಸೌರಂಭ ವೃತ್ತಮತಿ - ರಮ್ಯ ಪದಯುಕ್ತಂ ॥ ೧೦೭ ॥

ರುಚಿರಾವೃತ್ತಂ - ಜಭಸಜಗ - ೪ಕ್ಕೆಯತಿ

ದಿವಾಕರಂ - ಹಿಮರುಚಿ ವಾಯು ಭಾಸ್ಕರಂ ।
ಶಿವಂ ಕರಂ - ನೆಲಸಿರೆ ದಿವ್ಯ ಪಾದದೊಳ್ ।
ಸುವಿಶ್ರಮಂ - ಶರನಿಧಿಗೊಪ್ಪೆ ರಂಜಿಕುಂ ।
ಪವಿತ್ರವಾ - ಗ್ರುಚಿ ರುಚಿರಾಹ್ವಯಂ ಕರಂ ॥ ೧೦೮ ॥

ಚಟುಲವೃತ್ತಂ - ಭಯಜಸಗ - ೭ಕ್ಕೆಯತಿ

ರಾಜನುದಕಂ ಪದ್ಮ - ಬಂಧು ಪವನಂ ವ್ಯಾ ।
ಘ್ರಾಜಿನದುಕೂಲಂ ಸ - ದಂಘ್ರಿಗಿರೆ ನಿತ್ಯಂ ।
ವಾಜಿಗೆ ಸು ವಿಶ್ರಾಮ - ಮುಣ್ಮೆ ನಿಸದಂ ವಿ ।
ಭ್ರಾಜಿಪುದು ಚೆಲ್ವಿಂದೆ - ತಾಂ ಚಟುಲವೃತ್ತಂ ॥ ೧೦೯ ॥

ಅಂಗರುಚಿವೃತ್ತಂ - ಭಭಭಭಗ - ೭ಕ್ಕೆಯತಿ

ಶೀತಕರೇಂದು ಸುಧಾ - ಕರ ಚಂದ್ರ ಮನೋ ।
ಜಾತಹರರ್ ಪದದೊಳ್ - ನಿಲೆ ವಿಶ್ರಮಣ ।
ದ್ಯೋತಕಮದ್ರಿಗಿರ - ಲ್ಕೊಡನಂಗರುಚಿ ।
ಖ್ಯಾತ ಸುವೃತ್ತಮನಾ - ಕುಳಮುದ್ಭವಿಕುಂ ॥ ೧೧೦ ॥

ನಿಷ್ಕಳಂಕವೃತ್ತಂ - ಭನಯರಗ - ೮ಕ್ಕೆಯತಿ

ಪಂಕಜರಿಪು ಮಘವಂ - ತೋಯಂ ಹುತಾಶಂ ।
ಶಂಕರನಿರೆ ಪದದೊಳ್ - ಸದ್ವಿಶ್ರಮಂ ನಿ ।
ಶ್ಯಂಕೆಯೊಳಿರೆ ಕರಿಯೊಳ್ - ತಾನುದ್ಭವಿಕ್ಕುಂ ।
ಸಂಕಲಿತ ಪದಚತು - ಷ್ಕಂ ನಿಷ್ಕಳಂಕಂ ॥ ೧೧೧ ॥

ಚಂದ್ರರೇಖಾವೃತ್ತಂ - ನಸರರಗ - ೬ಕ್ಕೆಯತಿ

ದಿವಿಜ ಪವಮಾ . ನಾಗ್ನಿ ಸಪ್ತಾರ್ಚಿ ಗೌರೀ ।
ಧವರೆಜಿಕದಿಂ - ದಂಘ್ರಿಯೊಳ್ ಕೂಡೆಗುಣ್ಪಂ ।
ಸುವಿರತಿ ಋತು - ಸ್ಥಾನದೊಳ್ ಮೂಡೆ ಚೆಲ್ವಿಂ ।
ದವತರಿಸುಗುಂ - ಚಂದ್ರರೇಖಾಖ್ಯ ವೃತ್ತಂ ॥ ೧೧೨ ॥

ಕೌಮುದೀ ವೃತ್ತಂ - ನತತತಗ - ೭ಕ್ಕೆಯತಿ

ಅಮರ ತಾರಾಪಥಾ - ಭ್ರಾಂತರಿಕ್ಷ ಸ್ಮರ ।
ಪ್ರಮಥನರ್ ಪಾದದೊಳ್ - ಸೇರೆ ನಿರ್ದಿಷ್ಟ ವಿ ।
ಶ್ರಮಣಮುರ್ವೀಧರ - ಕ್ಕೊಪ್ಪೆ ವಿಭ್ರಾಜಿಕುಂ ।
ವಿಮಲಿನಂ ಕೌಮುದೀ - ನಾಮ ವೃತ್ತೋತ್ತಮಂ ॥ ೧೧೨ ॥

ಪ್ರಭಾತವೃತ್ತಂ - ಸಜಜರಗ - ೮ಕ್ಕೆಯತಿ

ಸುರ ದಿನನಾಥ ದಿವಾ - ಕರಾಗ್ನಿ ಗಂಗಾ ।
ಧರರಿರೆ ಸತ್ಪದದೊಳ್ - ಲಸದ್ವಿರಾಮಂ ।
ಕರಿಯೆಡೆಗೊಪ್ಪೆಕರಂ - ಸಮುದ್ಭವಿಕ್ಕುಂ ।
ಸರಸ ವಚೋಭರಿತಂ - ಪ್ರಭಾತ ವೃತ್ತಂ ॥ ೧೧೪ ॥

ರಮಣೀ ವೃತ್ತಂ ನನಭಭಗ - ೭ಕ್ಕೆಯತಿ

ನಮುಚಿರಿಪು ಶಚೀ - ಪತಿ ಶೀತಕರಂ ।
ಹಿಮಕರನಭವಂ - ಪದಕೊಂದಿರೆ ತಾ ।
ನಮಲ ಯತಿ ಹಯ - ಕ್ಕಿರೆ ಸಂಜನಿಕುಂ ।
ರಮಣಿಯಮಲವಾ - ಗ್ರಮಣೀಯಕರಂ ॥ ೧೧೫ ॥

ಮನೋಹರೀ ವೃತ್ತಂ - ನಭಜಜಗ - ೮ಕ್ಕೆಯತಿ

ಹರಿಹಯಂ ಹಿಮಕರಂ - ಗ್ರಹನಾಯಕಂ ।
ತರಣಿ ಮನ್ಮಥಹರಂ - ನಿಲೆಪಾದದೊಳ್ ।
ದ್ವಿರದದೊಳ್ ವಿರಮಣಂ - ಬರೆ ರಂಜಿಕುಂ ।
ವರ ಮನೋಹರಿ ಮನೋ - ಹರ ವಾಗ್ಯುತಂ ॥ ೧೧೬ ॥

ಶಕ್ವರೀ ಸಂಜ್ಞೆಯ ಛಂದೋವರ್ಗದ ೧೬೩೮೪ ವೃತ್ತಂಗಳೊಳ್

ಅಲೋಲಾ ವೃತ್ತಂ - ಮಸಮಭಗಗ - ೭ಕ್ಕೆಯತಿ

ಭೂಲೋಕಂ ಪವಮಾನಂ - ಕ್ಷ್ಮಾಚಕ್ರಂ - ಮೃಗಲಕ್ಷ್ಮಂ ।
ಫಾಲಾಕ್ಷಂ ಪರಮೇಶಂ - ಪಾದಕ್ಕೊಂದಿರೆ ಸೊಂಪಿಂ ।
ಶೈಲ ಸ್ಥಾನದೊಳೆಂದುಂ - ವಿಶ್ರಾಮಂ ಬರೆ ವಾಕ್ಯಾ ।
ಲೋಲಾವೃತ್ತಮಲೋಲಾ - ವೃತ್ತಂ ತಾನುದಯಿಕ್ಕುಂ ॥ ೧೧೭ ॥

ಅಸಂಬಾಧವೃತ್ತಂ - ಮತನಸಗಗ - ೫ಕ್ಕೆಯತಿ

ಧಾರಿಣ್ಯಾಕಾಶ ತ್ರಿದಶ ಪವನ ರುದ್ರೇಶರ್ ।
ಚಾರೂಪ್ಯತ್ಪಾದ - ಕ್ಕೊಡನೊಗೆದಿರೆ ವಿಶ್ರಾಮಂ ।
ನಾರಾಚ ಸ್ಥಾನ - ಕ್ಕುದಯಿಸೆ ನಿರತಂ ಚೆಲ್ವಿಂ ।
ಶಾರಾಜಿಕ್ಕುಂ ಸಂ - ಚಿತಸುಪದಮಸಂಬಾಧಂ ॥ ೧೧೭ ॥

ಮಧ್ಯಕ್ಷಾಮಾವೃತ್ತಂ - ಮಭನಯಗಗ - ೪,೬ಕ್ಕೆಯತಿ

ಭೂಮಿ ಶ್ವೇತ - ದ್ಯುತಿ ಬಲರಿಪು - ತೋಯಂ ಭರ್ಗಂ ।
ಕಾಮಧ್ವಂಸಂ - ಚರಣದೆ ನಿಲೆ - ತಾಸುದ್ಯದ್ವಿ ।
ಶ್ರಾಮಂ ರತ್ನಾ - ಕರ ರಸಕಿರೆ - ಪದ್ಯಂ ಮಧ್ಯ ।
ಕ್ಷಾಮಾವೃತ್ತಂ - ಮಧುಕಪದದೆ - ಸಂಶೋಭಿಕ್ಕುಂ ॥ ೧೧೮ ॥

ಚಂದ್ರಮುಖೀವೃತ್ತಂ - ಸಯಸನಗಗ - ೭ಕ್ಕೆಯತಿ

ಮರುದಂಬು ಗೀರ್ವಾಣ - ವಿಬುಧ ಪರಮೇಶ ।
ಸ್ಮರಮರ್ದನರ್ ಪಾದ - ಕೊದವೆ ಸುವಿರಾಮಂ ।
ಸ್ವರವರ್ಣದೊಳ್ ತಪ್ಪ - ದೆಸೆಯೆ ಸೊಬಗಿಂದಂ ।
ಪರಿರಂಜಿಕುಂ ಚಂದ್ರ - ಮುಖಿ ಪೆಸಱ ವೃತ್ತಂ ॥ ೧೨ ॥

ನವನಂದಿನೀವೃತ್ತಂ - ಸಜಸನಗಗ - ೮ಕ್ಕೆಯತಿ

ಪವಮಾನ ಪದ್ಮಸಖ - ವಾಯು ಸುರ ಗೌರೀ ।
ಭವ ಶಂಕರರ್ ಪದದೊ - ಳೊಂದೆ ಹಿತದಿಂದಂ ।
ಸುವಿರಾಮಮೆಂದುವಿಭ - ವರ್ಣಕಿರೆ ಸಿದ್ಧಂ ।
ನವನಂದಿನೀ ಪ್ರಚುರ - ವೃತ್ತ ಮುದಯಿಕ್ಕುಂ ॥ ೧೨೦ ॥

ವಸಂತ ತಿಲಕವೃತ್ತಂ - ತಭಜಜಗಗ - ೮ಕ್ಕೆಯತಿ

ವ್ಯೋಮಂ ಹಿಮಾಂಶು ಮಿಹಿರಂ - ತಪನಂ ಮಹೇಶಂ ।
ಕಾಮಾಹಿತಂ ಚರಣದೊಳ್ - ಬೆರೆದೊಂದೆ ನಿತ್ಯಂ ।
ಸಾಮೋದ್ಭವಕ್ಕೆ ಯತಿಯೊ - ಪ್ಪಿರೆ ದಿವ್ಯ ವೃತ್ತೋ ।
ದ್ದಾಮಂ ವಸಂತ ತಿಲಕಂ - ಸಲೆ ಕಣ್ಗೊಳಿಕ್ಕುಂ ॥ ೧೨೨ ॥

ಹಾರಲತಿಕಾ ವೃತ್ತಂ - ತನಭಭಲಗ - ೭ಕ್ಕೆಯತಿ
ಆಕಾಶ ಸುರ ಸುಧಾ - ಕರ ಶೀತಕಿರಣ ।
ಶ್ರೀಕಾಂತ ಪುರಹರರ್ - ಪದಕೊಪ್ಪೆ ಗಿರಿಯೊಳ್ ।
ಪ್ರಾಕಟ್ಯದೆ ಯತಿಯ್ಕೆ - ತರೆ ಹಾರಲತಿಕಾ ।
ಶ್ಲೋಕಾತಿಶಯಮನಾ - ಕುಳ ಮುದ್ರವಿಸುಗುಂ ॥ ೧೨೩ ॥

ಮಂದಗಾಮಿನೀ ವೃತ್ತಂ - ಭಯನರಲಗ - ೭ಕ್ಕೆಯತಿ
ಸೋಮಸುಪಕಂ ವಜ್ರ - ಧರನಗ್ನಿ ಮಾಧವಂ ।
ಕಾಮಮಥನಂ ಚಾರು - ಪದಕೊಂದೆ ವಿಶ್ರಮಂ ।
ಭೂಮಿಧರದೊಳ್ ತಪ್ಪ - ದಿರೆ ಮಂದಗಾಮಿನೀ ।
ನಾಮಕ ಲಸದ್ವೃತ್ತ - ಮಭಿರಂಜಿಕುಂ ಕರಂ ॥ ೧೨೮ ॥

ಲಕ್ಷ್ಮೀವೃತ್ತಂ - ಭಸತತಗಗ - ೭ಕ್ಕೆಯತಿ
ರಾತ್ರಿಕರ ಸಮೀರ - ವ್ಯೋಮ ತಾರಾಧ್ವ ಮಾರಾ ।
ಮಿತ್ರ ಮುಖವಿಭಂಗರ್ - ಪಾದದೊಳ್ ಕೂಡೆ ಗುಂಪಿಂ ।
ಗೋತ್ರಕೆ ಸುವಿರಾಮಂ - ಮೂಡೆ ಕಣ್ಗೊಪ್ಪಿ ತೋರ್ಕುಂ ।
ಶ್ರೋತ್ರಮಧುರವಾಕ್ಯೋ - ದ್ಭಾಸಿ ಲಕ್ಷ್ಮೀಸಮಾಖ್ಯಂ ॥ ೧೨೫ ॥

ವನಮಯೂರವೃತ್ತಂ – ಭಜಸನಗಗ – ೮ಕ್ಕೆಯತಿ
ಇಂದು ರವಿ ಗಂಧವಹ - ನಿರ್ಜರ ಮಹೇಶ ।
ಸ್ಕಂದಪಿತರಂಘ್ರಿಯೆಡೆ - ಗೊಂದಿರೆ ವಿರಾಮಂ ।
ಕುಂದದೆ ಗಜಾಕ್ಷರಕೆ - ತೋಱಿ ಬಗೆಗೊಳ್ಗುಂ ।
ಸುಂದರ ಮನೋಜ್ಞಪದ – ದಿಂ ವನಮಯೂರಂ ॥ ೧೨೬ ॥

ದರ್ದುರಕ ವೃತ್ತಂ - ಭಭರಸಲಗ - ೮ಕ್ಕೆಯತಿ
ಶೀತಕರಂ ಶಶಿ ವಹ್ನಿ - ಮಾರುತನಚ್ಯುತಂ ।
ಭೂತಗಣೇಶ್ವರನಂಘ್ರಿ - ಗೊಮ್ಮಿರೆ ವಿಶ್ರಮಂ ।
ರೀತಿಯ ಮೀಱದೆ ದಂತಿ - ಗುಣ್ಮಿರೆ ರಂಜಿಕುಂ ।
ಸಾತಿಶಯೋಕ್ತಿವಿಭಾಸಿ - ದರ್ದುರಕಾಹ್ವಯಂ ॥ ೧೨೭ ॥

ಮತ್ತಭೃಂಗ ವೃತ್ತಂ - ಭಜತಸಲಗ - ೭ಕ್ಕೆಯತಿ
ರಾಜ ದಿನನಾಯಕ - ವ್ಯೋಮ ಮೃಗವಾಹನಾಂ ।
ಭೋಜನಯನಾಂಗಜ - ಧ್ವಂಸರಿರೆ ಪಾದದೊಳ್ ।
ವಾಜಿಗೆ ಸುವಿಶ್ರಮಂ - ಸಂಭವಿಸೆ ನಿಶ್ಚಯಂ ।
ರಾಜಿಪುದು ಮತ್ತಭೃಂ - ಗಂ ಮಧುರಸತ್ಪದಂ ॥ ೧೨೮ ॥

ಕುಸುಮಾಂಘ್ರಿಪವೃತ್ತಂ ನಭರಸಲಗ - ೯ಕ್ಕೆಯತಿ
ಅಮರ ಚಂದ್ರ ಹುತಾಶನ - ಶ್ವಸನಾಚ್ಯುತ ।
ಪ್ರಮಥನಾಯಕರಂಘ್ರಿಯೊಳ್ - ಬರೆ ದಿವ್ಯವಿ ।
ಶ್ರಮಣ ಮಂದೆ ರತ್ನಕೊ - ಪ್ಪಿರೆ ಶೋಭಿಕುಂ ।
ಸುಮಧುರೋಕ್ತಿಸಮನ್ವಿತಂ - ಕುಸುಮಾಂಘ್ರಿಪಂ ॥ ೧೨೯ ॥

ವಸಂತ ವೃತ್ತಂ - ನನತತಗಗ - ೭ಕ್ಕೆಯತಿ
ದಿವಿಜ ಸುರ ನಭೋ - ವ್ಯೋಮ ಭೂತೇಶ ಗೌರೀ ।
ಧವರೆಜಿಕದೆ ಸ- ತ್ಪಾದದೊಳ್ ಮೂಡೆ ನಿತ್ಯಂ ।
ಸುವಿರತಿಯುಚಲ - ಕ್ಕೊಂದೆ ಕಣ್ಣೊಪ್ಪಿ ತೋರ್ಕುಂ ।
ಪ್ರವಿದಿತಪದದಿಂ - ತಾಂ ವಸಂತಾಖ್ಯ ವೃತ್ತಂ ॥ ೧೩೦ ॥

ಪ್ರಹರಣಕಲಿತ ವೃತ್ತಂ - ಸನಭನಲಗ - ೭ಕ್ಕೆಯತಿ
ಸುರ ದಿವಿಜ ಸುಧಾ - ಕರ ವಿಬುಧ ಹರಿ ।
ಸ್ಮರಹರರನಿಶಂ - ಬೆರೆದಿರೆ ಪದದೊಳ್ ।
ತುರಗದೆ ಯತಿ ನಿಂ - ದಿರೆ ಕರಮೆಸೆಗುಂ ।
ವರಪದ ಲಲಿತಂ - ಪ್ರಹರಣಕಲಿತಂ ॥ ೧೩೧ ॥

ಅತಿಶಕ್ವರೀ ಸಂಜ್ಞೆಯ ಛಂದೋವರ್ಗದ ೩೨೭೬೮ ವೃತ್ತಂಗಳೊಳ್

ಉತ್ಸವವೃತ್ತಂ - ರಜರಜರ - ೮ಕ್ಕೆಯತಿ
ವೀತಿಹೋತ್ರಸುಷ್ಣರಶ್ಮಿ - ಪಾವಕಂ ಪ್ರಭಾಕರಂ ।
ಜಾತವೇದನಂಘ್ರಿಯಲ್ಲಿ - ಸೇರೆ ಚಾರು ವಿಶ್ರಮಂ ।
ರೀತಿಗೊಪ್ಪವಂತೆ ದಂತಿ - ಯಲ್ಲಿ ತೋರ್ಪ ರಂಜಿಕುಂ ।
ಖ್ಯಾತ ವೃತ್ತಮುತ್ತಮೋಕ್ತಿ - ಯುಕ್ತಮುತ್ಸವಾಹ್ವಯಂ ॥ ೧೩೨ ॥

ಮಣಿಭೂಷಣವೃತ್ತಂ – ರನಭಭರ - ೭ಕ್ಕೆ ಯತಿ

ಸಪ್ತಜಿಹ್ವ ದಿವಿಜಾ - ಬ್ಧಿಜ ಚಂದ್ರ ಹುತಾಶನರ್ ।
ವ್ಯಾಪ್ತಿಗೊಂಡೆಸೆಯೆ ಸ - ತ್ಪದದೊಳ್ ಸುವಿಧಾನದಿಂ ।
ಸಪ್ತವರ್ಣದೆಡೆಯೊಳ್ - ಯತಿಯೈತರೆ ನಿಶ್ಚಯಂ ।
ಪ್ರಾಪ್ತಿಯಕ್ಕುಮಮಲಂ - ಮಣಿಭೂಷಣ ನಾಮಕಂ ॥ ೧೧೩ ॥

ವೃಷಭವೃತ್ತಂ – ಸಜಸಸಯ - ೫ಕ್ಕೆ ಯತಿ

ವೃಷದಶ್ವ ಭಾ - ಸ್ಕರೆ ಮರುತ್ಪವನಾಂಬು ವೃಂದಂ ।
ವಿಷಮತ್ವಮಂ - ತಳೆಯದಂಘ್ರಿಯೊಳೊಪ್ಪೆ ನಿತ್ಯಂ ।
ವಿಷಯಾಕ್ಷರ – ಕ್ಕಮಲ ವಿಶ್ರಮಮಪ್ಪೆ ಸಿದ್ಧಂ ।
ವೃಷಭಾಹ್ವಯಂ - ವಿಶದ ನಿರ್ಮಲವೃತ್ತಮಕ್ಕುಂ ॥ ೧೩೪ ॥

ಮದನಚಾಪ ವೃತ್ತಂ – ನಸಜಸಯ – ೬ಕ್ಕೆ ಯತಿ

ಇಂದು ದಿವಿಷದನಿಮಿಷ - ಪವಮಾನ ತೋಯಂ ।
ಗೊಂದಣಿಸಿ ನಿಜಪದದೆ - ನಿಲೆ ವಿಶ್ರಮಂ ತಾ ।
ನೆಂದುಮಗಲದೆ ನವಮ - ಕಿರೆ ನಿರ್ವಿವಾದಂ ।
ಕುಂದಮುದಯಿಸುವುದು ಮ - ದನಚಾಪ ವೃತ್ತಂ ॥ ೧೩೫ ॥

ಮದನವತೀ ವೃತ್ತಂ – ನಸಜನಯ – ೮ಕ್ಕೆ ಯತಿ

ಅದಿತಿಜ ಮರುದ್ರವಿ - ತ್ರಿದಶ ಸಲಿಲಂಗಳ್ ।
ಪದದೊಳನುಬಂಧದಿಂ - ದೊದವೆ ಸುವಿರಾಮಂ ।
ಮದಗಜಕೆ ಸೇರೆ ತಾ - ನುದಯಿಪುದಲಂಪಿಂ ।
ಮದನವತಿಯೆಂಬಸ - ನ್ಮಧುರತರ ವೃತ್ತಂ ॥ ೧೩೬ ॥

ವಿಚಿತ್ರಲಲಿತಾ ವೃತ್ತಂ - ನಸನಭಯ - ೯ಕ್ಕೆ ಯತಿ

ಕುಲಿಶಿ ಪವನಂ - ನಮುಚಿ - ಭೇದಿ ರಜನೀಶಂ ।
ಸಲಿಲಮನಿಶಂ - ಪದದೊ - ಳೊಂದಿರೆ ವಿರಾಮಂ ।
ಚಲಿಸದೆ ಕರಂ ನವಮ - ಕೊಪ್ಪೆ ಸೊಗಯಿಕ್ಕುಂ ।
ಲಲಿತಪದಚಿತ್ರದೆ ವಿ - ಚಿತ್ರಲಲಿತಾಖ್ಯಂ ॥ ೧೩೭ ॥

ನವನಳಿನ ವೃತ್ತಂ – ನಜಜಭರ – ೧೦ಕ್ಕೆಯತಿ

ದಿವಿಜ ದಿನೇಶ ರವಿ ಕ್ಷಪಾ - ಕರ ಪಾವಕರ್ ।
ಪ್ರವಿದಿತ ಪಾದದೆ ವಿಶ್ರದಿಂ - ನಿಲೆ ಸಂತತಂ ।
ಸುವಿರಮಣಂ ದಶಪಾಕ್ಷರ - ಕ್ಕಿರೆ ಶೋಭಿಕುಂ ।
ನವನಳಿನಾಹ್ವಯ ವೃತ್ತಮು - ತ್ತಮ ಸತ್ಪದಂ ॥ ೧೩೮ ॥

ಸುಕೇಸರ ವೃತ್ತಂ – ನಜಭಜರ – ೭ಕ್ಕೆಯತಿ

ಸುರ ಮಿಹಿರಾಮೃತ - ದ್ಯುತಿ ದಿವಾಕರಾಗ್ನಿಗಳ್ ।
ಚರಣದೊಳೈಕ್ಯದಿಂ - ಬೆರೆದು ಸೇರೆ ವಿಶ್ರಮಂ ।
ಗಿರಿಗೆ ನಿರಂತರಂ - ನೆಲಸೆ ರಂಜಿಕುಂ ಕರಂ ।
ಸುರುಚಿರ ಸತ್ಪದ - ಪ್ರಸರದಿಂ ಸುಕೇಸರಂ ॥ ೨೩೯ ॥

ಮಾಲಿನೀ ವೃತ್ತಂ – ನನಮಯಯ – ೮ಕ್ಕೆಯತಿ

ಅಮರ ವಿಬುಧ ಧಾತ್ರೀ - ತೋಯ ಪಾನೀಯ ವೃಂದಂ ।
ಕ್ರಮದೊಳೊಡನೆ ಪಾದ - ಕ್ಕೊಂದೆ ಮಾತಂಗಕೆಂದುಂ ।
ಸಮುಚಿತ ಸುವಿರಾಮಂ - ಮೂಡೆ ತಾನುದ್ಭವಿಕ್ಕುಂ ।
ವಿಮಲಿನ ಪದಯುಕ್ತಂ - ಮಾಲಿನೀನಾಮವೃತ್ತಂ ॥ ೧೪೦ ॥

ಮಣಿಗುಣನಿಕರ ವೃತ್ತಂ - ನನನನಸ - ೮ಕ್ಕೆಯತಿ

ಅನಿಮಿಷ ದಿವಿಷದ - ಮರ ಸುರ ಪವನರ್ ।
ಘನತರ ಚರಣದೆ - ನೆಲಸಿರೆ ಹಿತದೊಳ್ ।
ಸುನಿಯುತ ಯತಿ ಫಣಿ - ಗುದಯಿಸೆ ನಿರತಂ ।
ಜನಿಯಿಪುದುಚಿತದೆ - ಮಣಿಗುಣನಿಕರಂ ॥ ೧೪೧ ॥

ಅಷ್ಟಿ ಸಂಜ್ಞೆಯ ಛಂದೋವರ್ಗದ ೬೫೫೩೬ ವೃತ್ತಂಗಳೊಳ್

ಜಯಾನಂದ ವೃತ್ತಂ – ಯಮನಸರಗ - ೬, ೬ಕ್ಕೆಯತಿ

ಪಯೋ ಧಾತ್ರೀಚಕ್ರಾ - ದಿತಿಸುತ ಮರು - ದ್ವಹ್ನಿ ಮೃತ್ಯುಂ ।
ಜಯರ್ ಪ್ರೋದ್ಯತ್ಪಾದ - ಕ್ಕುದಯಿಸೆ ಕರಂ ಸದ್ವಿರಾಮಂ ।
ಪ್ರಯೋಗಂಗೊಂಡೆಂದುಂ - ಋತು ರಸಕೆ ಮೆಯ್ಯ್ಮೋಜಿ ಸಿದ್ಧಂ ।
ಜಯಾನಂದಂ ಛಂದಂ - ಸಲೆ ಸೊಗಯಿಕುಂ ಚೆಲ್ವಿನಿಂದಂ ॥ ೧೪೨ ॥

ಪಂಚಚಾಮರ ವೃತ್ತಂ - ಜರಜರಜಗ – ೯ಕ್ಕೆಯತಿ

ಪ್ರಭಾಕರಂ ಹಿರಣ್ಯರೇತ - ನಬ್ಜ ಬಂಧು ಪಾವಕಂ ।
ವಿಭಾಕರಂ ಮಹೇಶನಂಘ್ರಿ - ಯಲ್ಲಿ ಸೇರೆ ವಿಶ್ರಮಂ ।
ವಿಭಂಗರೂಪದಿಂದೆ ರತ್ನ - ವರ್ಣಕೊಪ್ಪೆ ರಂಜಿಕುಂ ।
ಶುಭಾಶ್ರಯೋಕ್ತಿ ಪುಂಜ ಶೋಭಿ - ಪಂಚಚಾಮರಾಹ್ವಯಂ ॥ ೧೪೩ ॥

ಭಾಮಿನೀವೃತ್ತಂ - ಭರನಭಭಗ - ೫, ೬ಕ್ಕೆಯತಿ

ಸೋಮ ಕೃಶಾನು ದೇವ ಶಶಿ - ಚಂದ್ರ ಮನೋಜಹರರ್ ।
ಕೋಮಲ ಪಾದಕಾವರಿಸಿ - ತೀವೆ ವಿನಿಶ್ಚಿತ ವಿ ।
ಶ್ರಾಮಮಜಸ್ರಮಂಬು ರಸ - ವರ್ಣಕೆ ಮೂಡೆ ಕರಂ ।
ಭಾಮಿನಿಯೆಂಬ ವೃತ್ತಮುದ - ಯಿಕ್ಕುಮನಾಕುಳದಿಂ ॥ ೧೪೪ ॥

ಪದ್ಮಮುಖೀ ವೃತ್ತಂ - ಭಭಭಭಭಗ ೯ಕ್ಕೆಯತಿ

ಇಂದು ಸುಧಾಂಶು ನಿಶಾಪತಿ - ವಾರ್ಧಿಜನೇಣಧರಂ ।
ನಂದಿವರೂಥನನುಕ್ರಮ - ದಿಂದಿರೆ ಸತ್ಪದದೊಳ್ ।
ನಂದರ ಸಂಖ್ಯೆಯ ವರ್ಣಕೆ - ವಿಶ್ರಮಮೈತರೆ ತಾ ।
ನಂದದೆ ಪದ್ಮಮುಖೀ ಪ್ರಕ - ಟಾಹ್ವಯಮುದ್ಭವಿಕುಂ ॥ ೧೪೫ ॥

ಜಲಧರವೃತ್ತಂ - ನಸಜಸಜಗ - ೮ಕ್ಕೆಯತಿ

ಬಲರಿಪು ಸಮೀರಣಂ - ದಿನಪತಿ ಪುರಂದರಂ ।
ಜಲಜಸಖನೀಶ್ವರಂ - ಪದದೊಳಿರೆ ದಂತಿಯೊಳ್ ।
ಚಲಿಸದೆ ಸುವಿಶ್ರಮಂ - ನೆಲಸೆ ಪರಿಶೋಭಿಕುಂ ।
ಜಲಧರ ಸಮಾಹ್ವಯಂ - ಮಧುರಪದ ಸಂಚಯಂ ॥ ೧೪೬ ॥

ಮಂಗಳ ವೃತ್ತಂ - ನಭಜಜಜಗ ೮ಕ್ಕೆಯತಿ

ಸುರ ಸುಧಾಕರ ದಿವಾ - ಕರ ಸೂರ್ಯ ರವೀಶ್ವರರ್ ।
ಚರಣದೊಳ್ ನಿಯತಿಯಿಂ - ನೆಲೆಗೊಂಡಿರೆ ವಿಶ್ರಮಂ ।
ಶರಧಿಯೊಳ್ ನಿಗಮದೊಳ್ - ತಲೆದೋರ್ಪ್ಪ ವಿರಾಜಿಕುಂ ।
ಪರಮ ಮಂಗಳವಚೋ - ನಿಧಿ ಮಂಗಳ ನಾಮಕಂ ॥ ೧೪೭ ॥

ಕಮಲದಳ ವೃತ್ತಂ - ಸಸನಜಸಗ - ೫, ೫ಕ್ಕೆಯತಿ

ಅಮರ ಸುರ - ದಿವಿಜ ರವಿ - ಗಂಧವಹ ಕಾಮ ।
ಪ್ರಮಥನರ - ಮಲಪದದೊಳೊಂದಿರೆ ವಿರಾಮಂ ॥
ಕ್ರಮದೊಳಿಪು - ವಿಷಯದೆಡೆ - ಗೊಪ್ಪುಬಗೆಗೊಳ್ಳಂ ।
ಕಮಲದಳ - ಮಮಲಪದ - ಸಮ್ಮಿಲಿತ ವೃತ್ತಂ ॥ ೧೪೮ ॥

ಅತ್ಯಷ್ಟಿ ಸಂಜ್ಞೆಯ ಛಂದೋವರ್ಗದ ೧೩೧೦೭೨ ವೃತ್ತಂಗಳೊಳ್

ಮಂದಾಕ್ರಾಂತಾ ವೃತ್ತಂ - ಮಭನತತಗಗ - ೪, ೯ಕ್ಕೆಯತಿ

ಎಂದುಂ ಧಾತ್ರೀ - ವಿಧು ಸುರ ನಭೋ - ವ್ಯೋಮ ಭೂತೇಶ ರುದ್ರರ್ ।
ಸಂದೋಹಂಗೊಂ - ಡಮಲಪದದೊಳ್ - ಸೇರೆ ಭಾಸ್ವದ್ವಿರಾಮಂ ।
ಸಂದೇಹಂಬೊ - ರ್ದದೆ ಶರಧಿಯೊಳ್ - ಶಾಸ್ತ್ರದೊಳ್ ತೋಱಿ ಸಿದ್ಧಂ ।
ಮಂದಾಕ್ರಾಂತಾ - ಹ್ವಯಮಮಲ ವಾ - ಙ್ಮಂದಿರಂ ಕಣ್ಗೊಳಿಕ್ಕುಂ ॥ ೧೪೯ ॥

ಶಿಖರಿಣೀ ವೃತ್ತಂ - ಯಮನಸಭಲಗ - ೬, ೬ಕ್ಕೆಯತಿ

ಜಲಂ ಧಾತ್ರೀಚಕ್ರಂ - ಕುಲಿಶಿ ಪವನಂ - ಶೀತಕಿರಣಂ ।
ಬಲಿಧ್ವಂಸಂ ರುದ್ರಂ - ವಿಮಲ ಪದದೊಳ್ - ರಂಜಿಸೆ ಕರಂ ।
ಜ್ವಲದ್ವಿಶ್ರಾಮಂಗಳ್ - ರಸ ಋತುಗಳೊಳ್ - ನಿಂದಿರೆ ವಚೋ ।
ವಿಲಾಸ ಪ್ರೋದ್ಭಾಸಂ - ವರ ಶಿಖರಿಣೀ - ವೃತ್ತಮೆಸೆಗುಂ ॥ ೧೫೦ ॥

ಪೃಥ್ವೀವೃತ್ತಂ - ಜಸಜಸಯಲಗ - ೮ಕ್ಕೆಯತಿ

ದಿನಾಧಿಪತಿ ಮಾರುತಂ - ತರಣಿ ಮಾತರಿಶ್ವಂ ಜಲಂ ।
ಜನಾರ್ದನನುಮಾಧವಂ - ಬೆರೆದು ತೀವೆ ಸತ್ಪಾದದೊಳ್ ।
ವಿನಿಶ್ಚಿತ ಸುವಿಶ್ರಮಂ - ಗಜಕೆ ಮೂಡೆ ವಿಭ್ರಾಜಿಕುಂ ।
ಮನೋಜ್ಞ ವಿಲಸತ್ಪದಾ - ಶ್ರಯದೆ ಪೃಥ್ವಿ ವೃತ್ತೋತ್ತಮಂ ॥೧೫೧॥

ಹರಿಣೀವೃತ್ತಂ – ನಸಮರಸಲಗ – ೬, ೪ಕ್ಕೆಯತಿ

ಸುರ ಪವನ ಭೂ - ಶೋಚಿಷ್ಕೇಶ - ಪ್ರಭಂಜನ ಮಾಧವ ।
ಸ್ಮರವಿಮಥನರ್ - ಪಾದಕ್ಕೊಂದುಂ - ನಿಗುಂಬಿಸೆ ಚೆಲ್ವಿನಿಂ ।
ವಿರತಿ ಹಿತದಿಂ - ಶಾಸ್ತ್ರಾಮ್ನಾಯಾ - ಕ್ಷರಕ್ಕಿರೆ ನಿಶ್ಚಯಂ ।
ಹರಿಣಿಪೆಸಱಿಂ - ಭಾಸ್ವದ್ವೃತ್ತಂ - ವಿರಾಜಿಸುಗುಂ ಕರಂ ॥ ೧೫೨ ॥

ಕೋಕಿಲಕ ವೃತ್ತಂ – ನಜಭಜಜಲಗ – ೭, ೬ಕ್ಕೆಯತಿ
ದಿವಿಜ ರವೀಂದು ಭಾ - ಸ್ಕರ ದಿವಾಕರ - ವಿಷ್ಣು ಮನೋ ।
ಭವಮಥನರ್ ಕರಂ - ನೆಲಸೆ ವಿಸ್ತರ - ಸತ್ಪದದೊಳ್ ।
ಸುವಿರತಿ ವಾಜಿಯೊಳ್ - ಋತುವಿನೊಳ್ ನಿಲೆ - ಸಂಭವಿಕುಂ ।
ಪ್ರವಿಲಸಿತೋಕ್ತಿ ಸಂ - ಕಲನಬಂಧದೆ - ಕೋಕಿಲಕಂ ॥ ೧೫೩ ॥

ಪ್ರಮತ್ತಕೋಕಿಲ ವೃತ್ತಂ - ನನರಜರಲಗ - ೧೦ಕ್ಕೆಯತಿ
ತ್ರಿದಶ ವಿಬುಧ ಪಾವಕಾರ್ಕ - ವಹ್ನಿ ವಿಷ್ಣು ಶಂಕರರ್ ।
ಪದದೊಳುಚಿತ ರೀತಿಯಿಂದ - ಪೊಂದುಗೂಡೆ ಸಂತತಂ ।
ವಿದಿತ ದಶಮ ವರ್ಣದಲ್ಲಿ - ಸದ್ವಿರಾಮವೊಪ್ಪೆ ತಾ ।
ನುದಯಿಸುಗುಮನಾಕುಳಂ ಪ್ರ - ಮತ್ತಕೋಕಿಲಾಹ್ವಯಂ ॥ ೧೫೪ ॥

ಧೃತಿ ಸಂಜ್ಞೆಯ ಛಂದೋವರ್ಗದ ೨೬೨೧೪೪ ವೃತ್ತಂಗಳೊಳ್

ಕುಸುಮಿತ ಲತಾವೇಲ್ಲಿತಾ ವೃತ್ತಂ - ಮತನಯಯಯ - ೫, ೬ಕ್ಕೆಯತಿ
ಭೂವ್ಯೋಮಾಮರ್ತ್ಯೋ - ದಕ ಜಲ ಪಯ- ಸ್ಸಂಚಯಂ ಮಿಶ್ರದಿಂದಂ।
ಸುವ್ಯಾಪ್ತಂಗೊಂಡೊ - ಪ್ಪಿರೆ ಚರಣದೊಳ್ - ಬಾಣ ಶಾಸ್ತ್ರಕ್ಕಜಸ್ರಂ ।
ದಿವ್ಯೋದ್ಯದ್ಭಾಸ್ವ - ದ್ವಿರತಿ ಭರದಿಂ - ಪೊರ್ದೆ ಸಂಶೋಭಿಕುಂ ಸು ॥
ಶ್ರಾವ್ಯೋಕ್ತಿವ್ಯಕ್ತಂ - ಕುಸುಮಿತಲತಾ - ವೇಲ್ಲಿತಾನಾಮವೃತ್ತಂ ॥೧೫೫॥

ಮಲ್ಲಿಕಾಮಾಲಾವೃತ್ತಂ - ರಸಜಜಭರ - ೮, ೫ಕ್ಕೆಯತಿ
ಜ್ವಾಲಿ ವಾಯು ದಿವಾಕರಂ - ದಿನನಾಯಕಂ - ವಿಧು ಪಾವಕಂ ।
ಲೀಲೆಯಿಂದಮಲಾಂಘ್ರಿಯೊಳ್ - ಬೆರೆದೋಳಿಯಿಂದಿರೆ ನಿಶ್ಚಿತಾ ।
ಲೋಲ ವಿಶ್ರಮವಾವಗಂ - ವಸು ಬಾಣಕೈತರೆ ಮಲ್ಲಿಕಾ ।
ಮಾಲೆ ನಿರ್ಮಲ ಸತ್ಪದ - ವ್ರಜಮಾಲೆ ಸಂಜನಿಕುಂ ಕರಂ ॥ ೧೫೬ ॥

ಅರವಿಂದ ವೃತ್ತಂ – ನನಸಸತಯ – ೪, ೯ಕ್ಕೆಯತಿ
ಅದಿತಿಜ - ದಿವಿಜ ಸಮೀರಣ ವಾತ - ವ್ಯೋಮ ಜಲಂಗಳ್ ।
ಪದದೆಡೆ - ಗೆಱಕದೊಳೊಂದೆ ವಿರಾಮಂ - ತಪ್ಪದೆ ಚೆಲ್ವಿಂ ।
ಮುದದಿಗೆ - ನಿಧಿಗೆ ವಿರಾಜಿಸೆ ನಿತ್ಯಂ - ತಾನುದಯಿಕ್ಕುಂ ।
ಮೃದುತರ - ವರಪದದಿಂದರವಿಂದಂ - ಸುಂದರ ಬಂಧಂ ॥ ೧೫೭ ॥

ಅತಿಧೃತಿಸಂಜ್ಞೆಯ ಛಂದೋವರ್ಗದ ೫೨೪೨೮೮ ವೃತ್ತಂಗಳೊಳ್

ಶಾರ್ದೂಲವಿಕ್ರೀಡಿತವೃತ್ತಂ – ಮಸಜಸತತಗ - ೧೨ಕ್ಕೆಯತಿ

ಧಾತ್ರೀ ವಾಯು ಸರೋಜಮಿತ್ರ ಪವನ - ವ್ಯೋಮಾಭ್ರ ಗೌರೀಧವರ್ ।
ಸೂತ್ರೋಕ್ತಕ್ರಮದಿಂ ವಿಶಾಲ ಪದದೊಳ್ - ಸೇರ್ದೊಂದೆ ಸದ್ರೀತಿಯಿಂ ।
ಮಿತ್ರಕ್ಷೇತ್ರದೆ ವಿಶ್ರಮಂ ನಿಯತಿಯಿಂ - ನಿಂದೊಪ್ಪೆ ಸಂಶೋಭಿಕುಂ ।
ಶ್ರೋತ್ರಾನಂದಕರೋಕ್ತಿ ಪುಂಜಭರಿತಂ - ಶಾರ್ದೂಲವಿಕ್ರೀಡಿತಂ ॥೧೫೮॥

ಮೇಘವಿಸ್ಫೂರ್ಜಿತಾ ವೃತ್ತಂ – ಯಮನಸರರಗ – ೬, ೬ಕ್ಕೆಯತಿ

ಜಲಂ ಪೃಥ್ವೀಚಕ್ರಂ - ಮಘವನನಿಲಂ - ಪಾವಕಂ ವೀತಿಹೋತ್ರಂ ।
ಲಲಾಟಾಕ್ಷಂ ಭಾಸ್ವ - ದ್ವಿಮಳ ಪದದೊಳ್ - ಸೇರೆ ನಿರ್ದೋಷದಿಂ ನಿ ।
ಶ್ಚಲೋದ್ಯದ್ವಿಶ್ರಾಮಂ - ಋತು ರಸಕೆ ಮ- ಯ್ದೋಜೆ ವಿಭ್ರಾಜಿಕುಂ ನಿ।
ರ್ಮಲೋಕ್ತಿಪ್ರೋದ್ಭಾಸಂ - ಮೃದುಪದಯುತಂ - ಮೇಘವಿಸ್ಫೂರ್ಜಿ
ತಾಖ್ಯಂ ॥ ೧೫೯ ॥

ಖಚರಪ್ಲುತ ವೃತ್ತಂ – ರಸಸತಜಜಗ – ೧೦ಕ್ಕೆಯತಿ

ಪಾವಕಂ ಪವನಂ ಪವಮಾನಂ - ವ್ಯೋಮಮಹಃ ಪತಿ ಭಾಸ್ಕರಂ ।
ಭಾವಜಾಂತಕನೋಳಿಯೊಳ್ಬಿಂ - ದೊಪ್ಪಿರೆ ವಿಸ್ತರ ಪಾದದೊಳ್ ।
ಪಾವನೋಜ್ವಲ ವಿಶ್ರಮಮಾಶಾ - ವರ್ಣಕೆ ನಿಂದಿರೆ ಶೋಭಿಕುಂ ।
ಭಾವ ರಮ್ಯವಚೋಮಿಲಿತಂ ಸ - ನ್ನಾದಯುತಂ ಖಚರಪ್ಲುತಂ ॥ ೧೬೦॥

ತರಳ ವೃತ್ತಂ – ನಭರಸಜಜಗ – ೯, ೫ಕ್ಕೆಯತಿ

ಸುರ ಸುಧಾಕರ ಪಾವಕ - ಶ್ವಸನಾಂಬುಜ - ಪ್ರಿಯ ಭಾಸ್ಕರ ।
ಸ್ಮರವಿಮರ್ದನರಂಘ್ರಿಯೊಳ್ - ಬೆರೆದೈಕ್ಯದಿಂದಿರೆ ಸಂತತಂ ।
ವಿರಮಣಂ ನಿಧಿ ಬಾಣದೊಳ್ - ಬರೆ ಚೆಲ್ವಿನಿಂದಭಿರಂಜಿಕುಂ ।
ತರಳವೃತ್ತಮಮೋಘಸ - ತ್ಸರಸೋಕ್ತಿಸಂಚಯಸಂಚಿತಂ ॥ ೧೬೧ ॥

ಕೃತಿ ಸಂಜ್ಞೆಯ ಛಂದೋವರ್ಗದ ೧೦೪೮೫೭೬ ವೃತ್ತಂಗಳೊಳ್

ಸುವದನಾ ವೃತ್ತಂ – ಮರಭನಯಭಲಗ – ೭, ೭ಕ್ಕೆಯತಿ

ಧಾತ್ರೀ ಸಪ್ತಾರ್ಚಿ ಶೀತ - ದ್ಯುತಿ ದಿವಿಜ ಪಯ - ಶ್ಯುಭ್ರಾಂಶು
ದಿತಿಜಾ ।
ಮಿತ್ರಾನಂಗಪ್ರಣಾಶರ್ - ರುಚಿರ ಚರಣದೊಳ್ - ಸಾಲ್ಗೊಂಡಿರೆ ಕರಂ ।
ಗೋತ್ರಾಶ್ವಸ್ಥಾನಕೆಂದುಂ - ವಿದಿತ ವಿರಮಣಂ - ಮೆಯ್ಗೊಳ್ಗೆ ನಿಸದಂ।
ಚಿತ್ರೋಕ್ತಿವ್ರಾತರಂಜ - ತ್ಪದದೆ ಸುವದನಾ - ವೃತ್ತಂ ಸೊಗಯಿಕುಂ
॥ ೧೨೬ ॥

ಸುವಂಶಾವೃತ್ತಂ – ಮಭನತತತಗಗ – ೭, ೬ಕ್ಕೆಯತಿ

ಭೂಮಿ ಸ್ವಾಹಾಧಿನಾಥಂ - ತುಹಿನಕಿರಣಂ - ವಾಸವಂ ತಾರಕಾಧ್ವಂ ।
ವ್ಯೋಮಂ ಕಾಮಾರಿ ರುದ್ರಂ - ವಿಮಲ ಪದದೊಳ್ - ಸೇರೆ ನಿರ್ದಿಷ್ಟ
ಸದ್ವಿ ।
ಶ್ರಾಮಂಗಳ್ ಶೈಲ ಶಾಸ್ತ್ರಾ - ಕ್ಷರಕೆ ನಿರತಂ - ತೋಱೆ ನಿರ್ದುಷ್ಟ
ವಾಕ್ಯ ।
ಸ್ತೋಮೋದ್ಭಾಸಂ ಸುವಂಶಾ - ಹ್ವಯಮುದಯಿಕುಂ - ಚೆಲ್ವಿನಿಂ
ನಿರ್ವಿವಾದಂ ॥ ೧೬೩ ॥

ಛಂದೋವೃತ್ತಂ – ರನಭಮಸಸಲಗ – ೧೦ಕ್ಕೆಯತಿ

ಹವ್ಯವಾಹ ಸುರ ಚಂದ್ರ ಧರಿತ್ರೀ - ವಾಯು ಸಮೀರ ಹರೀಶ್ವರರ್ ।
ಭವ್ಯ ಸತ್ಪದದೊಳೊಂದಿರೆ ಚೆಲ್ವಿಂ - ತಪ್ಪದೆ ಧೂರ್ಜಟಿ ವರ್ಣದೊಳ್ ।
ದಿವ್ಯ ವಿಶ್ರಮಣಮೊಪ್ಪಿರೆ ನಿತ್ಯಂ - ಕಣ್ಗೊಳಿಕುಂ ನಿರವದ್ಯ ಸು ।
ಶ್ರಾವ್ಯ ಚಾರು ಪದಬಂಧದೆ ಛಂದೋ - ವೃತ್ತಮಭಂಗದೆ ಛಂದದೊಳ್
॥ ೧೬೪ ॥

ಮತ್ತೇಭವಿಕ್ರೀಡಿತವೃತ್ತಂ – ಸಭರನಮಯಲಗ – ೧೩ಕ್ಕೆಯತಿ

ಅನಿಲೇಂದು ಜ್ವಲನಾಮರ ಕ್ಷಿತಿ ಪಯ ಶ್ರೀಕಾಂತ ಗೌರೀವರರ್ ।
ಘನ ದಿವ್ಯಾಂಘ್ರಿಯೊಳೈಕ್ಯದಿಂದವಿರತಂ - ನಿಂದೊಪ್ಪೆ ಸದ್ವಿಶ್ರಮಂ ।

ಸುನಿಯುಕ್ತ ಕ್ರಮದಿಂ ತ್ರಯೋದಶಕೆ ತಾಂ - ಮೆಯ್ದೋಜಿ
ವಿಭ್ರಾಜಿಕುಂ ।
ಜನ ಸಮ್ಮೋಹಕ ಭವ್ಯನಾದಭರಿತಂ - ಮತ್ತೇಭವಿಕ್ರೀಡಿತಂ ॥ ೧೬೫ ॥

ಉತ್ಪಲಮಾಲಾ ವೃತ್ತಂ –ಭರನಭಭರಲಗ – ೧೦ಕ್ಕೆಯತಿ
ಉತ್ಪಲಬಂಧು ವಹ್ನಿ ದಿವಿಜೇಂ - ದು ವಿಧು ಜ್ವಲನಾಚ್ಯುತೇಶರು ।
ದ್ಯುತ್ಪದದೊಳ್ ನಿಗುಂಬಿಸೆ ಕರಂ - ದಶಮಾಕ್ಷರದೊಳ್ ನಿರಂತರಂ ।
ಸತ್ಪರಿಶುದ್ಧ ವಿಶ್ರಮಣಮೊ - ಪ್ಪಿರೆ ನಿಶ್ಚಿತ ಸೂತ್ರ ರೀತಿಯಿಂ ।
ದುತ್ಪಲಮಾಲೆ ಕೋಮಲ ಲಸ - ತ್ಪದಮಾಲೆ ಸಮಂತು ಶೋಭಿಕುಂ ॥ ೧೬೬

ಉಜ್ವಲ ವೃತ್ತಂ – ಭಭಭಮಸಸಲಗ - ೧೧ಕ್ಕೆಯತಿ
ಶೀತಕರೇಂದು ಸುಧಾಕರ ಪೃಥ್ವೀ - ವಾತ ಸಮೀರಣ ದಾನವಾ ।
ರಾತಿ ಮನೋಜಹರರ್ ಪದದೊಳ್ ತಾ - ಮೋತು ಪೊದಳ್ದಿರೆ
ವಿಶ್ರಮಂ ।
ರೀತಿಯ ಮೀಜದೆ ರುದ್ರನೊಳೆಂದುಂ - ದ್ಯೋತಿಸಿ ನಿಂದಿರೆ ಸತ್ಪದ ।
ವ್ರಾತ ಸಮುಜ್ವಲಮುಜ್ವಲವೃತ್ತಂ ಖ್ಯಾತ ಚತುಷ್ಪದಿಗೊಪ್ಪುಗುಂ

ನಗರಂಜಿತ ವೃತ್ತಂ - ಭಭಭಭರಸಲಗ - ೧೨ಕ್ಕೆಯತಿ
ಇಂದು ಸುಧಾಂಶು ನಿಶಾಪತಿ ಕೈರವ - ಬಂಧು ವಹ್ನಿ ಸಮೀರಣಂ ।
ಮಂದರಶೈಲಧರಂ ಪರಮೇಶ್ವರ - ನೊಂದುಗೂಡಿರೆ ಪಾದದೊಳ್ ।
ಕುಂದದೆ ಭಾಸ್ಕರ ವರ್ಣಕೆ ವಿಶ್ರಮ - ಮಂದದಿಂದಿರೆ ಶೋಭಿಕುಂ ।
ಸುಂದರ ಬಂಧುರ ವಿಸ್ತರ ಸತ್ಪದ - ರಂಜಿತಂ ನಗರಂಜಿತಂ ॥ ೧೬೭ ॥

ಅನವದ್ಯ ವೃತ್ತಂ - ನಭಭಮಸಸಲಗ - ೧೧ಕ್ಕೆಯತಿ
ಸುರ ಸುಧಾಕರ ಚಂದ್ರ ಧರಿತ್ರೀ - ಮಾರುತ ವಾಯು ಜನಾರ್ದನ ।
ಸ್ಮರವಿಭಂಜನರೈಕ್ಯದೊಳುದ್ಯ - ತ್ಪಾದದೊಳೊಪ್ಪಿರೆ ಸೊಂಪಿನಿಂ ।
ವಿರತಿಯೊಪ್ಪರವರ್ಣದೊಳೆಂದುಂ - ಪತ್ತಿರೆ ರಂಜಿಸುಗುಂ ಕರಂ ।
ಸರಸಸತ್ಪದದಿಂದನವದ್ಯಂ ತಾನನವದ್ಯಸಮಾಹ್ವಯಂ ॥ ೧೬೮ ॥

ಪ್ರಕೃತಿಸಂಜ್ಞೆಯು ಛಂದೋವರ್ಗದ ೨೦೯೭೧೫೨ವೃತ್ತಂಗಳೊಳ್

ಸ್ರಗ್ಧರಾವೃತ್ತಂ - ಮರಭನಯಯಯ - ೭, ೭ಕ್ಕೆಯತಿ

ಉರ್ವೀ ಸಪ್ತಾರ್ಚಿ ಶೀತ - ದ್ಯುತಿ ದಿವಿಜ ಪಯೋ - ವಾರಿ ಪಾನೀಯ ಜಾಲಂ ।
ಪರ್ವಿದೋರ್ಬಿಗ್ಗಿಂ ವಿಶುದ್ಧ -, ಕ್ರಮದೆ ಚರಣದೊಳ್ - ಸೇರೆ ಭಾಸ್ವದ್ವಿರಾಮಂ ।
ನಿರ್ವಾಹಂಗೊಂಡು ಧಾತ್ರೀ - ಧರ ಹಯದೆಡೆಯೊಳ್ - ತೋಱೆ ತಾನುದ್ಭವಿಕ್ಕುಂ ।
ಸರ್ವಾಲಂಕಾರ ಯುಕ್ತಂ - ಮೃದುಪದಭರಿತಂ -ಸ್ರಗ್ಧರಾನಾಮವೃತ್ತಂ ॥ ೧೭೦ ॥

ತರಂಗ ವೃತ್ತಂ - ರಸರಸರಸರ - ೦೨ಕ್ಕೆಯತಿ

ವೀತಿಹೋತ್ರ ಸುರ ಪಾವಕಾನಿಮಿಷ - ಜಾತವೇದ ದಿವಿಜಾನಲ ।
ವ್ರಾತಮುನ್ನತ ವಿಶಾಲ ಪಾದದೆ - ಸು ರೀತಿಯಿಂ ಬೆರೆದು ಕೂಡೆಖ ।
ದ್ಯೋತ ವರ್ಣದೆ ವಿಶುದ್ಧ ವಿಶ್ರಮಣ - ಮೋತುಮೂಡೆ ಸೊಬಗಿಂದೆವಿ।
ಖ್ಯಾತಿಯೊಂದಿದ ತರಂಗಮುಜ್ವಲ ವ - ಚೋತರಂಗಮಭಿರಂಜಿಕುಂ ॥ ೧೭೧ ॥

ಚಂದ್ರಕಾಂತ ವೃತ್ತಂ - ರನಭಭಭಭರ - ೭, ೬ಕ್ಕೆಯತಿ

ರುಂದ್ರ ಸಚ್ಚರಣದೊಳ್ - ದಹನಂ ಮಘವಂ - ಹಿಮರಶ್ಮಿ ಸುಧಾಕರಂ।
ಚಂದ್ರನುತ್ಪಲಸಖಂ - ಜ್ವಲನಂ ವಿಹಿತ - ಕ್ರಮದಿಂ ನೆರೆದೊಪ್ಪೆ ಯೋ।
ಗೀಂದ್ರವರ್ಣಕೆ ರಸಾ - ಕ್ಷರಕೊಚ್ಚತದಿಂ ಯತಿಯೈತರೆ ಸಂತತಂ ।
ಚಂದ್ರಕಾಂತಮಮಲೋ - ನ್ನತಸಾಂದ್ರಪದ - ವ್ರಜದಿಂ ಪರಿಶೋಭಿಕುಂ ॥ ೧೭೨ ॥

ಚಂಪಕಮಾಲಾ ವೃತ್ತಂ . ನಜಭಜಜಜರ - ೧೧ಕ್ಕೆಯತಿ

ಸುರ ರವಿಶೀತದೀಧಿತಿ ದಿವಾ - ಕರ ಭಾನು ದಿನೇಶ ಪಾವಕರ್ ।
ಚರಣವೆ ಸುಕ್ರಮಾನುಗತಿಯಿಂ - ಬೆರೆದೊಂದೆ ವಿಶಿಷ್ಟ ಸೂತ್ರದೊಳ್ ।
ವಿರಮಣಮಾವಗಂ ನಿಯತಿಯಿಂ - ಹರ ವರ್ಣದೊಳೊಪ್ಪೆ ನಿಶ್ಚಯಂ ।
ಸುರುಚಿರ ಸತ್ಪದ ಪ್ರಕರಮಾ - ಲಿಕೆ ಚಂಪಕಮಾಲೆ ರಂಜಿಕುಂ ॥ ೧೭೪ ॥

ವಿಕೃತಿ ಸಂಜ್ಞೆಯ ಛಂದೋವರ್ಗದ ಲಕ್ಷಲಕ್ಷಣಂಗಳ
ವೃತ್ತಂಗಳೊಳ್

ಮತ್ತಾಕ್ರೀಡಾವೃತ್ತಂ - ಮಮತನನನನಲಗ - ೮, ೫ಕ್ಕೆಯತಿ

ಉತ್ತುಂಗೋರ್ವೀ ಧಾತ್ರೀ ವ್ಯೋಮಾ - ಮರ ದಿವಿಜ ವಿಬುಧ - ಸುರ
ಹರಿ ಗಿರಿಶರ್ ।
ಮೊತ್ತಂಗೊಂಡುದ್ಯತ್ಸತ್ಪಾದ - ಕ್ಕೆಱಕದೊಳೊದವಿರೆ - ವಸು ಗಜದೆಡೆ
ಯೊಳ್ ।
ಪತ್ತಿರ್ದಿಂದಂ ವಿಶ್ರಾಮಂಗಳ್ - ನಿಯತಿಯೊಳೊಗೆದಿರೆ - ಕರಮುದ
ಯಿಸುಗುಂ ।
ಮತ್ತಾಕ್ರೀಡಾವೃತ್ತಂ ದಿವ್ಯ - ಶ್ರುತಿ ಮಧುರ ವಚನ - ನಿಚಯ
ವಿರಚಿತಂ ॥ ೧೮೦ ॥

ಮಯೂರಗತಿ ವೃತ್ತಂ - ಭಭಭಭಭಭಭಗಗ - ೧೨ಕ್ಕೆಯತಿ

ಇಂದು ಹಿಮಾಂಶು ನಿಶಾಕರನುತ್ಪಲ - ಬಂಧು ಸುಧಾಕಿರಣಂ ವಿಧು
ಚಂದ್ರಂ ।
ನಂದಿವರೂಥನುಮಾಧವನಂಘ್ರಿಯೊ - ಳೊಂದಿರೆ ನಿಶ್ಚಿತ ಚಾರು
ವಿರಾಮಂ ।
ಕುಂದದೆ ಸಂತತಮೊಚ್ಚತದಿಂದರ - ವಿಂದಸಖಾಕ್ಷರಕೈತರೆ ಸಿದ್ಧಂ ।
ಛಂದದೊಳೊಪ್ಪಿ ವಿರಾಜಿಸುಗುಂ ಸೊಬಗಿಂದೆ ಮಯೂರಗತಿ
ಪ್ರಥಿತಾಖ್ಯಂ ॥ ೧೮೧ ॥

ಹಂಸಗತಿ ವೃತ್ತಂ - ಸಜಜಜಜಜಲಗ - ೭, ೬ಕ್ಕೆಯತಿ

ದಿವಿಜ ವಿರೋಚನ - ಭಾನು ವಿಕರ್ತನ - ಸೂರ್ಯ ಖರಾಂಶು ದಿನೇಶ
ರಮಾ ।
ಧವ ಗಿರಿಜೇಶರ - ಸುಕ್ರಮದಿಂ ನೆಲೆ - ಗೊಂಡಿರೆ ವಿಸ್ತರ
ಸತ್ಪದದೊಳ್ ।
ಸುವಿರತಿ ಪರ್ವತ - ಶಾಸ್ತ್ರಕೆ ಪದ್ಧತಿ - ಯಂದದೆ ಮೂಡಿರೆ ಹಂಸಗತಿ ।
ಪ್ರವಿದಿತ ವೃತ್ತಮುದಗ್ರಲಸತ್ಪದ - ಯುಕ್ತಮನಾಕುಳದಿಂದೊಗೆಗುಂ
॥ ೧೮೨ ॥

ಸಂಕೃತಿ ಸಂಜ್ಞೆಯ ಛಂದೋವರ್ಗದ ೧೩೭೭೭೨೧೬ ವೃತ್ತಂಗಳೊಳ್

ತನ್ವೀವೃತ್ತಂ - ಭತನಸಭಭನಯ - ೫, ೭ಕ್ಕೆಯತಿ
ಶೀತಮಯೂಖಾಂ - ಬರ ಸುರ ಪವನ - ಶ್ವೇತಮರೀಚಿ ವಿಧು ವಿಬುಧ
ತೋಯ ।
ವ್ರಾತಮುದಗ್ರೋ - ನ್ನತ ಚರಣದೆ ನಿ - ರ್ಣೀತ ವಿಧಾನದೆ ನೆರೆಯೆ
ವಿರಾಮಂ ।
ಭೂತ ಧರಿತ್ರೀ - ಧರದೆಡೆಗನಿಶಂ - ರೀತಿಯ ವಿೂಜದೆ ನೆಲಸಿರೆ ತನ್ವೀ ।
ಖ್ಯಾತ ಸುವೃತ್ತಂ ಸದಮಳ ಪದಸಂ ಘಾತಯುತಂ ಸೊಬಗಿನೊಳಿದ
ಯಿಕ್ಕುಂ ॥ ೧೮೩ ॥

ಅರ್ಕಮರೀಚಿವೃತ್ತಂ - ನಜಭಭಭಭಜರ - ೭, ೬ಕ್ಕೆಯತಿ
ಸುರ ದಿನನಾಯಕಾಮೃತರಶ್ಮಿ ಸುಧಾ - ಕರ ಚಂದ್ರ ಶಶಿ ಭಾನು ಪಾವಕರ್।
ಚರಣದೊಳಾವಗಂ - ವಿಹಿತ ಕ್ರಮದಿಂ - ಬೆರೆದೊಂದೆ ಲಯಕೊಪ್ಪುವಂ
ದದೊಳ್ ।
ಸ್ವರ ರಸ ವರ್ಣದೊಳ್ - ವರ ವಿಶ್ರಮಣಂ - ಬರೆ ತಪ್ಪದೆ ವಿಶುದ್ಧ
ರೀತಿಯೊಳ್ ।
ಸರಸದೆ ಬರ್ಕಮ - ರ್ಕಮರೀಚಿ ಮನೋ - ಹರ ವೃತ್ತಮಮಲೋಕ್ತಿ
ಸಂಗತಂ ॥ ೧೮೪ ॥

ಲಲಿತಲತಾವೃತ್ತಂ – ನನಭನಜನನಯ - ೭,೭, ೭ಕ್ಕೆಯತಿ
ಕುಲಿಶಿ ಶತಮುಖಂ – ಶಶಿ ಮಘವನಿನಂ - ಬಲರಿಪು ನಮುಚಿವಿಘಾತಂ ।
ಜಲಮುನುಪಮನಿ - ರ್ಮಲತರ ಪದದೊಳ್ - ನೆಲಸಿರೆ ಹಿತದೊಳಜಸ್ರಂ।
ಕುಲಗಿರಿ ತುರಗಾ - ಕ್ಷರಕೆ ವಿರಮಣಂ - ಚಲಿಸದೆ ನಿಲೆ ಘನವೃತ್ತಂ ।
ಲಲಿತಲತೆ ವಿರಾ - ಜಿಪುದತಿಶಯ ಸ - ಲ್ಲಲಿತ ಪದ ನಿಚಯದಿಂದಂ
॥ ೧೮೫ ॥

ಅಭಿಕೃತಿ ಸಂಜ್ಞೆಯ ಛಂದೋವರ್ಗದ ೩೩೫೫೪೪೪೩೨
ವೃತ್ತಂಗಳೊಳ್

ಕ್ರೌಂಚಪದಾ ವೃತ್ತಂ - ಭಮಸಭನನನನಗ - ೫,೫. ೮ಕ್ಕೆಯತಿ

ಇಂದು ಧರಿತ್ರೀ - ಮಾರುತ ಚಂದ್ರ - ತ್ರಿದಶ ವಿಬುಧ ಸುರ ದಿವಿಜ
ಪುರಹರರ್ ।
ಸಂದಣಿಗೊಂಡುದ್ಯತ್ಪದದೊಳ್ ಸಂ - ಭವಿಸಿರೆ ವಿಲಸಿತ ವಿರಮಣ
ಮಣಿಶಂ ।
ಕಂದದೆ ಚೆಲ್ವಿಂ - ಮಾರ್ಗಣ ಭೂತ - ದ್ವಿರದದೊಳೊಗೆದಿರೆ ಕರಮುದ
ಯಿಸುಗುಂ ।
ಸುಂದರವೃತ್ತಂ - ಕ್ರೌಂಚಪದಾಖ್ಯಂ ಸುವಚನ ವಿರಚಿತ ಮೃದುಪದ
ಭರಿತಂ ॥ ೧೮೬ ॥

ಖೇಟಕವೃತ್ತಂ - ನಜನಸನನಭಭಗ - ೫. ೭ಕ್ಕೆಯತಿ

ಸುರ ತಪನಾದಿತಿಸುತ ಪವನಾ - ಮರ ದಿವಿಜ ಸುಧಾಕರ ಶೀತಕರ ।
ಸ್ಮರಹರರುಜ್ವಲತರ ಪದದೊಳ್ - ಬೆರೆದೆಜಕದೊಳೊಂದಿರೆ ಪದ್ಧತಿಯಿಂ ।
ಶರ ವಸುಧಾ - ಧರ ನಿಲಯಕೆ ಸ - ದ್ವಿಮುಖಣವೊಡನೊಪ್ಪಿರೆ
ನಿರ್ಣಯದಿಂ ॥
ಸರಸದೆ ಖೇಟಕಮತಿಶಯುವಿ - ಸ್ತರಪದ ಕಟಕಂ - ಕರಮುದ್ಭವಿಕುಂ
॥ ೧೮೭ ॥

ಹಂಸಲಯವೃತ್ತಂ - ನನನಸಸಭಭಭಗ - ೮, ೭ಕ್ಕೆಯತಿ

ಅಮರ ಸುರ ದಿವಿಷ - ದದಿತಿಸುತ ಮರು - ತ್ಸೋಮ ಶಶಾಂಕ
ಸುಧಾಕಿರಣ ।
ಪ್ರಮಥಪತಿಯಮಲ - ರುಚಿರ ಚರಣದೊಳ್ - ನಿಂದಿರೆ ತಪ್ಪದನು
ಕ್ರಮದೊಳ್ ।
ಸಮುಚಿತನಿಯಮದೆ - ವಿರಮಣವಿಭದೊಳ್ - ಭೂಧರದೊಳ್
ತಲೆದೋಱೆ ಕರಂ ।
ವಿಮಲಿನ ಸುವಚನ - ನಿಚಯದೊಳೆಸೆಗುಂ - ಹಂಸಲಯಂ
ರಮಣೀಯಲಯಂ ॥ ೧೮೮ ॥

ವಿದಳಿತಸರಸಿಜ ವೃತ್ತಂ – ನನನನನನನನಗ – ೧೨ಕ್ಕೆಯತಿ

ಅದಿತಿಜ ಗಣಮಿನಪರಿಮಿತ - ಮೊದಮಿರೆ ಬೆರೆದೆಱಕದೆ ತುದಿಯೊಳ್ ।
ಮದನಮಥನನೊಡನೊಗೆದಿರೆ - ಪದದೊಳುಚಿತ ಸುನಿಯತ
ವಿಧಿಯೊಳ್ ।
ವಿದಿತ ವಿರತಿ ದಿನಪತಿ ಯೆಡೆ- ಗುದಯಿಸೆ ಸೊಬಗಿನೊಳೊಡನೆಸೆಗುಂ ।
ವಿದಳಿತಸರಸಿಜಮಮಲಿನ - ಮೃದುತರ ವಿಶದ ವಚನ ರಚಿತಂ ॥ ೧೮೯ ॥

ಉತ್ಕೃತಿ ಸಂಜ್ಞೆಯ ಛಂದೋವರ್ಗದ ೬೭೧೦೮೮೬೪ ವೃತ್ತಂಗಳೊಳ್

ಭುಜಂಗವಿಜೃಂಭಿತ ವೃತ್ತಂ - ಮಮತನನನರಸಲಗ - ೮, ೧೧ಕ್ಕೆಯತಿ

ಭೂಮಿ ಕ್ಷೋಣೀ ವ್ಯೋಮಾಮರ್ತ್ಯ - ತ್ರಿದಶ ಸುರ ದಹನ ಪವನ
ತ್ರಿವಿಕ್ರಮ ಶಂಕರರ್ ।
ಸಾಮೀಪ್ಯಂಗೊಂಡಿರ್ದೊಳ್ಪಿಂದಂ- ಪ್ರಚುರ ಸುರುಚಿರ ಚರಣದೊಳ್
ನಿಗುಂಬಿಸೆ ದಿವ್ಯವಿ ।
ಶ್ರಾಮಂ ದಂತೀಶಾನ ಸ್ಥಾನ - ಕ್ಕುಚಿತದೊಳುದಯಿಸೆ ನಿರತಂ -
ಸಮಂತುದಯಿಕ್ಕುಮು ।
ದ್ದಾಮೋದ್ಯದ್ವಲತ್ತಂ - ನಾದೋಜ್ಜೃಂ - ಭಿತ ಘನತರ ಪದಭರಿತಂ -
ಭುಜಂಗವಿಜೃಂಭಿತಂ ॥ ೧೯೦ ॥

ಶಂಭುನಟನವೃತ್ತಂ - ಜಸನಭಜಸನಭಲಗ - ೬, ೮ಕ್ಕೆಯತಿ

ದಿವಾಕರ ಮರುದ್ದ್ವಿಜ ಚಂದ್ರ ದಿನಕೃ - ತ್ಪವನ ದೇವ ಶಶಿ ಮಾಧವ
ಮನೋ ।
ಭವಾಂತಕರನು - ಕ್ರಮದೆ ಸಚ್ಚರಣದೊಳ್ - ತಪೆ ಪೊದಳ್ದಿರೆ ವಿಶೇಷ
ವಿಧಿಯಿಂ ।
ಸುವಿಶ್ರಮಣಮೊ - ಚ್ಚತದೆ ಶಾಸ್ತ್ರ ಗಜಕು - ದ್ಭವಿಸೆ ನಿಶ್ಚಯದೆ ಸಂಭವಿ
ಸುಗುಂ ।
ಪ್ರವಿಸ್ತರ ಪದಾಶ್ರಯದೆ ಶಂಭುನಟನಂ - ವಿವಿಧ ವಾಕ್ಯ ನಿಕುರುಂಬ
ಘಟನಂ ॥ ೧೯೧ ॥

ಮುನಿಮತ ವೃತ್ತಂ - ನಜನಸನನನಜಲಗ - ೭. ೭ಕ್ಕೆಯತಿ
ಅನಿಮಿಷ ಭಾಸ್ಕರ - ಸುರ ತಪನಾದಿತಿ - ತನಯ ವಿಬುಧ ದಿವಿಷದ್ದಿನಕೃ।
ದ್ದನುಜನಿಷೂದನ - ಮನಸಿಜ ಮರ್ದನ - ರನುಪಮ ಪದಕಿರೆ ವಿಸ್ತರದಿಂ
ಮುನಿ ಗಿರಿ ವರ್ಣಕೆ ಸುನಿಯತ ವಿಶ್ರಮ - ಮನುವಿಡಿದುದಯಿಸೆ ಸದ್ವಿ
ಧಿಯಿಂ ।
ಮುನಿಮತ ವೃತ್ತಮು - ಚಿತ ವಚನಾನ್ವಿತ - ಘನಪದ ಯುತ ಮಭಿರಂಜಿ
ಸುಗುಂ ॥ ೧೯೨ ॥

ವನಲತಾ ವೃತ್ತಂ - ನನನನನನನನಗಗ - ೮, ೮ಕ್ಕೆಯತಿ
ಸುರ ಪುರ ಗಣ ತತಿ - ಕರಿ ಪರಿಮಿತಮಿರೆ - ಪುರವಿಮಥನ ಪರಮೇಶರ್।
ಚರಣದೊಳೊಡನನು - ಸರಿಸುತೆ ವಿಹಿತದೆ - ಬೆರೆದೊಡನೊದವಿರೆ
ಸೊಂಪಿಂ ।
ಕರಿ ಭುಜಗದೊಳನು - ಕರಿಸುತೆ ವಿಮಳಿನ - ವಿರಮಣವೊಗೆದಿರೆ ಪೆಂಪಿಂ।
ಸುರುಚಿರ ವನಲತೆ - ಕರಮುದಯಿಸುವುದು - ನಿರುಪಮ ಮೃದು ಪದ
ದಿಂದಂ ॥ ೧೯೩ ॥

ಮಾಲಾ ವೃತ್ತ ಪ್ರಕರಣಂ

ಉತ್ತುಂಗೋಜ್ವಲ ಮಾಲಾ ।
ವೃತ್ತಂಗಳ ಘನಪದಕ್ಕೆ ಛಂದಸ್ಸೂತ್ರಾ ।
ಯತ್ತಕ್ರಮದಿಂಕರಮಿ ।
ರ್ಪತ್ತಾಱಕ್ಕರದಿನಧಿಕ ವರ್ಣಂ ಬರ್ಕುಂ ॥ ೧೯೪ ॥

ಮಾಲಾ ವೃತ್ತಂಗಳೊಳ್

ತ್ರಿಭಂಗೀ ವೃತ್ತಂ - ನಸಭನತಜತಸಯ - ೭, ೭ಕ್ಕೆಯತಿ
ಅದಿತಿತನುಜಾತ - ಶ್ವಸನ ಕುಮುದಾಪ್ತ - ತ್ರಿದಶಾಂಬರಾರ್ಕಾಭ್ರ ಪವ
ಮಾನ ಪಾಥಂ ।
ಪದದೊಳನುಬಂಧಂ - ಬಡೆದೆಱಕದಿಂದಂ - ಪುದಿದೊಂದಿ ಕಣ್ಗೊಪ್ಪೆ ವರ
ಸೂತ್ರದಿಂದಂ ।

ಸದಮಳ ವಿರಾಮಂ - ಹಯ ಗಿರಿಗೆ ನೇಮಂ - ಪದೆದೊಪ್ಪೆ ಸಂಶೋಭಿ
ಪುದು ನಾದರಮ್ಯಂ ।
ಮೃದು ವಚನ ಯುಕ್ತಂ - ಘನ ಪದ ನಿಯುಕ್ತಂ - ವಿದಿತಂ ತ್ರಿಭಂಗೀ
ಸಮಭಿಧೇಯ ವೃತ್ತಂ ॥ ೧೯೫ ॥

ಮಣಿಕಿರಣ ವೃತ್ತಂ - ನನಭನಜನನನಸನಲಗ - ೭, ೭ ,ಲಕ್ಕೆಯತಿ
ಸುರ ವಿಬುಧ ನಿಶಾಕರ ಸುರೆ ತಪನಾಮರ ದಿವಿಜ ವಿಬುಧ ಸುರಹರಿ
ಗಿರಿಶರ್ ।
ಚರಣದೆ ಸೊಬಗಿಂ - ನೆರೆದಿರೆ ವಿಮಲಾ - ಕ್ಷರ ಗಣನೆಯುನನು ಸರಿಸುತೆ
ನಿಯತಂ ।
ಸ್ವರದೊಳಚಲದೊಳ್ - ಕರಿಯೊಳವಿರತಂ - ವಿರಮಣ ಮೊಡನೊದವಿರೆ
ಹಿತಕರದಿಂ ।
ಸುರುಚಿರ ಪದ ಬಂ - ಧುರ ತರ ಮಣಿಸಂ - ಕಿರಣದಿನೆಸೆವುದುವರ
ಮಣಿಕಿರಣಂ ॥ ೧೯೬ ॥

ಲಲಿತನೃತ್ತವೃತ್ತಂ - ಭಜಸನಭಜಸನಭಯ - ೮, ೮, ಲಕ್ಕೆಯತಿ
ಶೀತಕರ ಚಂಡಕರ - ವಾತ ದಿವಿಜೇಂದು ದಿನ - ನಾಥ ಪವನಾಮರ
ಸುಧಾಕಿರಣ ತೋಯ ।
ವ್ರಾತವೊಡಗೂಡಿ ಘನ - ರೀತಿ ವಿಡಿದೊಂದೆ ಯತಿ - ಯೋತು ।
ವಸು ಹಸ್ತಿ ಫಣಿಯೊಳ್ ನೆಲಸೆ ನಿತ್ಯಂ ।
ಸಾತಿಶಯ ತಾಳಲಯ ಘಾತ ಕಳವಟ್ಟು ವರ - ನೂತನ ಸುರಾಗಕೆಡೆ
ಗೊಂಡು ಬಗೆಗೊಳ್ಳುಂ ।
ಖ್ಯಾತ ಪರಿಶುದ್ಧತರ - ಗೀತಮಮಲೋಕ್ತಿ ಸಮ - ಪೇತ ಪದ ಪುಂಜ
ಲಲಿತಂ ಲಲಿತ ನೃತ್ತಂ ॥ ೧೯೭ ॥

ಕುಸುಮಶರ ವೃತ್ತಂ - ನನನನನನನನಜಸಗ - ೧೦, ೧೦ಕ್ಕೆಯತಿ
ಅಮರ ಗಣ ಸಮಿತಿ ಗಜ - ಸುಮಿತಿಯೊಳಗೊದವಿ ನಿಲೆ - ಕಮಲ
ಸಖ ಮಾರುತ ಮಹೇಶರ್ ।
ಕ್ರಮದೊಳನುಸರಿಸಿ ಸಲೆ - ಸಮಮೆನಿಸಿ ಪದದೆಡೆಗೆ - ಸಮುಚಿತದೆ
ಕೂಡಿ ನಿಲೆಚೆಲ್ವಿಂ ।
ವಿಮಳ ವಿರಮಣಪೊಡನೆ - ನಮೆಯುದೆ ದಶಮದಶಮ - ಕಮ*ರ್ದೆಸಯ್ಯೆ
ತಪ್ಪದೊಡನೆಂದುಂ ।
ಸುಮಧುರ ರುಚಿರ ಪದದೆ - ಸಮನಿಪುದು ಕುಸುಮಶರ - ಮಮಲ ತರ
ವರ್ಣ ಗಣ ವೃತ್ತಂ ॥ ೧೯೮ ॥

ಲಹರಿಕಾವೃತ್ತಂ - ನನನನನನನನನನಗ - ೮, ೮, ೮ಕ್ಕೆಯತಿ
ಅನಿಮಿಷ ಪುರ ವರ - ಗಣ ದಶಕಮಗಲ - ದನುವಿಡಿದೊದವಿರೆ
ಕೊನೆಗತಿಭರದಿಂ ।
ಮನಸಿಜ ವಿಮಥನ - ನನುಸರಿಸುತೆ ಬಟ್ - ಕನಿಶಮೆಸೆಯೆ ಕರ -
ಮನು ಪಮ ಪದದೊಳ್ ।
ಸುನಿಯುತ ಯತಿ ವಸು ಫಣಿ ಗಜಕುದಯಿಸೆ - ಮನೆ ಕತಿಹಿತಕರ -
ಮೆನಿಸುವ ತೆಜಿನೊಳ್ ।
ಘನತರ ಲಹರಿಕೆ - ವಿನುತ ಸದಮಳ ವ - ಚನಚಯ ಲಹರಿಕೆ -ಜನಿಯಿಸಿ
ಮೆಱೆಗುಂ ॥ ೧೯೯ ॥

ಲಲಿತಲತಾ ವೃತ್ತಂ - ನನನನನನನನನನನನಲಗ ೧೦, ೧೦, ೧೦ಕ್ಕೆಯತಿ
ಬಲಮಥನ ಗಣಸಮಿತಿ ಜಲಜಸಖ ಮಿತಿಯೊಳಿರೆ
ಬಲಿಮಥನನೊಡನೊಗೆಯೆ ಬಟಿಕೆ ಪುರಮಥನಂ ।
ನೆಲಸೆ ಘನಪದದೆ ಸದಮಲ ಲಯಮನನುಸರಿಸಿ
ಬಲಿತೊಡನೆ ಕರಮೆಸೆಯೆ ಚಲಿಸದಸವರತಂ ।
ವಿಲಸದತಿಶಯ ವಿರತಿ ಸಲೆ ದಶಮ ದಶಮ ದಿಶೆಗಲಸ
ದಡಿಗಡಿಗೊಸೆದು ನಿಲೆ ವಿದಿತ ವಿಧಿಯಿಂ ।
ಲಲಿತಲತೆಯೆನಿಪ ಪೆಸ*ರ್ದಳೆದು ಸೊಗಯಿಪುದು ವರ
ಲಲಿತ ಸುಮಧುರ ವಚನ ವಿಲಿತ ಪದ ಚಯದಿಂ ॥ ೨೦೦ ॥

ದಂಡಕ ಪ್ರಕರಣಂ

ದಂಡಕ ಬಂಧದೆ ವಿಮಲೋ ।
ದ್ದಂಡ ಪದಂಘ್ರಿಗೆ ಸಮಾನ ರೀತಿಯು ನಿಯುತಾ ।
ಖಂಡ ವಿಶುದ್ಧಾಕ್ಷರ ಗಣ ।
ಮಂಡಂ ವಿಪುಳತೆಯೊಳೊಂದಿ ಮಿಶ್ರದೊಳಿರ್ಕುಂ ॥ ೨೦೧ ॥
ಸದಮಳ ತರ ದಂಡಕದೊಳ್ ।
ತ್ರಿದಶ ಗಣೋರ್ವಿ ಗಣಂಗಳಖಿಳ ಸ್ಥಳದೊಳ್ ।
ಪುದಿಯದು ಸುರಗಣ ಯುಗಲಂ ।
ಪದಾದಿಗೆ ಮಾತ್ರ ಮುದಯಿಕುಂ ಬಹುಳತೆಯಿಂ ॥ ೨೦೨ ॥
ಪ್ರಥಿತ ಮಹಾ ದಂಡಕದೊಳ್ ।
ಪ್ರಥಮ ಪದಕ್ಕಿಸೆವ ಲಕ್ಷಣವ ಸೂಚಿಸುವೆಂ ।
ಶಿಥಿಲಂಬೊರ್ದದೆ ಮುಂದಣ ।
ಪೃಥುಳ ತ್ರಿಪದಂಗಳಾದಿ ಪದದವೊಲಿರ್ಕುಂ ॥ ೨೦೩ ॥

ದಂಡಕ ಸೂತ್ರೋದಾಹರಣಂ

ಚಂಡವೃಷ್ಟಿ ಪ್ರಪಾತದಂಡಕಂ - ನನ+೭ರ

ಅಮರ ಗಣ ಯುಗಕ್ಕೆ ಸಪ್ತಾಗ್ನಿಗಳ್ ಸೇರೆ ವಿಭ್ರಾಜಿಕುಂ ಚಂಡವೃಷ್ಟಿ ಪ್ರಪಾತಾಹ್ವಯಂ ॥ ೨೦೪ ॥

ಅರ್ಣದಂಡಕಂ - ನನ+೮ರ

ಸುರ ಗಣ ಯುಗಲಂಗಳಿಂ ಮುಂದೆ ತಾಮಷ್ಟ ವೈಶ್ವಾನರರ್ ಪಾದ ದೊಳ್ ಮೂಡೆ ಶೋಭಿಕ್ಕುಮರ್ಣಾಹ್ವಯಂ ॥ ೨೦೫ ॥

ಅರ್ಣವದಂಡಕಂ - ನನ+೯ರ

ಅದಿತಿಜ ಗಣ ಯುಗ್ಮ ದಿಂದತ್ತಲೊಂಬತ್ತು ಸಪ್ತಾರ್ಚಿಗಳ್ ಪಾದದೊಳ್ ತೀವೆ ತಾನರ್ಣವಾಖ್ಯಂ ಸಮುದ್ಭಾಸಿಕುಂ ॥ ೨೦೬ ॥

ವ್ಯಾಳದಂಡಕಂ - ನನ+೧೦ರ

ವಿಬುಧ ಗಣ ಯುಗಂಗಳಿಂ ಮತ್ತೆ ತಾಂ ಪತ್ತು ಹವ್ಯಾಶನರ್ ಪಾದದೊಳ್ ಪತ್ತೆ ಕಣ್ಗೊಪ್ಪುಗುಂ ವ್ಯಾಳ ಸನ್ನಾಮಕಂ ದಂಡಕಂ ॥ ೨೦೭ ॥

ಜೀಮೂತದಂಡಕಂ - ನನ+೧೧ರ

ತ್ರಿದಶಗಣ ಯುಗಂಗಳಿಂ ಮತ್ತಮೇಕಾದಶಾಗ್ನಿ ವ್ರಜಂ ಕೂಡಿ ತಾ
ಮಂಘ್ರಿಯೊಳ್ ಮೂಡೆ ಜೀಮೂತ ನಾಮಾನ್ವಿತಂ ದಂಡಕಂ ಶೋಭಿಕುಂ
॥ ೨೦೮ ॥

ಲೀಲಾಕರ ದಂಡಕಂ - ನನ +೧೨ರ

ದಿವಿಜ ಗಣ ಯುಗಂಗಳಿಂದಂ ಬೞಿಕ್ಕಂ ಕರಂ ದ್ವಾದಶಾಗ್ನಿ ಪ್ರತಾನಂ ।
ಲಸತ್ಪಾದದೊಳ್ ಸೇರೆ ಲೀಲಾಕರಾಖ್ಯಂ ಮಹಾದಂಡಕಂ ರಂಜಿಕುಂ
॥ ೨೦೯ ॥

ಉದ್ದಾಮದಂಡಕಂ – ನನ +೧೩ರ

ಸುಪದದೆ ಪದಿಮೂಱು ಸಪ್ತಾರ್ಚಿ ಸಂದೋಹಮೊಂದಾಗಿ ವೃಂದಾರಕ
ದ್ವಂದ್ವದಿಂ ಮುಂದೆ ತಾಮೊಂದೆ ಚೆಲ್ವಿಂದಮುದ್ದಾಮಮುದ್ದಾಮ
ಸದ್ದಂಡಕಂ ಪುಟ್ಟುಗುಂ ॥ ೨೧೦ ॥

ಶಂಖದಂಡಕಂ – ನನ +೧೪ರ

ಚರಣದೆ ಪದಿನಾಲ್ಕು ವೈಶ್ವಾನರಾನೀಕಮೊಱ್ಗಂದೆ ಗೀರ್ವಾಣ ।
ಯುಗ್ಮಂಗಳಿಂದಂ ಬೞಿಕ್ಕೊಪ್ಪೆ ನಿಶ್ಯಂಕೆಯುಂ ಚೆಲ್ವ ।
ಶಂಖಾಖ್ಯ ಭಾಸ್ವನ್ಮಹಾದಂಡಕಂ ಮೂಡುಗುಂ ॥ ೨೧೧ ॥

ಪ್ರಚಿತದಂಡಕಂ – ನನ +೭ಯ

ಪ್ರಚಿತಮೆನಿಪ ಮಹಾದಂಡಕಂ ದೇವ ಯುಗ್ಮಕ್ಕೆ ತೋಯಾದಿ
ಭಾಸ್ವದ್ಗಣಂ ಸೇರೆ ಬರ್ಕುಂ ॥ ೨೧೨ ॥

ಸಿಂಹದಂಡಕಂ – ೩ಲಘು+ಯಥೇಷ್ಟಸಂಖ್ಯೆಯ ಯಥೇಷ್ಟಗಣ

ಪುರ ಲಘು ಪ್ರತಾನಕ್ಕನೇಕಂ ಯಥೇಷ್ಟಂ ಗಣಂಗಳ್ ಲಸತ್ಪಾದದೊಳ್ ।
ಕೂಡೆ ಸಿಂಹಾಹ್ವಯಂ ದಂಡಕಂ ಮೂಡುಗುಂ ॥ ೨೧೩ ॥

ಅಬ್ಧಿದಂಡಕಂ - ೪ಲಘು + ಯಥೇಷ್ಟ ಸಂಖ್ಯೆಯಯಥೇಷ್ಟಗಣಗಳು ।

ಶರಧಿಲಘು ವ್ರಜಕ್ಕತ್ತನೇಕಂ ಗಣಂಗಳ್ ಯಥೇಷ್ಟಂ ಸುಪಾದಕ್ಕೆ ।
ತಾಮೊಪ್ಪೆ ಶೋಭಿಕ್ಕುಮಬ್ಧ್ಯಾಹ್ವಯಂ ದಂಡಕಂ ॥ ೨೧೪ ॥

ಚಂಡದಂಡಕಂ – ೫ ಲಘು + ಯಥೇಷ್ಟ ಸಂಖ್ಯೆಯ ಯಥೇಷ್ಟ ಗಣ
ಶರ ಲಘು ಸಮೂಹದಿಂದಂ ಪರಕ್ಕೆಂದುಮೊಟ್ಗೆಂದನೇಕಂ
ಯಥೇಷ್ಟಂ ಗಣಂ ಕೂಡೆ ಚಂಡಾಹ್ವಯಂ ದಂಡಕಂ ಪುಟ್ಟುಗುಂ ॥ ೨೧೫ ॥

ವಾತದಂಡಕಂ – ೭ ಲಘು + ಯಥೇಷ್ಟ ಸಂಖ್ಯೆಯ ಯಥೇಷ್ಟ ಗಣ
ಗಿರಿ ಪರಿಮಿತ ಲಘೂತ್ಕರಕ್ಕತ್ತನೇಕಂ ಯಥೇಷ್ಟಂ ಗಣಂಪಾದದೊಳ್
ಮೂಡೆ ಚೆಲ್ವಿಂದೆ ವಾತಾಖ್ಯ ಸದ್ದಂಡಕಂ ರಂಜಿಕುಂ ॥ ೨೧೬ ॥

ಮತ್ತಮಾತಂಗಲೀಲಾಕರದಂಡಕಂ – ಯಥೇಷ್ಟರ ಗಣ
ಹವ್ಯವಾಹಾಂಶ ಸಂದೋಹಮೊಂಬತ್ತಱಿಂ ನ್ಯೂನಮಂ ಪೊರ್ದದೊಳ್ಪಿಂ
ಯಥೇಷ್ಟಂ ಕರಂ ದಿವ್ಯ ಸತ್ಪಾದದೊಳ್ ಮೂಡೆ ವಿಭ್ರಾಜಿಕುಂ ಮತ್ತ
ಮಾತಂಗ ಲೀಲಾಕರಂ ದಂಡಕಂ ॥ ೨೧೭ ॥

ಸಿಂಹವಿಕ್ರೀಡದಂಡಕಂ - ಯಥೇಷ್ಟಯ ಗಣಗಳು
ಪಯೋ ವ್ರಾತಮೊಂಬತ್ತಱಿಂದೂನಮಂ ತಾಳದೆಂದುಂ ಯಥೇಷ್ಟಂ
ಲಸತ್ಪಾದದೊಳ್ ತಾಂ ಲಯಕ್ಕೊಂದಿ ಮೆಯ್ದೋಱಿ ಸಂಶೋಭಿಕುಂ
ಸಿಂಹವಿಕ್ರೀಡ ಸದ್ದಂಡಕಂ ಚೆಲ್ವಿನಿಂದಂ ॥ ೨೧೮ ॥

ಕುಸುಮಸ್ತಬಕದಂಡಕಂ - ಯಥೇಷ್ಟಸಗಣಗಳು
ಪವಮಾನ ಗಣಂ ನವ ಸಂಖ್ಯೆಗಳಿಂದಧಿಕಂ ಪದದೊಳ್ ನೆಲೆಗೊಂಡಿರೆ
ಸಂಭವಿಕುಂ ಕುಸುಮಸ್ತಬಕಾಹ್ವಯ ದಂಡಕಮುಜ್ವಲ
ವಾಕ್ಕುಸುಮಸ್ತಬಕಂ ॥ ೨೧೯ ॥

ಕಾಮಬಾಣದಂಡಕಂ - ಯಥೇಷ್ಟ ತಗಣಗಳು + ಗಗ
ವ್ಯೋಮಾಂಶ ಜಾಲಂ ಯಥೇಷ್ಟಂ ಪೊದಳ್ದೊಪ್ಪೆ ಕಾಮಾರಿ ಯುಗ್ಮಂಗ
ಳಂತ್ಯಕ್ಕೆ ಮೆಯ್ದೋಱೆ ಕಾಮಿಪ್ಪ ದೀರ್ಘಾಂಘ್ರಿ ಚಾತುಷ್ಕದಿಂ
ಕಾಮಬಾಣಾಹ್ವಯಂ ದಂಡಕಂ ಕಣ್ಗೊಳಿಕ್ಕುಂ ॥ ೨೨೦ ॥

ಭುಜಂಗವಿಲಾಸದಂಡಕಂ - ಯಥೇಷ್ಟ ಭಗಣಗಳು + ಗಗ
ಚಂದ್ರ ಗಣ ಪ್ರಕರಂ ಹಿತದಿಂದೆ ಯಥೇಷ್ಟದೊಳೊಂದಿರೆ
ಪಾದದೊಳಂತ್ಯಕೆ ಚಂದ್ರಧರದ್ವಯಮೊಪ್ಪೆ ಭುಜಂಗ ವಿಲಾಸ
ಸಮಾಹ್ವಯ ದಂಡಕಮಕ್ಕುಂ ॥ ೨೨೧ ॥

ಅನಂಗಶೇಖರದಂಡಕಂ - ಯಥೇಷ್ಟ ಲಘು ಗುರುಗಳು

ಜನಾರ್ದನಂ ಬಟಿಕ್ಕನಂಗಮರ್ದನಂ ಘನಾಂಘ್ರಿಯೊಳ್ ಯಥೇಷ್ಟ
ವೊಂದುಗೂಡೆ ತಾನನಂಗಶೇಖರಾಭಿಧಾನದಿಂ ಮನೋಜ್ಞ ದಂಡಕಂ
ವಿರಾಜಿಕುಂ ಕರಂ ॥ ೨೨೨ ॥

ಅಶೋಕಪುಷ್ಪಮಂಜರೀದಂಡಕಂ - ಯಥೇಷ್ಟ ಗುರುಲಘುಗಳು

ಪಾರ್ವತೀಶನಿಂದಿರೇಶನೈಕ್ಯದಿಂ ಯಥೇಷ್ಟಮಾಗಿ ತಪ್ಪದೆಂದು
ಮಂಘ್ರಿಯಲ್ಲಿ ಪರ್ವಿಧಿಂದೊಡೊಪ್ಪುಗುಂ ಸಮಂತಶೋಕ
ಪುಷ್ಪಮಂಜರೀಮಹಾಭಿಧಾನದಿಂದೆ ॥ ೨೨೩ ॥

ತೃತೀಯಾಧ್ಯಾಯಂ

ಪರಿನಿರ್ಮಲಾರ್ಧಸಮವೃ ।
ತ್ತರೀತಿಯಂ ವಿಶದ ವಿಷಮ ವೃತ್ತದ ಬಗೆಯಂ ।
ಪರಮೋಪಜಾತಿ ವೃತ್ತದ ।
ಪರಿಯಂ ಸುಶ್ಲೋಕ ಲಕ್ಷಣವ ವರ್ಣಿಸುವೆಂ ॥ ೧ ॥

ಅರ್ಧಸಮವೃತ್ತ ಪ್ರಕರಣಂ

ಅಸಮ ಪದಂಗಳ್ಗಕ್ಷರ ।
ವಿಸರಂ ಸಮನಾಗಿ ಯುಗ್ಮ ಚರಣಕೆ ವರ್ಣ ।
ಪ್ರಸರಂ ಸರಿಯಾಗಿ ಕರಂ ।
ಬೆಸೆದೊಡನರ್ಧಸಮವೃತ್ತದೊಳ್ ಪುದಿದಿರ್ಕುಂ ॥ ೨ ॥

ಪರಸ್ಥಾನಾರ್ಧಸಮ (ಅಸಮಾನವರ್ಣಾರ್ಧಸಮ) ವೃತ್ತಂಗಳೊಳ್

ಸಾಗೀವೃತ್ತಂ - ತಗಲ । ಶಗ........

ಅಭ್ರೇಶ ವಿಷ್ಣು ।
ಪಭ್ರೇಶರಿಂ ।
ಶುಭ್ರಾಖ್ಯೆ ನಾಗಿ ।
ವಿಭ್ರಾಜಿಕುಂ ॥ ೩ ॥

ವಿಯೋಗಿನೀ ವೃತ್ತಂ - ಸಸಜಗ । ಸಭರಲಗ.......

ಪವಮಾನ ಮರುದ್ರವೀಶ್ವರರ್ ।
ಪವನೇಂದು ಜ್ವಲನಾಚ್ಯುತೇಶ್ವರರ್ ।
ಸುವಿಧಾನದೊಳರ್ಥಕೊಪ್ಪೆಸಂ ।
ಭವಿಕುಂ ನಿರ್ಮಲಿನಂ ವಿಯೋಗಿನೀ ॥ ೪ ॥

ಭದ್ರವಿರಾಟ್ ವೃತ್ತಂ - ತಜರಗ । ಮಸಜಗಗ........

ವ್ಯೋಮಾಂಬುಜಮಿತ್ರ ವಹ್ನಿ ರುದ್ರರ್ ।
ಭೂಮಿ ಸ್ಪರ್ಶನ ಭಾನು ಶಂಭು ಶರ್ವರ್ ।
ತಾಮೋಜಸಮಾಂಘ್ರಿಗೊಂದೆ ವೃತ್ತೋ ।
ದ್ದಾಮಂ ಭದ್ರವಿರಾಟ್ಸಮಾಖ್ಯ ಮಕ್ಕುಂ ॥ ೫ ॥

ವೇಗವತೀವೃತ್ತಂ - ಸಸಸಗ । ಭಭಭಗಗ

ಮರುದಾಶುಗ ಮಾರುತ ಭರ್ಗರ್ ।
ಕೈರವ ಬಂಧು ಶಶೀಂದು ಮೃಡೇಶರ್ ।
ಬೆರೆದರ್ಥದೊಳಿರ್ದೆಸೆಗುಂ ನಿ ।
ರ್ಧಾರದೆ ವೇಗವತೀವರವೃತ್ತಂ ॥ ೬ ॥

ಕೇತುಮತೀ ವೃತ್ತಂ - ಸಜಸಗ । ಭರನಗಗ

ವಿತತಾನಿಲಾರ್ಕ ಪವನೇಶರ್ ।
ಶೀತಕರಾಗ್ನಿ ದೇವ ಶಿವ ರುದ್ರರ್ ।
ಹಿತದಿಂ ಸಮಾರ್ಥಕಿರೆ ಬರ್ಕುಂ ।
ಕೇತುಮತಿ ಪ್ರಸಿದ್ಧ ತರವೃತ್ತಂ ॥ ೭ ॥

ಅಚ್ಯುತಕ ವೃತ್ತಂ - ನಜಜಲಗ । ಭಭಭಗ

ಅಮರ ಖಗಾರ್ಕ ರಮೇಶ ಶಿವರ್ ।
ಸೋಮ ನಿಶಾಪತಿ ಚಂದ್ರ ಮೃಡರ್ ।
ಕ್ರಮದೆ ನಿಜಾರ್ಥದೊಳೊಂದೆ ಕರಂ ।
ನೇಮದೊಳೊಪ್ಪುಗುಮಚ್ಯುತಕಂ ॥ ೮ ॥

ಹರಿಣಪ್ಲುತವೃತ್ತಂ - ಸಸಸಲಗ । ನಭಭರ

ಮರುದಾಶುಗ ವಾತ ಹರೀಶ್ವರರ್ ।
ಸುರ ಸುಧಾಕರ ಚಂದ್ರ ಹುತಾಶನರ್ ।
ಬೆರೆದಿರ್ದ ಸಮಾಂಘ್ರಿ ಸಮಾಂಘ್ರಿಯೊಳ್ ।
ನೆರೆಯೆ ಸಂಭವಿಕುಂ ಹರಿಣಪ್ಲುತಂ ॥ ೯ ॥

ವಸಂತಮಾಲಿಕಾವೃತ್ತಂ - ಸಸಜಗಗ । ಸಭರಯ

ಪವನಾನಿಲ ಭಾಸ್ಕರೇಶ ರುದ್ರರ್ ।
ಪವಮಾನೇಂದು ಹುತಾಶನೋದಕಂಗಳ್ ।
ತವೆ ಮಿಶ್ರದೊಳರ್ಧಕೊಂದೆ ತಾನು ।
ದ್ಭವಿಕುಂ ಚೆಲ್ವ ವಸಂತಮಾಲಿಕಾಖ್ಯಂ ॥ ೧೦ ॥

ಅಪರವಕ್ತ್ರವೃತ್ತಂ – ನನರಲಗ । ನಜಜರ

ಸುರ ಸುರ ಶಿಖಿ ವಿಷ್ಣು ಶಂಕರರ್ ।
ಸುರ ದಿನನಾಯಕ ಭಾನು ಪಾವಕರ್ ।
ನೆರೆದೊಡಪರವಕ್ತ್ರ ನಾಮದಿಂ ।
ಸುರುಚಿರ ವೃತ್ತಮಜಸ್ರಮೊಪ್ಪುಗುಂ ॥ ೧೧ ॥

ದಿವಿಜಕಲ್ಪಲತಾವೃತ್ತಂ – ರನರಲಗ । ನಭಜರ

ಪಾವಕೇಂದ್ರ ಶಿಖಿ ಮಾಧವೇಶ್ವರರ್ ।
ದಿವಿಜ ಶೀತಕರ ಭಾಸ್ಕರಾನಲರ್ ।
ಪಾವನಾಸಮ ಸಮಾಂಘ್ರಿಗೊಪ್ಪೆ ತಾಂ ।
ದಿವಿಜಕಲ್ಪಲತೆ ರಂಜಿಕುಂಕರಂ ॥ ೧೨ ॥

ದ್ರುತಮಧ್ಯಾವೃತ್ತಂ – ಭಭಭಗಗ । ನಜಜಯ

ಶೀತಕರೇಂದು ಸುಧಾಂಶು ಮೃಡೇಶರ್ ।
ಶತಮುಖ ಭಾಸ್ಕರ ಭಾನು ಜಲಂಗಳ್ ।
ರೀತಿಯೊಳರ್ಧಕೆ ಮೂಡಿದೊಡೆಂದುಂ ।
ಹಿತಕರದಿಂದೊಗೆಗುಂ ದ್ರುತಮಧ್ಯೇ ॥ ೧೩ ॥

ಪುಷ್ಪಿತಾಗ್ರವೃತ್ತಂ – ನನರಯ । ನಜಜರಗ

ಅದಿತಿಜ ಸುರ ಪಾವಕೋದಕಂಗಳ್ ।
ತ್ರಿದಶ ವಿರೋಚನ ಭಾಸ್ಕರಾಗ್ನಿ ಶರ್ವರ್ ।
ಪುದಿದಸಮ ಸಮಾಂಘ್ರಿಗೊಪ್ಪೆ ಬರ್ಕಂ ।
ಸದಮಳ ವಾಕ್ಯವಿಭಾಸಿ ಪುಷ್ಪಿತಾಗ್ರಂ ॥ ೧೪ ॥

ವಾಙ್ಮತೀವೃತ್ತಂ – ರಜರಜ । ಜರಜರಗ

ಪಾವಕಾಬ್ಜಮಿತ್ರ ವಹ್ನಿ ಸಪ್ತಸಪ್ತಿ ।
ದಿವಾಕರಾಗ್ನಿ ಭಾನು ವೀತಿಹೋತ್ರ ರುದ್ರರ್
ತೀವಿ ತಪ್ಪದರ್ಥಕೊಂದೆ ಬರ್ಕವೊಪ್ಪಿ ।
ಸುವಾಕ್ಯಪುಂಜಭಾಸಿ ವಾಙ್ಮತೀಸಮೂಖ್ಯಂ ॥ ೧೫ ॥

ರವಿಪ್ರಭವೃತ್ತಂ – ನಜಜಜಜಭಗ । ಭಭಭನರಸ

ಅಮರ ದಿವಾಕರ ಭಾನು ವಿರೋಚನ ಸೂರ್ಯ ಚಂದ್ರ ಮೃಡರ್ ।
ಸೋಮ ಹಿಮಾಂಶು ಶಶಾಂಕ ಸುಧಾಕರ ವಹ್ನಿ ಗೇಧವಹರ್ ।
ಸಮುಚಿತ ರೀತಿಯೊಳೋಜ ಸಮಾಂಘ್ರಿಯೊಳೊಂದೆ ನಿರ್ಣಯದಿಂ ।
ಕೋಮಲ ಸತ್ಪದ ಶೋಭಿ ರವಿಪ್ರಭ ವೃತ್ತಮುದ್ಭವಿಕಂ ॥ ೧೬ ॥

ಸಮಾನವರ್ಣಾರ್ಧಸಮ (ಸ್ವಸ್ಥಾನಾರ್ಧಸಮ) ವೃತ್ತಂಗಳೊಳ್

ಉಪಚಿತ್ರವೃತ್ತಂ – ಸಸಸಲಗ । ಭಭಭಗಗ

ಮರುದಾಶುಗ ವಾಯು ಹರೀಶ್ವರರ್ ।
ಸುರಸವ್ಯೆರಿ ಶಶೀಂದು ಹರೇಶರ್ ।
ನಿರತಂ ವಿಷಮಾಂಘ್ರಿ ಸಮಾಂಘ್ರಿಯೊಳ್ ।
ಸೇರೆ ಸಮಂತುಪಚಿತ್ರಮೆನಿಕ್ಕುಂ ॥ ೧೭ ॥

ಕೌಮುದೀವೃತ್ತಂ – ನನಭಭ । ನನರರ

ದಿವಿಜ ವಿಬುಧ ಚಂದ್ರ ನಿಶಾಪತಿ ।
ದಿವಿಷದಮರ ವಹ್ನಿ ವೈಶ್ವಾನರರ್ ।
ಪ್ರವಿದಿತ ವಿಷಮಾಂಘ್ರಿ ಸಮಾಂಘ್ರಿಗೆ ।
ಸವನಿಸೆ ಪರಿಶೋಭಿಕಂ ಕೌಮುದೀ ॥ ೧೮ ॥

ಆಖ್ಯಾನಕೀವೃತ್ತಂ – ತತಜಗಗ । ಜತಜಗಗ

ತಾರಾಪಥಾಭ್ರ ದ್ಯುಮಣೀಶ ರುದ್ರರ್ ।
ವಿರೋಚನಾಕಾಶ ರವೀಶ ಶರ್ವರ್ ।
ರಾರಾಜಿಸುತ್ತರ್ಧದೊಳೊಪ್ಪೆ ನಿತ್ಯಂ ।
ಸುರಮ್ಯಮಾಖ್ಯಾನಕಿಯುದ್ಭವಿಕ್ಕುಂ ॥ ೧೯ ॥

ವಿಪರೀತಾಖ್ಯಾನಕೀವೃತ್ತಂ – ಜತಜಗಗ । ತತಜಗಗ

ತಮೋಹರಾಭ್ರಾರ್ಕ ಮಹೇಶ ಭರ್ಗರ್ ।
ವ್ಯೋಮಾಂಭರೋಷ್ಣದ್ಯುತಿ ಶಂಭು ರುದ್ರರ್ ।
ಸಮಾರ್ಧಕೊಂದಲ್ ವಿಪರೀತ ಪೂರ್ವಂ ।
ನಾಮಾನ್ವಿತಾಖ್ಯಾನಕಿಯುದ್ಭವಿಕ್ಕುಂ ॥ ೨೦ ॥

ವಿಷಮವೃತ್ತ ಪ್ರಕರಣಂ

ವಿತತ ವಿಷಮ ವೃತ್ತಂಗಳ ।
ಚತುಶ್ಚರಣದೊಳ್ ವಿಭಿನ್ನ ರೀತಿಗಳಿಂದಂ ।
ಶ್ರುತಿಹಿತಮೆನಿಪಂತಕ್ಷರ ।
ವಿತತಿ ವಿಶೇಷ ವಿಧಿಯಿಂದೆ ರಂಜಿಸುತಿರ್ಕುಂ ॥
ಸರ್ವಪರಸ್ಥಾನ (ಅಸಮಾನಸಂಖ್ಯಾಕ್ಷರ) ವಿಷಮವೃತ್ತಂಗಳೊಳ್

ಪದಚತುರೂರ್ಧ್ವವೃತ್ತಂ

ವಸುವರ್ಣಂ ಪ್ರಥಮದೊಳ್ ।
ಬಿಸಜಮಿತ್ರಾಕ್ಷರಂ ದ್ವಿತೀಯಾಂಘ್ರಿಯೊಳ್ ।
ವಸುಧೇಶ್ವರಾಕ್ಷರಂ ತೃತೀಯದೊಳ್ ವಿಂಶತಿವರ್ಣಂ ।
ಲಸಿತ ಚತುರ್ಥ ಪಾದದೊಳ್ ಬರೆ ರಂಜಿಕುಂ ಪದಚತುರೂರ್ಧ್ವಂ ॥

ಪವರುಚಿವೃತ್ತಂ

ಸವಮಳ ಲಘುವೃಂದಂ ।
ಪದದೆ ಮೊದಲೊಳಿರೆ ಗುರುಯುಗ್ಮಂ ।
ತುದಿಯೊಳೆಸೆಯೆ ಯತಿ ಕಡೆಗೊಡವಿರೆ ನಿತ್ಯಂ ।
ಪವರುಚಿನೆಸಱೊಳುದಯಿಪುದು ವರಪದಚತುರೂರ್ಧ್ವಂ ॥

ಅನುಪದರುಚಿವೃತ್ತಂ

ಗುರ್ವಕ್ಷರ ಯುಗವಿರೆ ।
ಪೂರ್ವಕ್ಕಿವಜಿ ಪರದೆ ಲಘುತತಿ ।
ಸರ್ವಾಂಘ್ರಿಯೊಳೊಡನುದಯಿಸೆ ಯತಿ ತುದಿಗಿರೆ ।
ನಿರ್ವಾದದೆ ಜನಿಯಿಸುವುದು. ಸೊಬಗಿನೊಳನುಪದರುಚಿ ॥

ಅತಿಪದರುಚಿ ವೃತ್ತಂ

ಪಾದಾದಿಗೆ ಗುರುಯುಗ್ಮಂ ।
ಪಾದಾಂತ್ಯಕೆ ಗುರುಯುಗವಿರೆ ಮತ್ತಂ ।
ಭೇದಾಸ್ಪದ ಯತಿ ತುದಿಗಿರೆ ಪದಚತುರೂರ್ಧ್ವಂ ।
ವೇದಾಂಘ್ರಿಯ ತಳೆದುದಯಿಕುಮತಿಪದರುಚಿವೆಸಱಿಂದಂ ॥

ಪದರುಚಿಕಲಿಕಾವೃತ್ತಂ

ವಿಮಲ ಪದರುಚಿಯ ಪದಯುಗ್ಮಂ ।
ಸಮನಿಸಿ ವಿಪರೀತ ।
ಕ್ರಮದೆ ಮೊದಲೊಳೊಗೆದಿರೆ ಪರ ಪದಯುಗ್ಮಂ ।
ಸಮನೊಳಲುಗದಿರೆ ಪೆಸರ್ವುದು ಪದರುಚಿಕಲಿಕಾಖ್ಯಂ ॥

ಅನುಪದರುಚಿಕಲಿತಾ ವೃತ್ತಂ

ವೃತ್ತಾನುಪದರುಚಿಯ ಪದಯುಗ ।
ಮೊತ್ತಿಂ ಚಲಿಸುತೆ ಪರಿ ।
ವೃತ್ತ ಕ್ರಮದೆ ಮೊದಲೊಳಿರೆ ಸಲೆ ಚಲಿಸದೆ ।
ಮತ್ತಂಘ್ರಿಯುಗವಿರೆ ಯನುಪದರುಚಿಕಲಿಕೆಯೆನಿಪುದು ॥

ಅತಿಪದರುಚಿಕಲಿಕಾ ವೃತ್ತಂ

ಸ್ತುತ್ಯಾತಿಪದರುಚಿಯ ಪದಯುಗ್ಮಂ ।
ವ್ಯತ್ಯಾಸದೆ ನಿಲೆ ಮತ್ತಂ ।
ನಿತ್ಯಂ ಚಲಿಸದೆ ಪರಪದಯುಗವಿರೆ ಚೆಲ್ವಿಂ ।
ದತ್ಯುಜ್ವಲಪದದೊಳೆಸೆವುದತಿಪದರುಚಿಕಲಿಕಾಖ್ಯಂ ॥

ಪದರುಚಿಲವಲೀ ವೃತ್ತಂ

ಪದರುಚಿಯು ನಡುವಣ ಪದಂಗಳ್ ।
ಮೊದಲೊಳಿರೆ ಮೊದಲ ಪದಮೊಡನೆ ತೃತೀಯು ।
ಕ್ಕುದಯಿಸೆ ಕಡೆಗೆಂಮುಂ ।
ತುದಿಯೆ ಪದಮುಲುಗದಿರೆ ಪದರುಚಿಲವಲಿಯೆನಿಕ್ಕುಂ ॥

ಅನುಪದರುಚಿಲವಲೀ ವೃತ್ತಂ

ಉದ್ಯದ್ವಿಲಸದನುಪದರುಚಿಯು ।
ಮಧ್ಯಾಂಘ್ರಿಯುಗಮಿರೆ ಮೊದಲೊಳವಜಿ ಬಟೀಕ ।
ಮಾದ್ಯಂಘ್ರಿಯೊಗೆಯೆ ನಿರ ।
ವದ್ಯಾಂತ್ಯ ಪದಮಿರೆಯನುಪದರುಚಿಲವಲಿಯೆನಿಪುದು ॥

ಅತಿಪದರುಚಿಲವಲೀ ವೃತ್ತಂ

ಸಿದ್ಧಾಂತದತಿಪದರುಚಿಯು ಮಧ್ಯೋ ।
ದ್ಬುದ್ಧಾಂಘ್ರಿಯುಗಳಮಡ*ರ್ದೆಸೆಯೆ ಮೊದಲ ಪಾದಂ ।
ಸಿದ್ಧಂಬಡೆದಿರೆ ಮತ್ತಂ ।
ಶುದ್ಧಾಂತ್ಯಪದಮಿರಲೊಡನತಿಪದರುಚಿಲವಲಿಯುಕ್ಕುಂ ॥

ಪದರುಚಿ ಅಮೃತಧಾರಾ ವೃತ್ತಂ ।

ಪೃಥುಳ ಪದರುಚಿಯು ತುದಿಗೆಂದುಂ ।
ಪ್ರಥಮಪದಮೊಗೆಯೆ ಮೊದಲೊಳಿತರ ಪಾದಂ ।
ಶಿಥಿಲತೆವಡೆಯದೆಸೆಯೆ ಪದರುಚಿಯುಗಮೃತಧಾರಾ ।
ಪ್ರಥಿತ ಕವಿತೆಯುಕ್ಕುಂ ॥

ಅನುಪದರುಚಿಅಮೃತಧಾರಾವೃತ್ತಂ

ಸ್ಫಾರೋನ್ನತ ಸದನುಪದರುಚಿಯು ।
ಚಾರು ಪ್ರಥಮ ಚರಣಮಿರೆ ತುದಿಗುಚಿತದಿ ।
ನಾರಂಭಕಿತರ ಪದಮಿರೆ ಯನುಪದರುಚಿಯುಗಮೃತ ।
ಧಾರಾಹ್ವಯಮೆಸೆವುದು ॥

ಅತಿಪದರುಚಿ ಅಮೃತಧಾರಾವೃತ್ತಂ

ಹೃದ್ಯೋಜ್ವಲದತಿಪದರುಚಿಯಂತ್ಯ ।
ಕ್ಕಾದ್ಯಂಘ್ರಿಯೆಸೆಯೆ ಮೊದಲೊಳಿತರ ಪದವೃಂದಂ ।
ಸದ್ಯೋಗದೆ ನಿಲಲೊಡನತಿಪದರುಚಿಯುಗಮೃತಧಾರಾ ।
ಪದ್ಯಂ ಕರಮುದಯಿಕ್ಕುಂ ॥

ಉದ್ಗತಾವೃತ್ತಂ –

ಸಜಸಂಲಘು ಪ್ರತತಿ ಮತ್ತೆ ।
ನಿಜದೆ ನಸಜಂಗುರೂತ್ಕರಂ ।
ರಾಜಿಪ ಭನಜಗ ಪ್ರಕರಂ ।
ಸಜಸಂಜಗಂ ನೆರೆದೊಡಕ್ಕುಮುದ್ಗತಂ ॥ ೩೫ ॥

ಸೌರಭಕ ವೃತ್ತಂ

ಅನಿಶಂ ತೃತೀಯ ಚರಣಕ್ಕೆ ।
ರನಭಗುರುವೊಂದೆ ಚೆಲ್ವಿನಿಂ ।
ದನ್ಯಪಾದವೊಡನುದ್ಗತದಂ ।
ತನುವಾಗೆ ಸೌರಭಕ ವೃತ್ತಮೊಪ್ಪುಗುಂ ॥ ೩೬ ॥

ಕೀರ್ತಿವೃತ್ತಂ

ನಭಜಂಲಗಂ ಬೆರೆದು ಸೇರೆ ।
ರಭಸದೆ ತೃತೀಯದೊಳ್ ಕರಂ ।
ಪ್ರಭವಿಪನ್ಯಪದಮುದ್ಗತದಂ ।
ತಭಿರಂಜಿಸಲ್ಕೊಡನೆ ಕೀರ್ತಿ ಪುಟ್ಟುಗುಂ ॥ ೩೭ ॥

ಲಲಿತವೃತ್ತಂ

ಸಗಣದ್ವಯಂ ಸಗಣಯುಗ್ಮ ।
ಮಗಲದೆ ತೃತೀಯ ಪಾದದೊಳ್ ।
ಬಗಿದೊಡಿತರ ಪದಮುದ್ಗತದಂ ।
ತೊಗೆದೊಂದೆ ತಾಂ ಲಲಿತ ವೃತ್ತಮೊಪ್ಪುಗುಂ ॥ ೩೮ ॥

ಉಪಸ್ಥಿತ ಪ್ರಚುಪಿತವೃತ್ತಂ

ವೈಚಿತ್ರ್ಯಂಬಡೆದೊಂದಿರಲ್ ಮಸಂಜಭಗಂಗ ।
ಪ್ರಚಯುಂ ಸನಜರಗಪ್ರಜಂ ನಸಂಸಂ ।
ಪ್ರಚುರದೆ ನನನಜಯುಂ ।
ಪ್ರಚುಪಿತಮುದಯಿಸುಗುಮುಪಸ್ಥಿತಪೂರ್ವಂ ॥ ೩೯ ॥

ವರ್ಧಮಾನ ವೃತ್ತಂ –

ಸ್ಥಾನಂಗೊಂಡು ತೃತೀಯ ಪಾದದೊಳ್ ಕ್ರಮದಿಂದಂ ।
ನನಸಂನನಸಮೊಡರ್ಚೆ ವರ್ಧಮಾನಂ ।
ಜನಿಯಿಪುದೊಡನುದಿತಪ್ರಚುಪಿತಚರಣದವೊಲ್ ।
ಸುನಿಯಮದೊಳಿತರಪದಮೊಪ್ಪಿರೆ ಚೆಲ್ವಿಂ ॥ ೪೦ ॥

ಶುದ್ಧವಿರಾಟ್ಋಷಭವೃತ್ತಂ –

ಸಂಶುದ್ಧಕ್ರಮದಿಂ ತೃತೀಯ ಪಾದದೊಳೆಂದುಂ ।
ವಿಶದಂ ತಜರಗಣಂಗಳೊಪ್ಪೆ ಬರ್ಕುಂ ।
ತಾಂ ಶುದ್ಧವಿರಾಟ್ಸಮಾರ್ಷಭಂ ।
ನಶಿಸದಿತರಪದಮಿರೆ ಪೂರ್ವದ ಪಾಂಗಿಂ ॥ ೪೧ ॥

ಅಸಮಾನವರ್ಣವಿಷಮ (ಪರಸ್ಥಾನವಿಷಮ) ವೃತ್ತಂಗಳೊಳ್

ತ್ರಿಪದೋನ್ನತಿವೃತ್ತಂ –

ಇಂದು ಗಣ ತ್ರಯಮಿಂದುಧರಂ ।
ಬಂದುಭಯಾಂಘ್ರಿಯೊಳಂತಿಮದೊಳ್ ।
ನಿಂದು ತೃತೀಯದೊಳಿಂದುಚತುಷ್ಟಯ ।
ಮೊಂದೆ ಕರಂ ತ್ರಿಪದೋನ್ನತಿ ತಾಂ ॥ ೪೨ ॥

ಸಮಾನವರ್ಣ (ಸ್ವಸ್ಥಾನ) ವಿಷಮವೃತ್ತಂಗಳೊಳ್ ।

ಅಂಗಜಾಸ್ತ್ರವೃತ್ತಂ –

ಮಂಜುಳ ವರ್ಣಾಂಶಂ ಭಮಸಂಗಂ ।
ರಂಜದ್ವರ್ಣಗಣಂ ಮಸಂಜಗಂ ॥
ಸಂಜಾತಾಂಶತತಿ ಮನಯಂಗಂ ।
ರಂಜರಂಗಮಿದೊರ್ಡಂಗಜಾಸ್ತ್ರಂ ॥ ೪೩ ॥

ಉಪಜಾತಿ ಪ್ರಕರಣಂ

ಸುರುಚಿರ ಸಮಾನ ಸಂಖ್ಯಾ ।
ಕ್ಷರದ ವಿಭಿನ್ನ ಸಮವೃತ್ತ ಯುಗ್ಮದ ಪದಮಂ।
ಬೆರೆದಿರ್ಪರ್ಧಸಮೇತರ ।
ನಿರುಪಮ ವೃತ್ತಮುಪಜಾತಿ ಪದ್ಯಮೆನಿಕ್ಕುಂ ॥ ೪೪ ॥
ಉಪಜಾತಿ ವರ್ಗದೊಳೆ ।
ಸುಪದ್ಯದಂಘ್ರಿಗಳೊಳೇಕ ಪಾದಕ್ಕಥವಾ ।
ದ್ವಿಪದಕೆ ಸಮಾನ ಸಂಖ್ಯೆಯು ।
ವಿಪರೀತಕ್ರಮದ ವರ್ಣ ಗಣಮುದ್ಭವಿಕುಂ ॥ ೪೫ ॥

ದೃಷ್ಟಾಂತಂ:-

ಇಂದ್ರಮಾಲಾವೃತ್ತಂ

ವ್ಯೋಮಾಂಬರಾಹಸ್ಕರ ಭರ್ಗ ರುದ್ರರ್ ।
ತಮೋಹರಾಭ್ರ ದ್ಯುಮಣೀಶ ಶರ್ವರ್ ।
ವಿಮಿಶ್ರದಿಂದೊಪ್ಪಿದೊಡಿಂದ್ರಮಾಲಾ ।
ನಾಮೋಪಜಾತಿ ವ್ರಜಮುದ್ಭವಿಕ್ಕುಂ ॥ ೪೬ ।

ವಂಶಮಾಲಾವೃತ್ತಂ

ತಾರಾಪಥಾಕಾಶ ದಿವಾಕರಾನಲರ್ ।
ಸರೋಜಮಿತ್ರಾಂಬರ ಸೂರ್ಯ ಪಾವಕರ್ ।
ಸೇರಲ್ಕೊಡಂ ಮಿಶ್ರದೆ ವಂಶಮಾಲೆತಾ ।
ನಾರಾಜಿಕುಂ ಕುಂದದನೇಕ ರೂಪದಿಂ ॥ ೪೭ ॥

ಸಿಂಹಪ್ಲುತವೃತ್ತಂ

ವಾತಾಧ್ವ ಸೋಮ ಪವನ ಮೇಘಪುಷ್ಪಂ ।
ಪ್ರತೀಕ್ಷ್ಣ ದಿಧೀತಿ ಶಶಿ ವಾಯು ತೋಯಂ ।
ಪ್ರತಿಷ್ಠೆಗೊಂಡೆಜಿಕದೊಳೊಪ್ಪೆ ಸಿಂಹ ।
ಪ್ಲುತಾಭಿಧಾನದತುಳವೃತ್ತಮಕ್ಕುಂ ।

ಪ್ರಕೀರ್ಣಕ ವೃತ್ತಂ

ಆಕಾಶ ಚಂದ್ರ ಪವನ ಭಾನು ಶಂಕರರ್ ।
ವಿಕರ್ತನೇಂದು ಮರುದಹಸ್ಕರೇಶ್ವರರ್ ।
ವಿಕಲ್ಪದಿಂ ನೆರೆದೊಡನೇಕ ಭೇದದಿಂ ।
ಪ್ರಕೀರ್ಣಕಾಹ್ವಯ ವರ ವೃತ್ತಮೊಪ್ಪುಗುಂ ॥ ೪೯ ॥

ಅನುಷ್ಟುಬ್ವಕ್ತ್ರ ಪ್ರಕರಣಂ

ಅಷ್ಟವರ್ಣಂಗಳಂ ನಿತ್ಯಂ ।
ಸ್ಪಷ್ಟದಿಂ ತಾಳ್ದು ಪಾದದೊಳ್ ।
ದೃಷ್ಟಾಂತದಂತೆ ಚೆಲ್ವಿಂದ ।
ನುಷ್ಟುಪ್ ಶ್ಲೋಕಂ ವಿರಾಜಿಕುಂ ॥ ೫೦ ॥

ಚರಣಾದಿಯ ವರ್ಣಕ್ಕೆ ।
ಪರದೊಳ್ ಸನಮಾವಗಂ ।
ಬರಲಾಗದು ಯುಗ್ಮಾಂಘ್ರಿ ।
ಗಿರದಿರ್ಕೆ ರಕಾರಮುಂ ೫೧ ॥

ವಕ್ತ್ರಶ್ಲೋಕಂ

ಚತುರಕ್ಷರದಿಂದತ್ತಂ ।
ಜೊತೆಯೊಳ್ ಯಗಣಂ ನಿತ್ಯಂ ।
ಪ್ರತಿಪಾದದೆ ಪೊಯ್ದೋಜು ।
ಹಿತದಿಂ ವಕ್ತ್ರಮೆಂದಕ್ಕುಂ ॥ ೫೨ ॥

ಪಥ್ಯಾವಕ್ತ್ರ ಶ್ಲೋಕಂ

ಶ್ರುತ್ಯನಂತರಮೋಜಕ್ಕೆ ।
ನಿತ್ಯಂ ಯಾಂಶಂ ಸಮಾಂಘ್ರಿಗೆ ।
ವ್ಯತ್ಯಸ್ತ ಜಗಣಂ ಸೇರೆ ।
ಪಥ್ಯಾವಕ್ತ್ರಂ ವಿರಾಜಿಕುಂ ॥ ೫೩ ॥

ವಿಪರೀತಪಥ್ಯಾವಕ್ತ್ರಶ್ಲೋಕಂ

ವಿಪುಳಾಗಮಕೋಜದೊಳ್ ।
ವಿಪರೀತವೆ ಜಂ ಯುಗ್ಮ ।
ಸುಪಾದದೊಳ್ ಯಃವೊಂದೆ ।
ವಿಪರೀತಾದಿಪಥ್ಯಾಖ್ಯಂ ॥ ೫೪ ॥

ಚಪಲಾವಕ್ತ್ರಶ್ಲೋಕಂ

ನಗಣಂ ವಿಷಮದೆ ತಾಂ ।
ಯುಗಣಾಂ ಸಮದೊಳ್ ನಿತ್ಯಂ ।
ನಿಗಮಕ್ಕೆ ಬೆರೆಯೆ ತಾ ।
ನೊಗೆಗುಂ ಚಪಲಾವಕ್ತ್ರಂ ॥ ೫೫ ॥

ವಿಪುಲಾಶ್ಲೋಕಂ

ಓಜದೊಳ್ ಯುಗಣಂ ವಾರ್ಧಿ ।
ಗೋಜೆಯಿಂ ಕೂಡೆ ಯುಗ್ಮದ ।
ವಾಜಿಯೊಳ್ ಲಘು ಮೆಯ್ದೋಱೆ ॥
ರಾಜಿಕುಂ ವಿಪುಲಾಹ್ವಯಂ ॥ ೫೬ ॥

ಸೈತವವಿಪುಲಾಶ್ಲೋಕಂ

ಪ್ರತಿಪಾದದೊಳಾವಗಂ ।
ಪ್ರತೀತ ಲಘು ಚೆಲ್ವಿನಿಂ ।
ಯುತಿಯೊಳ್ ಸೇರೆ ರಂಜಿಕುಂ ।
ನುತ ಸೈತವವಿಪುಲಂ ॥ ೫೭ ॥

ಭವಿಪುಲಾಶ್ಲೋಕಂ

ಅಂಭೋನಿಧಿಯಿಂ ಬಱಿಕಂ ।
ಜೃಂಭತ್ಪದದೊಳ್ ಭಗಣಂ ।
ಸಂಭಾವಿಸುವಂತಿರೆ ತಾಂ ।
ಸಂಭವಿಕ್ಕುಂ ಭಾದ್ವಿಪುಲಂ ॥ ೫೮ ॥

ರವಿಪುಲಾಶ್ಲೋಕಂ

ಭದ್ರಾಂಘ್ರಿಯೊಳಬ್ಧಿಗೆಂದುಂ ।
ಹೃದ್ರಮ್ಯಗಣಂ ರಕಾರಂ ।
ಛಿದ್ರಂಗೊಳ್ಳದೊಂದೆ ಚೆಲ್ವಿಂ ।
ಸದ್ರಾದ್ವಿಪುಲಾಖ್ಯಮಕ್ಕುಂ ॥ ೫೯ ॥

ನವಿಪುಲಾಶ್ಲೋಕಂ

ಸಮಸ್ತಾಂಘ್ರಿಗೆ ನಗಣಂ ॥
ಸಮುದ್ರದ ಪರದೆ ತಾಂ ।
ಸಮೀಪಿಸೆ ನವಿಪುಲಾ ।
ಸಮಾಹ್ವಯಮುದಯಿಕುಂ ॥ ೬೦ ॥

ತವಿಪುಲಾಶ್ಲೋಕಂ

ಸಂತತಂ ತಕಾರಂ ಕರಂ ।
ಪಿಂತಿರ್ಪ ಚತುರ್ವರ್ಣದಿಂ ।
ಮುಂತೊಪ್ಪಿರೆ ಸಂಶೋಭಿಕುಂ ।
ತಾಂ ತಾದ್ವಿಪುಲಾನಾಮಕಂ ॥ ೬೧ ॥

ಸಂಕೀರ್ಣವಿಪುಲಾಶ್ಲೋಕಂ

ಶರಧಿ ಸ್ಥಾನದಿಂದತ್ತಂ ।
ಪರಪಾಜಕ್ಕೆ ಯಗಣಂ ।
ಬರೆ ಬೇರೆಗಣಂ ಯುಗ್ಮ ।
ಕ್ಕಿರೆ ಸಂಕೀರ್ಣ ವಿಪುಲಂ ॥ ೬೨ ॥

ಸಂಕೀರ್ಣವಿಪುಲಾಶ್ಲೋಕಭೇದಂ

ಅಂಕಿತಾಬ್ಧಿಗೆ ಜಗಣಂ ।
ಸೋಂಕೆ ಯುಗ್ಮದೊಳೋಜದೊಳ್ ।
ಸಂಕಲ್ಪಿತ ಗಣವೊಪ್ಪೆ ।
ಸಂಕೀರ್ಣ ವಿಪುಲಾಹ್ವಯಂ ॥ ೬೩ ॥

ಜಾತಿಗಾಥೆ

ನಿಗಮಾಕ್ಷರದಿಂಪತ್ತಂ ।
ಯುಗಣಂ ವಿಷಮಾಂಘ್ರಿಯೊಳ್ ।
ಜಗಣಂ ಯುಗ್ಮದೊಳ್ ಮೂಡೆ ।
ಸೊಗಯಿಪ್ಪಕ್ಷರಾಷ್ಟಕಂ ।
ಬಗೆಗೊಂಡೊಪ್ಪೆ ಪಟ್ಪಾದ ।
ಕೊಗೆಗುಂ ಜಾತಿಗಾಥೆ ತಾಂ ॥ ೬೪ ॥

ವಿಜಾತಿಗಾಥೆ

ವಿದಿತೋದ್ಯದನುಷ್ಟಭೋಜ ।
ಪದಕ್ಕೇಕಾದಶಂಬರಂ ।
ಸದಕ್ಷರಂ ಬರೆ ವಿಜಾತಿಗಾಥೆ ।
ಯುದಯಿಕ್ಕುಂ ವಿಶೇಷದಿಂ ॥ ೬೫ ॥

ಚತುರ್ಥಾಧ್ಯಾಯಂ

ವಿಮಳಿನ ವೈತಾಳೀಯ ।
ಪ್ರಮುಖ ವಿವಿಧ ಜಾತಿ ವೃತ್ತ ಬಂಧದ ಮಾತ್ರಾ ।
ಸಮಕಾದಿ ಜಾತಿ ಪದ್ಯದ ।
ಸಮುಚಿತ ಲಕ್ಷಣವ ಲಕ್ಷ್ಯರೂಪದೊಳೊರೆವೆಂ ॥ ೧ ॥

ವೈತಾಳೀಯ ಪ್ರಕರಣಂ

ವೈತಾಳೀಯ ಪದ್ಯಂ - ೬ ಮಾತ್ರೆ+ರಲಗ । ೮ ಮಾತ್ರೆ+ರಲಗ.......
ರಸ ಮಾತ್ರೆಗಳೋಜಕಾದಿಯೊಳ್ ।
ವಸು ಕಲೆಗಳ್ ಯುಗ್ಮಾಂಘ್ರಿಗಾದಿಯೊಳ್ ।
ಶ್ವಸನಾಪ್ತ ಹರೀಶರಂತ್ಯದೊಳ್ ।
ಬೆಸೆದಿರೆ ವೈತಾಳೀಯಮೊಪ್ಪುಗುಂ ॥ ೨ ॥
ವರ ವೈತಾಳೀಯ ಜಾತಿಯೊಳ್ ।
ಪರಕಲೆಯೊಳ್ ಸಮಮಾತ್ರೆ ಮಿಶ್ರದಿಂ ।
ಬೆರೆದೊಂದದು ಯುಗ್ಮ ಪಾದದೊಳ್
ನಿರತಂ ಷಡ್ಲಘು ಸೇರ ದಾದಿಯೊಳ್ ॥ ೩ ॥

ಔಪಚ್ಛಂದಸಕ ಪದ್ಯಂ - ೬ಮಾತ್ರೆ+ರಯ । ೮ ಮಾತ್ರೆ+ರಯ.......
ಸ್ಥಾಪಿತ ಷಣ್ಮಾತ್ರೆಯೋಜಕಿರ್ದು ।
ದ್ವೀಪಕ ಗಜಕಲೆಗಳ್ ಸಮಾಂಘ್ರಿಗಿರ್ದು ।
ವ್ಯಾಪಿಸಿ ದಹನಾಂಬುವೊಪ್ಪೆ ಚೆಲ್ವಿಂ ।
ದೌಪಚ್ಛಂದಸಕಾಖ್ಯಮುದ್ಭವಿಕ್ಕುಂ ॥ ೪ ॥

ಆಪಾತಲಿಕಾ ಪದ್ಯಂ - ೬ ಮಾತ್ರೆ+ಭಗಗ । ೮ ಮಾತ್ರೆ+ಭಗಗ.......
ಋತು ಮಾತ್ರೆಗಳೋಜಕೆ ಮತ್ತು ।
ನ್ನತ ಫಣಿ ಮಾತ್ರೆ ಸಮಾಂಘ್ರಿಗೆ ಶೀತ ।
ದ್ಯುತಿ ಶಂಭು ಮೃಡರ್ ತುದಿಯೊಳ್ ಸಂ ।
ಸ್ಥಿತಿಗೊಳೆ ತಾನಾಪಾತಲಿಕಾಖ್ಯಂ ॥ ೫ ॥

ಸಮವೈತಾಳೀಯ ಪದ್ಯಂ - ೮ ಮಾತ್ರೆ+ರಲಗ

ಸುಮಧುರ ವೈತಾಳೀಯ ಪದ್ಯದೊಳ್ ।
ಸಮಪದಕೊಂದುವ ರೂಪಲಕ್ಷಣಂ ।
ಸಮನಿಸೆ ಚಾರು ಚತುಷ್ಪದಂಗಳೊಳ್ ।
ಸಮವೈತಾಳೀಯಾಖ್ಯವೊಪ್ಪುಗುಂ ॥ ೬ ॥

ವಿಷಮವೈತಾಳೀಯಪದ್ಯಂ – ೬ಮಾತ್ರೆ +ರಲಗ

ವೈತಾಳೀಯದೌಜ ಪಾದಸಂ ।
ಭೂತನಿಯಮಮೆಲ್ಲ ಪಾದದೊಳ್ ।
ದ್ಯೋತಿಸೆ ವಿಷಮಾಖ್ಯ ಸಂಯುತಂ ।
ವೈತಾಳೀಯಮಂ ವಿರಾಜಿಕುಂ ॥ ೭ ॥

ಸಮೌಪಚ್ಛಂದಸಕಪದ್ಯಂ – ೮ಮಾತ್ರೆ+ರಯ

ಛಂದೋನಿಯಮದ ಸೂತ್ರದಿಂದಮೌಪ ।
ಚ್ಛಂದಸಕದ ಸಮಪಾದ ಲಕ್ಷಣಂಗಳ್ ।
ಬಂದೊಡೆ ಸರ್ವಪದಂಗಳೊಳ್ ಸಮೌಪ ।
ಚ್ಛಂದಸಕಾಹ್ವಯ ಬಂಧಮುದ್ಭವಿಕ್ಕುಂ ॥ ೮ ॥

ವಿಷಮೌಪಚ್ಛಂದಸಕಪದ್ಯಂ - ೬ಮಾತ್ರೆ+ರಯು

ಕುಂದದಖಿಳ ಪಾದದೊಳ್ ಘುಹೌಪ ।
ಚ್ಛಂದಸಕೌಜಾಂಘ್ರಿ ಲಕ್ಷಣಂ ತಾಂ ।
ನಿಂದೊಡೆ ವಿಷಮಾದಿಸಂಯುತೌಪ ।
ಚ್ಛಂದಸಕಾಖ್ಯಂ ಸಮುದ್ಭವಿಕ್ಕುಂ॥ ೯ ॥

ಸಮಾಪಾತಲಿಕಾಪದ್ಯಂ - ೮ಮಾತ್ರೆ + ಭಗಗ

ವಿಮಲಾಪಾತಲಿಕಾಹ್ವಯಕೆಂದುಂ ।
ಸಮಪದಕೊಪ್ಪುವ ಲಕ್ಷಣ ರೂಪಂ ।
ಸಮದಿಂ ಸಕಲ ಪದಕ್ಕಿರೆಬರ್ಕುಂ ।
ರಮಣೀಯ ಸಮಾಪಾತಲಿಕಾಖ್ಯಂ ॥ ೧೦ ॥

ವಿಷಮಾಪಾತಲಿಕಾಪದ್ಯಂ - ೬ಮಾತ್ರೆ+ಭಗಗ

ಪರಿಶುದ್ಧಾಪಾತಲಿಕಾಯುಕ್ ।
ಚರಣದವೊಲ್ ಸರ್ವಪದಂಗಳ್ ।
ನೆರೆದಿರೆ ಹಿತದಿಂ ಬಗೆಗೊಳ್ಳುಂ ।
ವರ ವಿಷಮಾಪಾತಲಿಕಾಖ್ಯಂ ॥ ೧೧ ॥

ಪ್ರಾಚ್ಯವೃತ್ತಿಪದ್ಯಂ

ವರ ವೈತಾಳೀಯದೊಳ್ ಕರಂ ।
ಗುರು ಸಮಾಂಘ್ರಿಯ ಚತುರ್ಥ ಪಂಚಮ ।
ಸ್ಫುರಿತ ಕಲೆಯನೊಂದಿ ಯೋಗದಿಂ ।
ಬರೆ ವಿರಾಜಿಪುದು *ಪ್ರಾಚ್ಯವೃತ್ತಿಕಂ ॥ ೧೨ ॥

ಉದೀಚ್ಯವೃತ್ತಿಪದ್ಯಂ

ದ್ವಿತೀಯಕ ತೃತೀಯ ಮಾತ್ರೆಯುಂ ।
ಸತತಂ ವೈತಾಳೀಯದೋಜದೊಳ್ ।
ಪ್ರತೀತ ಗುರು ಪೊರ್ದೆ ಮಿಶ್ರದೊಳ್ ।
ಹಿತದಿಂದಕ್ಕುಮುದೀಚ್ಯವೃತ್ತಿಕಂ ॥ ೧೩ ॥

ಪ್ರವರ್ತಕಪದ್ಯಂ

ಉದೀಚ್ಯವೃತ್ತಿ ಪ್ರಕಾರದಿಂ ।
ಪದಸಮಾಂಘ್ರಿಗಳ್ ಪ್ರಾಚ್ಯವೃತ್ತಿವೋ ॥
ಳದಗ್ರ ಸಮ ಪಾದವೊಪ್ಪೆತಾ ॥
ನುದಯಿಕುಂ ಪ್ರಸಿದ್ಧಂ ಪ್ರವರ್ತಕಂ ॥ ೧೪ ॥

ಅಪರಾಂತಿಕಾಪದ್ಯಂ

ವಿಕೃತಿಯೊಂದದೆಂದುಂ ಪ್ರವರ್ತಕ ।
ಪ್ರಕಟ ಬಂಧದ ಸಮಾಂಘ್ರಿ ಲಕ್ಷಣಂ ।
ಸಕಲ ಪಾದಶದೆಡೆಗೊಂದೆ ರಂಜಿಕುಂ ।
ಸುಕವಿ ಹೃದ್ಯಮಪರಾಂತಿಕಾಹ್ವಯಂ ॥ ೧೫ ॥

ಚಾರುಹಾಸಿನೀಪದ್ಯಂ

ಪ್ರವರ್ತಕಕ್ಕೋಜ ಪಾದದೊಳ್ ।
ಪ್ರವಿಷ್ಟಮಾಗಿರ್ಪ ಲಕ್ಷಣಂ ।
ಪ್ರವರ್ತಿಸೆ ಚತುಷ್ಪದಂಗಳೊಳ್ ।
ಪ್ರವರ್ಧಿಕುಂ ಚಾರುಹಾಸಿನೀ ॥ ೧೬ ॥

ಔಪಚ್ಛಂದಸಕಪ್ರಾಚ್ಯವೃತ್ತಿಪದ್ಯಂ

ಸುಂದರ ಪದದಿಂದೊಪ್ಪುವೌಪ ।
ಚ್ಛಂದಸಾಖ್ಯೆಯೊಳ್ ಪ್ರಾಚ್ಯವೃತ್ತಿವೊಲ್ತಾಂ ।
ಛಂದೋನಿಯಮಂಗಳಿರ್ದೊಡೌಪ ।
ಚ್ಛಂದಸಾಶ್ರಿತ ಪ್ರಾಚ್ಯವೃತ್ತಿಯಕ್ಕುಂ ॥ ೧೭ ॥

ಔಪಚ್ಛಂದಸಕೋದೀಚ್ಯವೃತ್ತಿಪದ್ಯಂ

ಉದೀಚ್ಯವೃತ್ತಿ ಸ್ವರೂಪ ಸೂತ್ರಂ ।
ಪದದಿಂದೌಪಚ್ಛಂದಸಾಖ್ಯೆಯೊಳ್ ತಾಂ ।
ಪೊದಳ್ದೆಸೆಯೆ ತಪ್ಪದುದ್ಭವಿಕ್ಕುಂ ।
ಸದುಪಚ್ಛಂದಸಕಾದ್ಯುದೀಚ್ಯವೃತ್ತಿ ॥ ೧೮ ॥

ಔಪಚ್ಛಂದಸಕಪ್ರವರ್ತಕಪದ್ಯಂ

ಪ್ರಸಿದ್ಧಿ ವಡೆಗುಂ ಸಮಂತುಪಚ್ಛಂ ।
ದಸಕದೊಳ್ ನಿಯತಿಯಿಂ ಪ್ರವರ್ತಕಾಂಕ ।
ಪ್ರಸಕ್ತ ವಿಧಿಯೊಪ್ಪೆ ತಾನುಪಚ್ಛಂ ।
ದಸಕಬಂಧಜನಿತ ಪ್ರವರ್ತಕಾಖ್ಯಂ ॥ ೧೯ ॥

ಔಪಚ್ಛಂದಸಕಾಪರಾಂತಿಕಾಪದ್ಯಂ

ಛಂದದೊಳ್ ಚರಣ ಸಾಮ್ಯವೊಂದುತೌಪ ।
ಚ್ಛಂದಸಾಖ್ಯಕಪರಾಂತಿಕಾ ಸ್ವರೂಪಂ ।
ಕುಂದದೊಪ್ಪಿದೊಡೆ ಸಂಭವಿಕ್ಕುವೌಪ ।
ಚ್ಛಂದಸ ಪ್ರಜನಿತಾಪರಾಂತಿಕಾಖ್ಯಂ ॥ ೨೦ ॥

ಔಪಚ್ಛಂದಸಕಚಾರುಹಾಸಿನೀಪದ್ಯಂ

ಸಮುಜ್ವಲಚಾ ರುಹಾಸಿನೀಯು ।
ಕ್ರಮಕ್ಕುಪಚ್ಛಂದಸಾಂಘ್ರಿಯೊಪ್ಪಲ್ ।
ಸಮಂತುಪಚ್ಛಂದಸಾದಿ ಸಂಜ್ಞಾ ।
ಸಮನ್ವಿತಂ ಚಾರುಹಾಸಿನೀಯುಂ ॥ ೨೧ ॥

ಆಪಾತಲಿಕಾಪ್ರಾಚ್ಯವೃತ್ತಿಪದ್ಯಂ

ಪ್ರಾಚ್ಯ ಮಹಾಪಾತಲಿಕಾಖ್ಯಂ ।
ಪ್ರಾಚ್ಯವೃತ್ತಿವೊಲ್ ಲಕ್ಷಣವೊಂದಲ್ ।
ಸೂಚ್ಯದೊಳಾಪಾತಲಿಕಾದಿ ।
ಪ್ರಾಚ್ಯವೃತ್ತಿವೆಸಜಿಂ ತಳೆದಿರ್ಕುಂ ॥ ೨೨ ॥

ಆಪಾತಲಿಕೋದೀಚ್ಯವೃತ್ತಿಪದ್ಯಂ

ಉದೀಚ್ಯವೃತ್ತಿ ಪ್ರತಿರೂಪಂ ।
ಪುದಿದೊಂದಿದೊಡಾಪಾತಲಿಕಾಂಕಾ ।
ದ್ಯುದೀಚ್ಯವೃತ್ತಿ ಪ್ರಥಿತಾಖ್ಯಂ ।
ವಿದಿತಾಪಾತಲಿಕಾಹ್ವಯಕಕ್ಕುಂ ॥ ೨೩ ॥

ಆಪಾತಲಿಕಾಪ್ರವರ್ತಕಪದ್ಯಂ

ಪ್ರವರ್ತಕದ ಲಕ್ಷಣದಿಂದಂ ।
ತವೆ ಪೊದಳ್ದೊಡಾಪಾತಲಿಕಾವಿ ।
ಪ್ರವರ್ತಕ ಸಮಾಖ್ಯೆಯು ತಾಳ್ಗುಂ ।
ಸುವಿಧಿಯಿಂದಮಾಪಾತಲಿಕಾಖ್ಯಂ ॥ ೨೪ ॥

ಆಪಾತಲಿಕಾಪರಾಂತಿಕಾಪದ್ಯಂ

ಸದಪರಾಂತಿಕಾ ಲಕ್ಷಣಮಂ ತಾಂ ।
ಪದದೊಳೊಂದಿದಾಪಾತಲಿಕಾಖ್ಯಂ ।
ಪದುಳದಿಂದಮಾಪಾತಲಿಕಾ ಸಂ ।
ಭೃದಪರಾಂತಿಕಾ ನಾಮಮ ತಾಳ್ಗುಂ ॥ ೨೫ ॥

ಆಪಾತಲಿಕಾಚಾರುಹಾಸಿನೀಪದ್ಯಂ

ಸುಚಾರುಹಾಸಿನ್ಯನುರೂಪ ।
ಪ್ರಚೋದಿತಾಪಾತಲಿಕಾಖ್ಯಂ ।
ವಿಚಿತ್ರದಾಪಾತಲಿಕೋದ್ಯ ।
ತ್ಸುಚಾರುಹಾಸಿನ್ಯಕಮಕ್ಕುಂ ॥ ೨೬ ॥

ಮಾಗಧೀಪದ್ಯಂ – ೨ಚ + ಜ(ನಲ) + ಗ । ೧ಷ + ೧ಚ + ಜ(ನಲ) + ಗ

ಶ್ರುತಿ ಮಾತ್ರಾಂಶ ಯುಗಮೋಜದೊಳ್ ।
ಋತು ವಾರ್ಧಿ ಕಲಾಂಶಂ ಸಮಾಂಘ್ರಿಯೊಳ್ ।
ಜೊತೆಯೊಳ್ ಜಗಣಂ ಗುರುವಥವಾ ।
ಗತಿ ಲಘು ಗುರು ಬರೆ ಮಾಗಧಿಯೆನಿಕುಂ ॥ ೨೭ ॥

ಪಶ್ಚಿಮೊಂತಿಕಾಪದ್ಯಂ – ೨ಚ + ಜ(ನಲ) + ಗ

ಮಾಗಧಿಯೋಜಾಂಘ್ರಿ ಲಕ್ಷಣಂ ।
ನೀಗದೆ ಸರ್ವ ಚರಣಂಗಳೊಳ್ ।
ಯೋಗದೊಳೊಪ್ಪಿರೆ ಸೊಗಯಿಸುಗುಂ ।
ರಾಗದೆ ವರ ಪಶ್ಚಿಮಾಂತಿಕಾ ಬಂಧಂ ॥ ೨೮ ॥

ಉಪಹಾಸಿನೀಪದ್ಯಂ – ೧ಷ+ಚ+ಜ(ಸಲ)+ಗ

ಅಮಳಿನ ಮಾಗಧಿಯು ಸಮಪಾದದೊಳ್ ।
ಕ್ರಮದಿಂದೊಪ್ಪುವ ಲಕ್ಷಣಮನಿಶಂ ।
ಸಮದಿಂ ಚತುರಂಘ್ರಿಯೊಳೆಸೆಯೆ ಕರಂ ।
ಸಮನಿಕುಮುಪಹಾಸಿನಿ ಮೃದುಪದದಿಂ ॥ ೨೯ ॥

ಮಾತ್ರಾಸಮಕಪ್ರಕರಣಂ

ಕಂದ

ಸದಮಳ ಮಾತ್ರಾಸಮಕದೊ ।
ಳುದಧಿಕಲಾಗಣ ಚತುಷ್ಟಯಂ ಶೋಭಿಸುಗುಂ ।
ಮೊದಳೊಳ್ ಜಗಣಂ ಮೂಡದು ।
ತುದಿಯೊಳ್ ಗುರ್ವಂತಯುಗಕಲಾಗಣಮೊಗೆಗುಂ ॥ ೩೦ ॥

ಮಾತ್ರಾಸಮಕಪದ್ಯಂ

ಪದದೊಳ್ ಷೋಡಶ ಕಲೆಗಳ್ ನಿರತಂ ।
ಪುದಿದಿರೆ ಲಘು ನವಮಕೆ ಬರೆ ನಿಯತಂ ।
ತುದಿಯೊಳ್ ಗುರುವಿರೆ ಮೆಱೆವುದು ಹೃದ್ಯಂ ।
ವಿದಿತಂ ಮಾತ್ರಾಸಮಕಂ ಪದ್ಯಂ ॥ ೩೧ ॥

ಚಿತ್ರಪದ್ಯಂ

ಚಿತ್ರ ಸುಚರಣಕೆ ನೃಪ ಪರಿಮಿತಿಯೊಳ್ ।
ಮಾತ್ರೆಗಳಿರೆ ಶರ ವಸು ನಿಧಿ ಕಲೆಯೊಳ್ ।
ಸೂತ್ರದೆ ಲಘು ನಿಲೆ ಗುರು ಬರೆ ತುದಿಯೊಳ್ ।
ಚಿತ್ರಾಹ್ವಯಮೆಸೆವುದು ಸದ್ವಿಧಿಯೊಳ್ ॥ ೩೨ ॥

ಉಪಚಿತ್ರಾಪದ್ಯಂ

ಚರಣದೆ ಷೋಡಶ ಮಾತ್ರಾ ಪ್ರಚಯಂ ।
ಬರೆ ನವಮ ದಶಮ ಮಾತ್ರಾ ದ್ವಿತಯಂ ।
ಗುರುವೆನಿಸಿರೆ ತುದಿಯೊಳ್ ಗುರು ಹಿತದಿಂ ।
ದಿರೆ ರಂಜಿಪುದುಪಚಿತ್ರಾಂಕಿತದಿಂ ॥ ೩೩ ॥

ವಿಶ್ಲೋಕಪದ್ಯಂ

ಷೋಡಶ ಪರಿಮಿತ ಕಲೆಗಳ್ ಪದದೊಳ್ ।
ಕೂಡಿರೆ ಗುರು ಕಡೆಯೊಳ್ ಬರೆ ಲಘುಗಳ್ ।
ನೋಡೆ ವಿಶಿಖ ಕರಿಯೊಳ್ ನಿಲೆ ಬಟೀಕಂ ।
ಮೂಡುಗುಮಮಲ ಪದಂ ವಿಶ್ಲೋಕಂ ॥ ೩೪ ॥

ವಾನವಾಸಿಕಾಪದ್ಯಂ

ಅನುಪಮ ಷೋಡಶ ಕಲೆ ವರ ವಿಧಿಯೊಳ್ ।
ಘನ ಪದಕೊಪ್ಪಿರೆ ಸಲೆ ಲಘು ನಿಧಿಯೊಳ್ ।
ದಿನಪನೊಳಿರೆ ಗುರು ತುದಿಗಿರೆ ನಿತ್ಯಂ ।
ಜನಿಯಿಸುಗುಂ ವಾನವಾಸಿಕಾಖ್ಯಂ ॥ ೩೫ ॥

ಪಾದಾಕುಲಕ ಪದ್ಯಂ

ಪ್ರೋದಿತ ಮಾತ್ರಾಸಮಕಾದಿಗಳೊಳ್ ।
ಭೇದಮನುೞಿದೆೞಕದೊಳವೞವರೊಳ್ ।
ಪಾದಂ ಮಿಶ್ರದೆ ಮೂಡೆ ವಿಶುದ್ಧಂ ।
ಪಾದಾಕುಲಕಂ ಮೆೞೆವುದು ಸಿದ್ಧಂ ॥ ೩೬ ॥

ಪಿಂಗಳಪಾದಾಕುಲಕಪದ್ಯಂ

ಸಂಗತ ಷೋಡಶ ಮಾತ್ರಾ ವೃಂದಂ ।
ಸಂಗಳಿಸಿರೆ ಪದದೊಳ್ ಚೆಲ್ವಿಂದಂ ।
ಪಿಂಗದೆ ಬರ್ಕುಂ ಸುಚತುಷ್ಪದದಿಂ ।
ಪಿಂಗಳ ಪಾದಾಕುಲಕಂ ಹಿತದಿಂ ॥ ೩೭ ॥

ಅಚಲಧೃತಿಪದ್ಯಂ

ಪ್ರತಿಪದಕೆೞಕದೆ ಶರನಿಧಿ ಪರಿಮಿತ ।
ಗತಿಲಘುಯುತಗಣಮೊದವಿರೆ ಸಮುಚಿತ ।
ಯತಿ ಚರಣದ ತುದಿಗಗಲದೆ ಸೊಗಯಿಸೆ ।
ಹಿತದೊಳುದಯಿಃಪುದಚಲಧೃತಿ ಪರಿಕಿಸೆ ॥ ೩೮ ॥

ಅನಂಗಕ್ರೀಡಾಭೇದಂ

ಸೌಮ್ಯಾನಂಗಕ್ರೀಡಾ ಪದ್ಯಂ

ಖ್ಯಾತಂ ಸೌಮ್ಯಾನಂಗಕ್ರೀಡಾ ।
ಗೀತಂ ತಾಂ ಪೂರ್ವಾರ್ಧಕ್ಕಷ್ಟೋ ।
ನ್ನತ ಗುರುಗಳ ಪದಮೆರಡಿರೆ ಪರಕೆ ನೃ ।
ಪತಿ ಲಘುಗಳ ಪದಮೆರಡಿರೆ ನೆಱೆವುದು ॥ ೩೯ ॥

ಜ್ಯೋತಿರನಂಗಕ್ರೀಡಾಪದ್ಯಂ

ಕ್ಷಿತಿಪತಿ ಲಘುಗಳ ಪದಮೆರಡಿರೆ ಬಱಿ ।
ಕತಿಶಯ ವಸು ಗುರುಗಳ ಪದಮೆರಡಿರೆ ।
ಜಾತಿ ಪ್ರೋದ್ಯತ್ಪದ್ಯಂ ಬರ್ಕುಂ ।
ಜ್ಯೋತಿರ್ನಾಮಾನಂಗ ಕ್ರೀಡೆ ॥ ೪೦ ॥

ಅತಿರುಚಿರಂ

ಸುರ ಪುರ ಗಣ ನವಕಮಮಲ ಗುರುವನುಪಮ ಪದದೆ ನೆರೆದು ನಿಲೆ ಕರಂ ।
ಚರಣ ಯುಗವ ತಳೆವೆಸೆವುದು ಸರಸದೊಳತಿರುಚಿರಗತಿ ಯತಿರುಚಿರಂ॥೪೧।

ಪಂಚಮಾಧ್ಯಾಯಂ

ಖ್ಯಾತ ವಿಶುದ್ಧ ಕಲಾಸಂ ।
ಜಾತಗಣಾವಳಿಯು ತಳೆದು ರಂಜಿಪ ನಾನಾ ।
ಜಾತಿಯ ಛಂದೋವರ್ಗದ ।
ಜಾತಿ ಕದಂಬಕದ ಲಕ್ಷಣವ ವಿಸ್ತರಿಪೆಂ ॥ ೧ ॥

ಆರ್ಯಾಪ್ರಕರಣಂ

ಆರ್ಯಾಛಂಧಂ

ಪದಮುಳೆನಾರ್ಯೆಯೊಳೊಪ್ಪುವ ।
ಪದಗಳೊಳ್ ಮಾತ್ರೆಯೆಣಿಸೆ ಪನ್ನೆರಡುಂ ।
ಪದಿನೆಂಟುಂ ಪನ್ನೆರಡುಂ ।
ಪದಿನೆಯ್ದುಂ ಕ್ರಮದೊಳೊಂದಿರ್ಕುಂ ॥ ೨ ॥

ನಿಗಮ ಕಲಾಗಣ ಸಪ್ತಕ ।
ಸುಗುರು ಕರಂ ಪೂರ್ವದರ್ಧದೊಳ್ ಬರ್ಕುಂ ॥
ಜಗಣಮಥವಾ ಚತುರ್ಲಘು ।
ಸೊಗಯಿಸುಗುಂ ಷಷ್ಠಕತಿಶಯದಿಂ ॥ ೩ ॥

ಪರದರ್ಧದೆ ಲಘು ಷಷ್ಠಕೆ ।
ಗುರುವಷ್ಟಮಕಿರ್ಕುಮಿತರ ಧಾಮಕೆ ತಾಂ ।
ಶರಧಿಕಲಾಗಣಮೆಸೆಗುಂ ।
ಕರಂ ಜಗಣಮೋಜಕಿರದೆಂದುಂ ॥ ೪ ॥

ಸುಮಧುರತರಾರ್ಯೆಯೊಳ್ ಘನ ।
ಸಮಾಂಘ್ರಿಯಂತ್ಯಕ್ಕೆ ತಪ್ಪದನವರತಂ ।
ಕ್ರಮದಿಂ ನಿಶ್ಚಿತ ಪರ ವಿ ।
ಶ್ರಮಣಂ ನಿಲ್ಗುಂ ನಿರಾಕುಳದಿಂ ॥ ೫ ॥

ನುತ ಪೂರ್ವಾರ್ಧದೆ ಷಷ್ಠಕೆ ।
ಗತಿಲಘುವಿರೆ ವಿರತಿ ಮೊದಲ ಲಘುಗೆಸೆಗುಂ ।
ಶ್ರುತಿಲಘು ಸಪ್ತಮಕೊಪ್ಪಿರೆ ।
ಯತಿ ಷಷ್ಠಗಣಾಂತ್ಯಕುದ್ಭವಿಕುಂ ॥ ೬ ॥

ನಿರುಪಮ ಪರಾರ್ಧ ಭಾಗದೆ ।
ಶರನಿಧಿ ಲಘುವಿತತಿ ಪಂಚಮಕ್ಕಿರೆ ತಾಂ ।
ವಿರತಿ ಚತುರ್ಥ ಗಣಾಂತ್ಯಾ ।
ಕ್ಷರದೊಳ್ ಜನಿಯಿಸುಗುಮತಿಹಿತದಿಂ ॥ ೭ ॥

ಪಥ್ಯಾರ್ಯೆ

ವಿಮಲಾರ್ಯೆಯ ವಿಷಮಾಂಘ್ರಿಗೆ ।
ಸಮಪಾದಕೆ ತುದಿಯೊಳುಚಿತ ವಿಶ್ರಮಂ ।
ಸಮನಿಸೆ ಸಲೆ ಪಥ್ಯಾರ್ಯಾ ।
ಸಮಾಹ್ವಯಮನಾಂತು ರಂಜಿಸುಗುಂ ॥ ೮ ॥

ಪೂರ್ವಪಥ್ಯಾರ್ಯೆ

ವಿನುತಾರ್ಯೆಯ ಪೂರ್ವಾರ್ಧದೆ ।
ಘನತರ ವಿಷಮಾಂಘ್ರಿಯಂತ್ಯದೊಳ್ ಮಾತ್ರಂ ।
ಸುನಿಯತಿಯಿಂ ಯತಿಯಿರೆ ಸಂ ।
ಜನಿಯಿಸುಗುಂ ಪೂರ್ವಪಥ್ಯಾರ್ಯೆ ॥ ೯ ॥

ಪರಪಥ್ಯಾರ್ಯೆ

ಸುರುಚಿರ ಶುದ್ಧಾರ್ಯೆಯೊಳು ।
ತ್ತರಾರ್ಧದೋಜಾಂಘ್ರಿಯಂತ್ಯದೊಳ್ ಮಾತ್ರಂ ।
ವಿರತಿ ಕರಂ ಪರಿರಂಜಿಸೆ ।
ಪರಪಥ್ಯಾರ್ಯಾಖ್ಯೆಯೆಂದೆನಿಕುಂ ॥ ೧೦ ॥

ವಿಪುಳಾರ್ಯೆ

ವಿಪರೀತದಿನಾರ್ಯೆಯೊಳೋ ।
ಜಪಾದದಂತ್ಯಕೆ ವಿರಾಮಮಿರದೊಡೆ ತಾಂ ।
ವಿಪುಳಾರ್ಯೆಯೆನಿಸಿ ವಿಭ್ರಾ ।
ಜಿಪುದು ಕರಂ ದ್ವಿಪದಿಯಾಕೃತಿಯೊಳ್ ॥ ೧೧ ॥

ಚಪಲಾರ್ಯೆ

ವಿತತಾರ್ಯೆಯೊಳ್ ಜಕಾರಂ ।
ದ್ವಿತೀಯ ತುರ್ಯಕ್ಕೆ ಸುಗುರುಗಳ ನಡುವೊೞ್ ।
ಹಿತದಿಂದಮಿರ್ದೊಡಕ್ಕುಂ ।
ಪ್ರತೀತ ಸರ್ವಚಪಲಾರ್ಯಾಖ್ಯಂ ॥ ೧೨ ॥

ಮುಖಚಪಲಾರ್ಯೆ

ವಿಲಸದ್ವಿತೀಯ ತುರ್ಯ ।
ಸ್ಥಲಕ್ಕುದಗ್ರಗುರುಮಧ್ಯದೊಳ್ ಜಗಣಂ ।
ನಿಲೆ ಪೂರ್ವಾರ್ಧದೆ ತಾನದು ।
ಸಲೆ ಮುಖಚಪಲಾರ್ಯೆಯೆಂದೆನಿಕುಂ ॥ ೧೩ ॥

ಜಘನಚಪಲಾರ್ಯೆ

ಸೊಗಯಿಪ ಪರಾರ್ಧ ಭಾಗದೆ ।
ಸುಗುರುಗಳೆಡೆಯೊಳ್ ದ್ವಿತೀಯ ತುರ್ಯಕೆ ತಾಂ ।
ಜಗಣಂ ಪೊದಳ್ದೊಡಕ್ಕುಂ ।
ನೆಗಳ್ತೆಯಿಂ ಜಘನಚಪಲಾರ್ಯೆ ॥ ೧೪ ॥

ಕಂದಂ (ಸ್ಕಂಧಕಂ)

ಕಂದಕೆ ತನ್ನುಭಯಾರ್ಧದೊ ।
ಳೆಂದುಂ ವಾರಿಧಿ ಕಲಾಗಣಾಷ್ಟಕಮಿರ್ಕುಂ ।
ಕುಂದದೆ ಮೂಜಿಸಮಾಂಘ್ರಿಯೊ ।
ಳೊಂದುಗುಮೈದುಗಣಮುದಯಿಕುಂ ಸಮಪದದೊಳ್ ॥ ೧೫ ॥

ಒಪ್ಪದು ವಿಷಮಕೆ ಜಗಣಂ ।
ತಪ್ಪದೆ ಜಗಣಮಥವಾ ಚತುರ್ಲಘು ಷಷ್ಠ ।
ಕ್ಕೊಪ್ಪುಗುಮಷ್ಟಮಧಾಮದೊ ।
ಳಪ್ಪಿರ್ಕುಂ ಗುರುಯುಗಂಗಳಥವಾಸಗಣಂ ॥ ೧೬ ॥

ವಿದಿತ ಸ್ಕಂಧಕದೊಳ್ ಸಮ ।
ಪದದಂತ್ಯಕ್ಕುಚಿತ ವಿಶ್ರಮಂ ಬಹುಳತೆಯಿಂ ।
ದುದಯಿಸುಗುಂ ವಿಷಮಾಂಘ್ರಿಯ ।
ತುದಿಗೆ ವಿರಾಮಂ ವಿರಾಜಿಕುಂ ಕೆಲವೆಡೆಯೊಳ್ ॥ ೧೭ ॥

ಕ್ರಮದೆ ನಿಜಾರ್ಧದ ಷಷ್ಠಕೆ ।
ಸಮುದ್ರಲಘು ನೆಲಸೆ ವಿರತಿಯಾದ್ಯಕ್ಷರದೊಳ್ ।
ಸಮನಿಕುಮಾಗಮಲಘು ಸ ।
ಪ್ತಮಕಿರೆ ಯತಿ ಷಷ್ಠಗಣದ ತುದಿಗುದಯಿಕ್ಕುಂ ॥ ೧೮ ॥

ಪಥ್ಯಾಸ್ಕಂಧಕಂ

ಸುಂದರ ಲಯದಿಂದೊಪ್ಪುವ ।
ಕಂದದೊಳೋಜ ಸಮ ಪಾದದಂತ್ಯದೆ ಯತಿಗಳ್ ।

ನಿಂದೊಡೆ ಪಥ್ಯಾಸ್ಕಂಧಕ ।
ಮೆಂದುಜ್ವಲ ನಾಮಧೇಯದಿಂ ಶೋಭಿಸುಗುಂ ॥ ೧೯ ॥

ಪೂರ್ವಪಥ್ಯಾಸ್ಕಂಧಕಂ

ರಮಣೀಯ ಸ್ಕಂಧಕದೊಳ್ ।
ಸಮುದಿತ ಪೂರ್ವಾರ್ಧದೋಜಪಾದದ ತುದಿಯೊಳ್ ।
ಕ್ರಮದಿಂ ಮಾತ್ರಂ ಸದ್ವಿ ।
ಶ್ರಮಮಿರೆ ರಂಜಿಪುದು ಪೂರ್ವ ಪಥ್ಯಾಸ್ಕಂಧಂ ॥ ೨೦ ॥

ಪರಪಥ್ಯಾಸ್ಕಂಧಕಂ

ನಿರವದ್ಯ ಸ್ಕಂಧಕದು ।
ತ್ತರಾರ್ಧದೊಳ್ ಮಾತ್ರಮೋಜ ಚರಣದ ಕಡೆಯೊಳ್ ।
ವಿರಮಣಮೊಳ್ಪಿಂದೊಪ್ಪಿರೆ ।
ಪರಪಥ್ಯಾಸ್ಕಂಧಕಾಭಿಧಾನವ ಪಡೆಗುಂ ॥ ೨೧ ॥

ವಿಪುಳಾಸ್ಕಂಧಕಂ

ಸುಕಳಾಗಣಬದ್ಧ ಸ್ಕಂ ।
ಧಕದೊಳ್ ವಿಷಮಾಂಘ್ರಿಯಂತಿಮಕೆ ವಿಶ್ರಮಣಂ ।
ಪ್ರಕಟಿಸದಿರೆ ವಿಪುಳಾಸ್ಕಂ ।
ಧಕಾಭಿಧಾನವ ಸಮಂತು ತಳೆಗುಂ ಸಿದ್ಧಂ ॥ ೨೨ ॥

ಚಪಲಾಸ್ಕಂಧಕಂ

ಸತತಂ ದ್ವಿತೀಯಚತುರ್ಥ ।
ಚ್ಚತುರ್ಥಧಾಮಕ್ಕೆ ಗುರುಗಳೆಡೆಯೊಳ್ ಜಗಣಂ ॥
ಸ್ಥಿತಿಯೊಂದಿ ನಿಂದೊಡಕ್ಕುಂ ।
ಪ್ರತೀತಿಯಿಂದಮದು ಚೆಲ್ವ ಚಪಲಾಸ್ಕಂಧಂ ॥ ೨೩ ॥

ಮುಖಚಪಲಾಸ್ಕಂಧಕಂ

ಪ್ರಖರ ದ್ವಿತೀಯ ತುರ್ಯ ।
ಕ್ಕಖಂಡ ಗುರ್ವಕ್ಷರಂಗಳೆಡೆಯೊಳ್ ಜಗಣಂ ।
ಸುಖಮೆನೆ ಪೂರ್ವಾರ್ಧದೊಳಿರೆ ।
ಮುಖಚಪಲಾಸ್ಕಂಧಕಾಖ್ಯೆಯಿಂದದು ಮೆಱೆಗುಂ ॥ ೨೪ ॥

ಜಘನಚಪಲಾಸ್ಕಂಧಕಂ

ಪರಿಕಿಸೆ ನಿಜಾಪರಾರ್ಧದೆ ।
ಗುರುಗಳ ನಡುವೊಳ್ ದ್ವಿತೀಯ ತುರ್ಯಕೆ ಜಗಣಂ ।
ಬರೆ ತಪ್ಪದೆಂದುಮಕ್ಕುಂ ।
ಸುರೀತಿಯಿಂದವುದು ಜಘನ ಚಪಲಾಸ್ಕಂಧಂ ॥ ೨೫ ॥

ಗೀತಿ

ವಿದಿತಾರ್ಯೆಯ ಪೂರ್ವಾರ್ಧದ ।
ಪದದ್ವಿತಯದಂತೆ ಸತ್ಕಳಾಗಣದಿಂ ।
ಪುದಿದಪರಾರ್ಧದ ಪದಯುಗ ।
ಮುದಯಿಸಿ ಬರೆ ಗೀತಿಯೆಂಬ ಪೆಸರಿಕ್ಕುಂ ॥ ೨೬ ॥

ಉಪಗೀತಿ

ಪರಿಶುದ್ಧಾರ್ಯೆಯೊಳೊಪ್ಪುವ ।
ಪರಾರ್ಧದಂಘ್ರಿಯುಗದಂತಿರೆವೊಲ್ ।
ವರ ಪೂರ್ವಾರ್ಧದ ಪದಮಿರೆ ।
ಸರಸದೊಳುಪಗೀತಿ ತಾನಕ್ಕುಂ ॥ ೨೭ ॥

ಉದ್ಗೀತಿ

ಲಲಿತಾರ್ಯೆಯ ಪೂರ್ವಾರ್ಧಂ ।
ನೆಲಸೆ ಪರಾರ್ಧಕೊಡನಪರಾರ್ಧಂ ।
ನಿಲೆ ಪೂರ್ವಾರ್ಧದೆ ಪದಸ ।
ಮ್ಮಿಲನದಿನುದ್ಗೀತಿಯೆನಿಸಿ ರಂಜಿಸುಗುಂ ॥ ೨೮ ॥

ಉಪಸ್ಕಂಧಕಂ

ವಿಕಲತೆಯಿಂದಂ ಸ್ಕಂಧದ ।
ಶಕಲಯುಗದೆ ಷಷ್ಠಕೊಂದೆ ಸುಲಘುತಾಂ ।
ಪ್ರಕಟದೆ ನಿಂದೊಡುಪಸ್ಕಂ ।
ಧಕವೆಂಬಭಿಧಾನಮುಂ ತಳೆದಿರ್ಕುಂ ॥ ೨೯ ॥

ಅವಸ್ಕಂಧಕಂ

ಕಂದದ ಪೂರ್ವಾರ್ಧದೆ ಸಲೆ ।
ಕುಂದದೆ ನಿಯುತಗಣಮಿರೆ ಪರಾರ್ಧದೆ ಚೆಲ್ವಿಂ ।
ದೊಂದೆ ಸುಲಘು ರಸನಿಲಯಕೆ ।
ನಿಂದೊಡವಸ್ಕಂಧ ನಾಮಮ ಪಡೆಗುಂ ॥ ೩೦ ॥

ಉತ್ಸ್ಕಂಧಕಂ

ಲಸದಮಲಸ್ಕಂಧಕದೊಳ್ ।
ರಸದೆಡೆಗೊಂದು ಲಘು ಪೂರ್ವಾರ್ಧದೆ ತಾಂ ।
ನುಸುಳೆ ಪರಾರ್ಧದೆ ನಿಯುತಿಯೊ ।
ಳೆಸೆವಗಣಂ ಬೆಸೆಯೆ ಬರ್ಕುಮುತ್ಸ್ಕಂಧಾಖ್ಯಂ ॥ ೩೧ ॥

ಸಂಕೀರ್ಣಸ್ಕಂಧಕಭೇದಂ

ಸಿಂಹಿನೀಸಂಕೀರ್ಣಸ್ಕಂಧಕಂ

ಸ್ಫುರಿತ ಸ್ಕಂಧಕದರ್ಧದ ।
ಚರಣದ್ವಯಮಾರ್ಯೆಯಾದಿಪಾದದ್ವಿತಯಂ ।
ಬರೆ ಸಂಕೀರ್ಣಸ್ಕಂಧಂ ।
ವರ ಸಿಂಹಿನಿಯೆಂಬ ಪೆಸರಿನೊಂದಿರ್ಕುಂ ॥ ೩೨ ॥

ಗಾಥಿನೀಸಂಕೀರ್ಣಸ್ಕಂಧಕಂ

ವಿತತಾರ್ಯೆಯಾದಿ ಚರಣ ।
ದ್ವಿತಯಂ ಕಂದದ ಪದದ್ವಯಂ ಬರೆ ಸ ।
ನ್ನುತ ಸಂಕೀರ್ಣಸ್ಕಂಧಂ ।
ಪ್ರತೀತ ಗಾಥಿನಿಯೆನಿಪ್ಪ ನಾಮಮ ತಳೆಗುಂ ॥ ೩೩ ॥

ಸಂಕೀರ್ಣಾವ ಸ್ಕಂಧಕಂ

ಸ್ಕಂಧಕದ ಪಾದ ಯುಗ್ಮಕೆ ।
ಸಂಧಿಸುತಾರ್ಯಾಪರಾರ್ಧದಂಘ್ರಿದ್ವಂದ್ವಂ ।
ಬಂಧಿಸೆ ಸಂಕೀರ್ಣಾವ ।
ಸ್ಕಂಧಂ ಭಿನ್ನವಿಧಿಯಿಂದೆಸೆಗುಂ ॥ ೩೪ ॥

ಸಂಕೀರ್ಣೋತ್ಸ್ಕಂಧಕಂ

ಸಂಕರದೊಳಾರ್ಯೆಯುಪರಾ ।
ರ್ಧಂಕಂದದ ಪಾದಯುಗಮಿರೆ ತಾಂ ।
ಸಂಕೀರ್ಣೋತ್ಸ್ಕಂಧಃ ।
ಮಾಂಕಿತ ನಾಮದೆ ವಿಚಿತ್ರ ರೀತಿಯೊಳೊಗೆಗುಂ ॥ ೩೫ ॥

ರಿಪುಚ್ಛಂದಗೀತಿ

ಸುಮನೋಹರ ಗೀತಿಯಸ ।
ಪ್ತಮಧಾಮದೆ ಶುದ್ಧ ರಗಣಮಾವಗಂ ತಾ ।
ಸಮ*ದುರ್ ವಿರಾಜಿಸೆ ಚೆಲ್ವಿಂ ।
ದಮಳರಿಪುಚ್ಛಂದವೆಂಬ ನಾಮಮಕ್ಕುಂ ॥ ೩೬ ॥

ಲಲಿತಾಗೀತಿ

ಲಲಿತೋಜ್ವಲತರ ಗೀತಿಯೊಳ್ ।
ವಿಲಸಿತ ರಗಣಾ ತೃತೀಯ ನಿಲಯಕೊಡಂ ।
ನೆಲಸೆ ವಿಶೇಷ ವಿಧಾನದಿಂ ।
ಲಲಿತಾಹ್ವಯಮಾಂತು ರಂಜಿಕುಂ ಸಿದ್ಧಂ ॥ ೩೭ ॥

ಭದ್ರಿಕಾಗೀತಿ

ಅತಿಶಯದೆ ಗೀತಿಯರ್ಧದೊಳ್ ।
ತೃತೀಯ ಸಪ್ತಮಕೆ ರಗಣಮೊಳ್ಪಿನಿಂದಂ ।
ಹಿತಮೆನಿಪಂತಿರೆ ಶೋಭಿಕುಂ ।
ವಿತತಪದಾಶ್ರಯದೆ ಭದ್ರಿಕಾಖ್ಯಪದ್ಯಂ ॥ ೩೮ ॥

ವಿಚಿತ್ರಗೀತಿ

ಗೀತಿಯೊಳ್ ಷಷ್ಠಕೆ ನಿಶ್ಚಿತ ।
ರೀತಿಯೊಳ್ ಗಣಮೊಪ್ಪೆ ಬೇಱೆ ತಾಣಕೆಂದುಂ ।
ಖ್ಯಾತ ಸದ್ರಗಣಂ ಮಿಶ್ರದಿಂ ।
ದ್ಯೋತಿಸಿ ನಿಂದೊಡೆ ವಿಚಿತ್ರಗೀತಿಯಕ್ಕುಂ ॥ ೩೯ ॥

ದ್ವಿಪದೀ

ಋತು ಮಾತ್ರಾಧರಾಂಶ ಪಂಚ ಶ್ರುತಿಮಾತ್ರಾಗಣ ಗುರೂತ್ಕರಂ ।
ಪ್ರತಿಪದಕೊದವೆ ಚಾರು ಚರಣದ್ವಿತಯದೆ ತಾಂ ದ್ವಿಪದಿ ರಂಜಿಕುಂ ॥ ೪೦ ॥

ನಿಗಮ ಲಘುಯುತ ಸುಗಣಮಥವಾ ಜಗಣಂ ಬಾಹುರಸಧಾಮದೊಳ್ ।
ಸೊಗಯಿಸಿ ನಿಲ್ಕೆ ಬೇಜ್ ತಾಣದೆ ಜಗಣಂ ಪುಗದಿರ್ಕೆ ದುಮಯಿಯೊಳ್ ॥ ೪೧ ॥

ಕರರಸವೆಡೆಗೆ ಶರಧಿಲಘುಗಣವಿರೆ ಯತಿಯಾದಿ ಲಘುಗಿರ್ಕೆ ತಾಂ ।
ವರಷಟ್ಕಲಡೆ ಸಮದ ವರ್ಣಂ ಪರದಕಲೆಯು ಬೆರೆವುದನುಚಿತಂ ॥ ೪೨ ॥

ಅಬ್ಜನಾಳ ದ್ವಿಪದೀ

ಪರಮ ದ್ವಿಪದಿಯರ್ಧದೊಳ್ ಸದ್ಗುರುವೊಂದತ್ರ್ಯಕ್ಕೆ ನೆಲಸೆ ಮತ್ತಂ ।
ಚರಣಂಗಳದಱಿಂದದೊಳೆಸೆಯೆ ಪರಿಶೋಭಿಕುಮೆಂದುಮಬ್ಜನಾಳಂ ॥೪೩॥

ಕಾಮಲೇಖಾದ್ವಿಪದೀ

ವಿದಿತ ದ್ವಿಪದಿಯರ್ಧಭಾಗದ ತುದಿಯೊಳ್ ಬರ್ಪ ಗುರುವಿಂದಂ ।
ಮೊದಲೊಳ್ ನಿಲ್ವ ಸುಲಘುವಿಲ್ಲದೊಡುದಯಿಸುಗುಂ ಕಾಮಲೇಖೇ ॥ ೪೪ ॥

ಸೂಚನೆ

ದ್ವಿಪದಿಯೊಳೊಪ್ಪುವ ನಿಯತ ।
ದ್ವಿಪಾದವಿರ್ಮಡಿಯನಾಂತು ನಿಲೆ ವಿಸ್ತರದಿಂ ।
ಸುಪದಚತುಷ್ಕದಭಂಗ ।
ದ್ವಿಪದೀಬಂಧಂಗಳೆನಿಕುಮುಚಿತಕ್ರಮದಿಂ ॥ ೪೫ ॥

ದ್ವಿಪಥಕ ಪದ್ಯಂ

ನಿಗಮ ಕಲಾಂಶತ್ರಯ ಗುರುಗಳ್ ।
ಸೊಗಯಿಸೆ ವಿಷಮಕೆ ಮತ್ತಂ ।
ದ್ವಿಗತಿಕಲಾಂಶಂ ದ್ವಿಗುರು ಸಮ ।
ಕ್ಕೊಗೆಯೆ ದ್ವಿಪಥಕ ವೃತ್ತಂ ॥ ೪೬ ॥

ಪರಮ ದ್ವಿಪಥಕದೊಳ್ ಜಗಣಂ ।
ಬರಲಾಗದೆಜಿಕದಿಂದಂ ।
ಪರ ಸಮಪದಕಂತ್ಯಪ್ರಾಸಂ ।
ಕರಮೆಸೆಗುಂ ಕ್ರಮದಿಂದಂ ॥ ೪೭ ॥

ಧ್ರುವಕಪದ್ಯಂ

ಜಲಧಿ ಕಲಾಂಶ ಚತುಷ್ಟಯ ವೃಂದಂ ।
ನೆಲಸಿರೆ ಸುಪಾದದೊಳ್ ಹಿತದಿಂದಂ ।
ಚಲಿಸದೆ ಗುರು ತುದಿಗಿರೆ ಮೃದುಗತಿಯಿಂ ।
ಸಲೆ ಶೋಭಿಕುಂ ಧ್ರುವಕಮುನ್ನತಿಯಿಂ ॥ ೪೮ ॥

ವಿಮಲ ಜಗಣಮಥವಾ ಗತಿಲಘುಗಳ್
ಸಮಪಾದದಾ ದ್ವಿತೀಯಾಲಯದೊಳ್ ।
ಕ್ರಮದಿಂದಿರ್ಕುಂ ವಿಷಮ ಸ್ಥಳದೊಳ್ ।
ಸಮನಿಸದು ಜಗಣಮೊಕ್ಕಿಪೊಡಿದಜ಼ೊಳ್ ॥ ೪೯ ॥

ಗುಣಪದ್ಯಂ

ಜಗಣೇತರ ಜಲನಿಧಿ ಮಾತ್ರಾ ।
ಸುಗಣತ್ರಯುಗುರುವಿರೆ ಪದದೊಳ್ ।
ಬಿಗಿದು ತೃತೀಯಾಂಘ್ರಿಗೆ ಸಲ್ಲಘು ।
ಯುಗಳಂ ಕೂಡಿರೆ ಗುಣಮೆನಿಕುಂ ॥ ೫೦ ॥

ಪದ್ಧತಿ

ಉದಧಿಕಲಾಂಶ ಚತುಷ್ಟಯವೊಡನಿರೆ ।
ತುದಿಗೆ ಜಗಣಮಥವಾ ಶ್ರುತಿಲಘು ಬರೆ ।
ಪದವೆಡೆಗಾದ್ಯಂತ ಪ್ರಾಸವೊಂದೆ ।
ಉದಯಿಸುಗುಂ ಪದ್ಧತಿ ಚೆಲ್ವಿನಿಂದೆ ॥ ೫೧ ॥

ಪದ್ಧಡಿ

ನಿಗಮ ಕಲಾಂಶ ಚತುಷ್ಕಂ ಪದದೊಳ್ ।
ಸೊಗಯಿಸೆ ಗುರುವಿವರ್ಜೊಳ್ ಬರೆ ತುದಿಯೊಳ್ ।
ಜಗಣಂ ಕಾಣಿಸದಿರ್ದೊಡೆ ನಿರತಂ ।
ಬಗೆಗೊಂಡೆಸೆಗುಂ ಪದ್ಧಡಿ ಖಚಿತಂ ॥ ೫೨ ॥

ಅಡಿಲಾಪದ್ಯಂ

ವನಧಿಕಲಾಂಶ ಚತುಷ್ಕಂ ಸೊಗಯಿಸೆ ।
ಘನಲಘುಯುಗವಿವರ್ಜೊಳ್ ತುದಿಗುದಯಿಸೆ ।
ವಿನುತ ಪದಾಂತ್ಯ ಪ್ರಾಸಂ ಶೋಭಿಸೆ ।
ಜನಿಯಿಪುದಡಿಲಾಪದ್ಯಂ ಭಾವಿಸೆ ॥ ೫೩ ॥

ಮಡಿಲಾಪದ್ಯಂ

ಜಡಧಿಕಲಾಂಶ ಚತುಷ್ಟಯಮುಚಿತದೆ ।
ಗಡಣಿಸುತಿಂತಿರೆ ಪದಯುಗ ಮಾತ್ರದೆ ।
ಕಡು ಚೆಲ್ವಂತ್ಯಪ್ರಾಸಂ ಸಮನಿಸೆ ।
ಮಡಿಲಾಪದ್ಯಮೆನಿಪ್ಪುದು ಪರಿಕಿಸೆ ॥ ೫೪ ॥

ಉತ್ಸಾಹಪ್ರಕರಣಂ

ಉತ್ಸಾಹಚತುಷ್ಪದಿ

ಮೋಹಕೋಕ್ತಿ ಯುಕ್ತ ಪದ ನಿಯುಕ್ತ ಪದದೆ ವರ ಲಯ ।
ಗ್ರಾಹಿಯಾಗಿ ನಗಣಮಲ್ಲದೊಡೆ ವಿಕಲ್ಪ ಗುರುಲಘು ।
ವ್ಯೂಹಮೇಳು ಬಂದು ತುದಿಗೆ ಗುರು ವಿರಾಜಿಸಿರ್ದೊಡು ।
ತ್ಸಾಹ ನಾಮದಿಂದ ಮುತ್ಸವಾಖ್ಯೆಯಿಂದೆ ರಂಜಿಕುಂ ॥ ೫೫ ॥

ಮಹೋತ್ಸವಚತುಷ್ಪದಿ

ಅಮೋಘ ಪದದೊಳಾದಿಗೊಂದು ಜಗಣಮಿರ್ದು ನಿತ್ಯಮುಂ ।
ತ್ರಿಮಾತ್ರೆಯೆಸೆವ ಗುರುಲಘುಗಳ ಗಣಮುಮೊಡನೆ ನಗಣಮುಂ ।
ವಿಮಿಶ್ರದಿಂದಮಾಱು ತಾಣದಲ್ಲಿ ನಿಲೆ ಗುರೂದ್ಭವಂ ।
ಕ್ರಮಾನುಗತಿಯೊಳಂತ್ಯಕೊಪ್ಪೆ ಶೋಭಿಕುಂ ಮಹೋತ್ಸವಂ ॥ ೫೬ ॥

ರಮಾಚತುಷ್ಪದಿ

ಜಕಾರಕೊಂದಿ ಗಣಯುಗಂ ॥
ನಕಾರ ಗುರುಲಘೂತ್ಕರಂ ।
ವಿಕಲ್ಪದೊಳಿರೆ ಗುರು ಬರೆ ।
ಪ್ರಕಾಶಿಕುಂ ರಮಾಹ್ವಯಂ ॥ ೫೭ ॥

ಲಯೋತ್ತರಪ್ರಕರಣಂ

ಪಂಚವಿಧಲಯೋತ್ತರಂ–

ಉತ್ಸವಾಂಘ್ರಿಯೊಂದು ಸದ್ರಮಾಂಘ್ರಿಯೊಂದನಂತರಂ
ಘನೋತ್ಸವಾಂಘ್ರಿಕಾಂತರಂ ।
ಪ್ರೋತ್ಸರಮ್ಯತರ ರಮಾಂಘ್ರಿಯೊಂದಿ ನಿಲೆ ನಿರಂತರಂ ವಿರಾಜಿಕುಂ
ಲಯೋತ್ತರಂ ॥ ೫೮ ॥
ವಿಶ್ರುತೋತ್ಸವಾಂಘ್ರಿಯೊಂದು ವರ ರಮಾಪದದ್ವಯಂ
ಸದುತ್ಸವಾಂಘ್ರಿಕಾವ್ಯಯಂ ರಮಾಂಘ್ರಿಯುಗ್ಮಕಾನ್ವಯಂ ॥
ಮಿಶ್ರವಾಗಿ ಬೆರೆದು ಸೇರೆ ರಂಜಿಸುವುದು ನಿಶ್ಚಯಂ - ವಿಶುದ್ಧ ಸುಪದ
ಸಂಚಯಂ - ಲಯೋತ್ತರಂ ಲಯಾಶ್ರಯಂ ॥ ೫೯ ॥
ಸದಮಳೋತ್ಸವಾಂಘ್ರಿ ಸಮ್ಮಿಲದ್ರಮಾಂಘ್ರಿಸಂಕುಳಂ -
ಘನೋತ್ಸವಾಂಘ್ರಿಕೋಜ್ವಳಂ ।
ಮೃದು ರಮಾಂಘ್ರಿಯುಗ್ಮಮೊಪ್ಪೆ ಸಂಜನಿಕುಮನಾಕುಳಂ –
ಲಸದ್ವಚಸ್ಸಮಾಕುಳಂ - ಲಯೋತ್ತರಂ ಲಯಾಮಳಂ ॥ ೬೦ ॥
ವಿಮಳಿನೋತ್ಸವಾಂಘ್ರಿಯೊಂದು ಸದ್ರಮಾಂಘ್ರಿ ಯುಗ್ಮಕಂ -
ಪ್ರಭಾಸ್ವದುತ್ಸವಾಂಘ್ರಿಕಂ - ಸಮುಜ್ವಲದ್ರಮಾಂಘ್ರಿಕಂ
ಕ್ರಮದೊಳೊಂದೆ ಸಂಭವಿಪುದು ಮಧುರನಾದ ರಂಜಕಂ -
ಲಯೋತ್ತರಂ ಲಯಾತ್ಮಕಂ ॥ ೬೧ ॥
ವಿಲಸಿತೋತ್ಸವಾಂಘ್ರಿಯೊಂದು ತಪ್ಪದಾದಿ ಭಾಗದೊಳ್ -
ರಮಾಂಘ್ರಿಯೆರಡು ಮಧ್ಯದೊಳ್ - ಸದುತ್ಸವಾಂಘ್ರಿಯಂತ್ಯದೊಳ್-
ನೆಲಸೆ ಸೊಗಯಿಕುಂ ಲಯೋತ್ತರಂ ಲಯಾನುಬಂಧದೊಳ್ ॥ ೬೨ ॥

ಸೂಚನೆ

ನಿಯತ ಕಳಾಶ್ರಿತ ನಿರ್ಮಲ ।
ಲಯದಿಂದೊಪ್ಪುವ ಲಯೋತ್ತರಂಗಳ ಪದಸಂ ।
ಚಯಮಿರ್ಪಡಿಯೊಳ್ ನಿಂದೊಡೆ ।
ಲಯೋತ್ತರ ಚತುಷ್ಪದೀ ಸಮಾಖ್ಯೆಯು ತಳೆಗುಂ ॥ ೬೩ ॥

ಮಾತ್ರಾದಂಡಕ ಪ್ರಕರಣಂ

ಉತ್ಸವದಂಡಕಂ

ವರ ವಿಶಾಲ ಚರಣದಲ್ಲಿ ಭರದೊಳೇಟರಿಂದಮಧಿಕ ಸಂಖ್ಯೆಯೊಳ್ ।
ಗುರು ಲಘು ಪ್ರಯುಕ್ತ ಗಣಮುಮುರು ವಿಕಲ್ಪ ನಗಣಮುಂ
ಯಥೇಷ್ಟದೊಳ್ ।
ನೆರೆಯೆ ತುದಿಯೊಳೊಂದು ಸುಗುರು ಪಿರೆ ಕರಂ ವಿರಾಜಿಸುವುದು
ನಿಶ್ಚಯಂ ।
ಸರಸದಿಂದಮುತ್ಸವಾಖ್ಯ ಪರಮ ದಂಡಕಂ ಬೃಹತ್ಪದಾಶ್ರಯಂ ॥ ೬೪ ॥

ಚಿತ್ರದಂಡಕಂ

ಪದದೊಳ್ ವಿಶುದ್ಧ ಜಗಣೇತರಾಬ್ಧಿ ಮಾತ್ರಾಗಣೋತ್ಕರಂ
ವಿಷಮ ಧಾಮದೊಳ್ ।
ಪುದಿಯೆ ಜಗಣಮಥವಾ ನಗಣ ಲಘುಗಳೊಡನೆ ಸಮನಿಲಯದೊಳ್
ನೆಲಸೆ ಸೇಮದೊಳ್ ।
ತುದಿಗಮಳ ಗುರು ಬಟಿಕ್ಕಂ ವಿರಾಜಿಸಿರೆ ಮಧುರ ವಾಕ್ಯಭರಿತ
ಪದಬಂಧದಿಂ ।
ದುದಯಿಕುಮನಾಕುಳಂ ಚಿತ್ರದಂಡಕಂಚಾರುಚಿತ್ರಗತಿಗೊಪ್ಪುವಂದದಿಂ
॥ ೬೫ ॥

ಉತ್ಕಲಿಕಾದಂಡಕಂ

ರಸ ಪರಿಮಿತ ಲಘುವರ್ಣವಿಸರಮೊಡನಾದಿಯೊಳ್ ಬೆಸೆದೊಪ್ಪೆ ।
ಬಟಿಕೆ ಬಳಿವಿಡಿದೊಡನೆ ವರ ವಿದಿತ ಸೂತ್ರದೊಳ್ ।
ಲಸದಮಳಿನ ಸುನಿಯುಕ್ತ ಪಂಚ ಮಾತ್ರಾಗಣ ಪ್ರಸರಂ ಯಥೇಷ್ಟ ।
ಸಂಖ್ಯೆಯೊಳಂಘ್ರಿಯೆಡೆಗೆ ವೈಚಿತ್ರ್ಯದೊಳ್ ।

ಪಸರಿಸಿ ನಿಲೆ ಯುಗಣಂ ಜಕಾರ ಲಘುಯುತಗಣಂ ನುಸುಳದಿರೆ
ರುಚಿರ ಲಯಗತಿಗೊಪ್ಪುವಂದದಿಂ ಸಂತತಂ ।
ರಸವದಮಲ ವಚನೋತ್ಕರಾಕಲಿತ ಪದದಿಂದಮೆಸೆಗು ಮುತ್ಕಲಿಕಾಖ್ಯ
ದಂಡಕಂ ಪ್ರೋದ್ದಂಡ ಪದಯುತಂ ॥ ೬೬ ॥

ರಘಟಾಬಂಧಪ್ರಕರಣಂ

ಬಂಧುರ ಮಾತ್ರಗಣ ನಿ ।
ರ್ಬಂಧದೆ ರಂಜಿಸುವ ಪಾದಯುಗ್ಮಂಗಳ್ ಸಂ ।
ಬಂಧದೊಳೊಂದುತೆ ರಘಟಾ ।
ಬಂಧದೆ ಚೆಲ್ವಿಂ ಯಥೇಷ್ಟಮೆನಿಪಂತಿರ್ಕುಂ ॥
ರಗಳೆಯ ಚರಣದೆ ಮಾತ್ರಾ ।
ಸುಗಣಂಗಳ್ ತಾಳ ಗಣನೆಗೊಪ್ಪುವ ತೆಱದಿಂ ।
ಸೊಗಯಿಸಿ ನಿಲುಂ ನಿಜಪದ ।
ಯುಗಕಂತ್ಯಪ್ರಾಸಮೊಪ್ಪುಗುಂ ಸದ್ವಿಧಿಯೊಳ್ ॥

ಉತ್ಸವರಘಟಾಬಂಧಂ

ಪುರ ಕಲಾಗಣಾಳಿ ನಾಲ್ಕೆ ।
ನಿರತಮುತ್ಸವಕ್ಕೆ ನಿಲ್ಕೆ ॥

ಮಹೋತ್ಸವರಘಟಾಬಂಧಂ

ಪುರಕಲಾಗಣಾಷ್ಟಕಂ ಸದಂಘ್ರಿಯಲ್ಲಿ ಬೆರೆದುಮೂಡೆ ।
ನಿರುಪಮಂ ಮಹೋತ್ಸವಾಖ್ಯಮುದ್ಭವಿಸುವುದೆಣಿಸಿ ನೋಡೆ ॥

ಮಂದಾನಿಲರಘಟಾಬಂಧಂ

ಜಲಧಿ ಕಲಾಂಶ ಚತುಷ್ಕಂ ಪಾದದೆ ।
ನಿಲೆ ಮಂದಾನಿಲಮುದಯಿಕುಮಂದದೆ ।
ಜಗಣಮಿರಲಾಗದಸಮಕ್ಕಿದಱೊಳ್ ।
ಪುಗಲಕ್ಕುಂ ಸಮನಿಲಯಕುಚಿತದೊಳ್ ।
ಶರಧಿಕಳಾಗಣಯುಗಕೆ ವಿಶ್ರಣಂ ।
ಬರಲಕ್ಕುಂ ಪುರಶರಕಲಾಗಣಂ ॥

ತ್ರಿಕಲಪಂಚಕಲಮಿರ್ಪಡಿಯೊಳೊಂದೆ ।
ಪ್ರಕಟಮಕ್ಕುಮಿದು ಬೇಱ್ತೆ ತೆಱದಿಂದೆ ॥

ಮಹಾಮಂದಾನಿಲರಘಟಾಬಂಧಂ

ಶರನಿಧಿ ಮಾತ್ರಾಬದ್ಧಗಣಾಷ್ಟಕಮಂಘ್ರಿಯೊಳುದಯಿಸೆ ವಿಸ್ತರದಿಂದಂ ।
ಪರಿಶೋಭಿಸುಗುಂ ಸುರುಚಿರ ಲಯದೆ ಮಹಾಮಂದಾನಿಲ
ರಘಟಾಬಂಧಂ ॥

ಲಲಿತರಘಟಾಬಂಧಂ

ಲಲಿತತರ ಪಂಚಮಾತ್ರಾಗಣ ಚತುಷ್ಟಯಂ ।
ನೆಲಸೆ ಪದಕೊಪ್ಪುಗುಂ ಲಲಿತ ರಘಟಾಹ್ವಯಂ ॥

ಮಹಾಲಲಿತರಘಟಾಬಂಧಂ

ಪಂಚಮಾತ್ರಾಗಣಾಷ್ಟಕಮೈಕ್ಯದಿಂದಮಳ ತಾಳಲಯ ।
ಗಣನೆಗನುಸರಿಸಿ ಸತ್ಪಾದದೊಳ್ ।
ಚಂಚಲಿಸದುದ್ಭವಿಸೆ ಸಂಭವಿಸುಗುಂ ಮಹಾ
ಲಲಿತ ರಘಟಾಹ್ವಯಂ ಮಧುರಪದ ಬಂಧದೊಳ್ ॥

ಅಶೋಕರಘಟಾಬಂಧಂ

ನಗರ ಯುಗ ಶಿಖಿ ಗತಿ ಕಳಾಂಶಂ ।
ಬಿಗಿದೊಡಕ್ಕುಮಶೋಕಮನಿಶಂ ॥

ಮಹಾಶೋಕರಘಟಾಬಂಧಂ

ಅನಲ ಗತಿ ಪುರ ಶರಧಿ ಶಿಖಿ ಯುಗ ನಗರ ವೇದ ಕಲಾಂಶ ವೃಂದಂ ।
ಘನ ತರಾಂಘ್ರಿಯೊಳಿರೆ ಮಹಾಶೋಕಾಖ್ಯಮುದಯಿಪುದಂದದಿಂದಂ ॥

ಷಷ್ಠಾಧ್ಯಾಯಂ

ಕರ್ಣಾಟಕ ವಿಷಯಜಾತಿ ಪ್ರಕರಣಂ

ಕರ್ಣಾನಂದಮನೊದವಿಪ ।
ಕರ್ಣಾಟಕ ವಿಷಯ ಜಾತಿಬಂಧದ ಬಗೆಯಂ ।
ನಿರ್ಣಯದಿಂದಱಿವಂತಭಿ ।
ವರ್ಣಿಸುವೆಂ ಲಕ್ಷ್ಯಪದ್ಯದಿಂ ಲಕ್ಷಣಮಂ ॥ ೧ ॥

ತ್ರಿಪದಿ

ಚಿತ್ರ ತ್ರಿಪದಿ

ಕರ ನೇತ್ರ ಸಾಗರ ।
ಪುರಗಣದಂಘ್ರಿಯೊಳ್ ।
ಬರೆ ಷಷ್ಠ ದಶಮಕಜನನ್ಯ - ಸ್ಥಾನದೆ ।
ಹರಿಯಿರೆ ಚಿತ್ರ - ತ್ರಿಪದಿಕೆ ॥ ೨ ॥
ನುತ ಚಿತ್ರ ತ್ರಿಪದಿಯು ।
ಯತಿ ರುದ್ರ ನಿಲಯದೆ ।
ಸತತಂ ಲಘ್ವಾದಿ ಹರಿಗಣಂ ನೆಲಸಿರ್ಕುಂ ।
ಯತಿ ತಪ್ಪದಿವಱ - ಕೊನೆಗಿರ್ಕುಂ ॥ ೩ ॥

ವಿಚಿತ್ರತ್ರಿಪದಿ

ಸದಮಳ ಗುರ್ವಾದಿ ।
ಮದನಮರ್ದನಗಣಂ ।
ತುದಿಗೀಶ ಧಾಮಕಿರೆ ಚಿತ್ರದಂದದೆ ।
ಪದವೊಪ್ಪಿದೊಡೆ ವಿಚಿತ್ರಮಕ್ಕುಂ ॥ ೪ ॥

ಏಳೆ

ಕರ ಪಕ್ಷ ಪುರಗಣಂ ।
ಬರೆ ವಿಧಿ ರಸಕೊಪ್ಪೆ ।
ಹರಿಯುನ್ಯ ಸದನಕಿರೆ ಯೇಳೆ ॥ ೫ ॥

ಪಿರಿಯಕ್ಕರಂ

ವನಜ ಭವಗಣನೊಂದು ಪಾದಾದಿಗೆ ವನಮಾಲಿ ಗಣವೈದು ತದನಂತರಂ ।
ಮನಸಿಜಾಂತಕ ಗಣವೊಂದು ಕೊನೆಗೆ ಸಂಜನಿಯಿಸೆ ರಂಜಿಕುಂ
ಪಿರಿಯಕ್ಕರಂ ।
ವಿನುತ ವಿಧಿಗಣಂ ಭುಜಧಾಮಕಥವಾ ವನನಿಧಿ ಸ್ಥಾನಕೆ ಸೇರಲಕ್ಕುಂ ।
ದನುಜಾರಿ ಗಣವಾದಿಗೊಡನೆ ವಿಕಲ್ಪದೆ ಘನತರ ಚರಣಕೆ ನೆಲಸಲಕ್ಕುಂ
॥ ೬ ॥

ದೊರೆಯಕ್ಕರಂ

ಸರಸಿಜೇಕ್ಷಣ ಗಣಯುಗ್ಮಂ ಶರಜ ಸಂಭವ ಗಣಮೊಂದು ।
ಮುರವಿಮರ್ದನ ಗಣದ್ವಂದ್ವಂ ಪರಮೇಷ್ಠಿ ಗಣಮೊಂದು ಬಂದು ।
ಚರಣದೊಳೊಡಗೂಡಿ ನೆರೆಯೆ ದೊರೆಯಾಗಿ ಮೃದುಲಯಮೊಂದೆ ।
ದೊರೆಯಕ್ಕರಂ ಕರಮೆಸೆಗುಂ ದೊರೆವೆತ್ತ ನಲ್ವೆಸಱಿಂದೆ ॥ ೭ ॥

ನಡುವಣಕ್ಕರಂ

ಸಲಿಲಜಾಸನ ಗಣಮೊಂದು ನಿಜ ಪಾದಾದಿಯೊಳೆಸೆಯೆ ।
ಜಲಜ ನೇತ್ರಗಣತ್ರಯಂ ನಡುವಿನೊಳ್ ನಿಂದೊಸೆಯೆ ।
ಚಲಿಸದೀಶ್ವರ ಗಣಮೊಂದು ತುದಿಯೊಳೊಂದಿರೆ ಕುಂದದೆ ।
ಲಲಿತ ತರಮಪ್ಪ ನಡುವಣಕ್ಕರಮೆಸೆಗುಂ ಛಂದದೆ ॥ ೮ ॥

ಎಡೆಯಕ್ಕರಂ

ವಾರಿಜೋದ್ಭವ ಗಣಮೊಂದಾದಿಗೆ ಮೆಱೆಯೆ ।
ಸಾರಸಾಂಬಕ ಗಣಯುಗಂ ನೆಱೆ ನೆರೆಯೆ ।
ಮಾರಹರ ಗಣಮೊಂದಂತ್ಯಕೆಸೆಯೆ ಕರಂ ।
ಚಾರುಪದದಿಂದಮೊಪ್ಪುಗುಮೆಡೆಯಕ್ಕರಂ ॥ ೯ ॥

ಕಿಱಿಯಕ್ಕರಂ

ಜಡಜಾಕ್ಷ ಗಣಯುಗಮೊಡನೊಪ್ಪಿರೆ ।
ಮೃಡಗಣಮೊಂದು ಮತ್ತೊಡನೆ ಬರೆ ।
ಬಿಡದಿಂತು ಪದಕೊಂದೆ ಗಣನಿಕರಂ ।
ಕಡುಚೆಲ್ವಿಂದೆಸೆವುದು ಕಿಱಿಯಕ್ಕರಂ ॥ ೧೦ ॥

ಷಟ್ಪದಿ

ಮುರರಿಪು ಗಣಯುಗಂ ।
ನರಕಾರಿ ಗಣಯುಗ್ಮಂ ।
ಹರಿಗಣದ್ವಯ ರುದ್ರಗಣಮೊಡನೆ ॥
ಬೆರೆದುಭಯಾರ್ಥದ ।
ಚರಣ ತ್ರಯಂಗಳೊಳ್ ।
ನೆರೆದಿರೆ ಪರಿರಂಜಿಪುದು ಷಟ್ಪದಿ ॥ ೧೧ ॥

ಚೌಪದಿ

ಮುರಹರ ಗಣವೊಂದಿರೆ ।
ಪರಗಣವೊಂದೈತರೆ ।
ಬೆರೆದು ರಂಜಿಪ ಪಾದದಿಂ ।
ಪರಿಶೋಭಿಪುದು ಚೌಪದಿ ॥ ೧೨ ॥

ಛಂದೋವತಂಸಂ

ಇಂದಿರಾಧವಗಣಮಿರೆ ಮೊದಲೊಳೊಂದು ।
ಮುಂದಜ ಗಣಚತುಷ್ಕಮೊಡನೆ ನಿಂದು ।
ಕುಂದದೆ ಪದದೊಳೊಂದೆ ಚಾರುಛಂದಂ ।
ಛಂದೋವತಂಸಮೆಸೆಗುಂ ಚೆಲ್ವಿನಿಂದಂ ॥ ೧೩ ॥

ಗೀತಿಕೆ

ಪುರಗಣಂ ವಿಷಮಪದಕೊಗೆಯೆ ।
ಶರಧಿಗಣಂ ಸಮಪಾದಕ್ಕಿರೆ ತನ್ನುಭಯಾರ್ಧದೆ ।
ಕರರಸದೊಳ್ ಬ್ರಹ್ಮನುಳಿದೆಡೆಯೊಳ್ ।
ಹರನಥವಾ ಹರಿಯಿರೆ ರಂಜಿಪ್ಪುದು ಗೀತಿಕೆ ॥ ೧೪ ॥

ಸಮಗೀತಿಕೆ

ಪ್ರತಿಪದದೊಳ್ ಗಣಚತುಷ್ಕಂ ಕುಂದದಾವರಿಸೆ ।
ಚತುರಾನನ ಗಣವೊಂದುಮೆತ್ತಾನುಮವತರಿಸೆ ।
ದಿತಿಜಾರಿಯಥವಾ ಮೃಡಗಣಮುಟಾದ ತಾಣಕೆ ।
ಹಿತದೊಳೊಂದಿರೆ ಸಂಭವಿಕ್ಕುಂ ಸಮಗೀತಿಕೆ ॥ ೧೫ ॥

ವಿಷಮಗೀತಿಕೆ

ವಿಮಳಿನ ಗೀತಿಕೆಯೋಜ ಚರಣದ ।
ಕ್ರಮದೊಳೊಂದಂಘ್ರಿಯೆತ್ತಾನುಂ ನೆಲೆಗೊಂಡಿರೆ ।
ಸಮಪಾದದಂತನ್ಯ ಚರಣಂಗಳ್ ।
ಸಮನಿಸೆ ಸಂಜನಿಕುಂ ವಿಷಮಗೀತಿಕೆ ॥ ೧೬ ॥

ಅಕ್ಕರಿಕೆ

ಹರಿ ವಿಧಿ ಲಕ್ಷ್ಮೀವರ ಚತುರಾಸ್ಯ ಸ್ಮರಪಿತ ರುದ್ರಗಣಂ ।
ನೆರೆದಿರೆ ಚೆಲ್ವಿಂ ಕರಿ ವಸು ಮಾತ್ರೋತ್ತರಕಿರೆ ವಿಶ್ರಮಣಂ ।
ಶರನಿಧಿ ಮಾತ್ರಾಧರ ಗಣಷಟ್ಕಂ ಗುರುವುದಯಿಪ ತೆಱದಿಂ ।
ಸುರುಚಿರ ಪದವೊಪ್ಪಿರೆ ಸೊಗಯಿಕುಮಕ್ಕರಿಕೆ ಯುಸಾಕುಳದಿಂ ॥ ೧೭ ॥

ಮದನವತಿ

ಶರಮಿತ ಗತಿಲಘು ಗಣತತಿ ಗುರುವಿರೆ ಮೊದಲಡಿಯೊಳ್ ।
ಸ್ಮರಪಿತ ಸುಗಣಚತುಷ್ಕಂ ಪದ್ಮಜಗಣಮಡಿಯೊಳ್ ।
ಪರಪದಕೊಂದಿರೆ ನಿಯತಂ ದ್ವಾವಿಂಶತಿ ಕಲೆಗಳ್ ।
ಚರಣಕೆ ನೆರೆಯೆ ಮದನವತಿಯೊಗೆಗುಂ ಸಲ್ಲಯದೊಳ್ ॥ ೧೮ ॥

ಗೀತಿಪ್ರಕರಣಂ

ಸೊಬಗಿನ ಸೋನೆ

ಕಮಲಾಕ್ಷ ಗಣಚತುಷ್ಟಯಮಸಮಾಂಘ್ರಿಗೆ ।
ಸಮನಿಸೆ ಹರಿಗಣತ್ರಯಮೆಂದುಂ ॥
ಸಮಪದಕೊಪ್ಪಿರೆ ಸಂಭವಿಪುದು ಕರಂ ।
ಸುಮಧುರೋಕ್ತಿಯು ಸೊಬಗಿನಸೋನೆ ॥ ೧೯ ॥

ಸಾಂಗತ್ಯಂ

ಅಸಮಪಾದದೆ ವಿಷ್ಣುಗಣ ಚತುಷ್ಟಯಮೊಡ ।
ನೆಸೆದಿರೆ ಪರ ಸಮಪದದೆ ॥
ಅಸುರಾರಿ ಗಣಯುಗಂ ಬಿಸರುಹೋದ್ಭವಗಣಂ ।
ಬೆಸೆದಿರೆ ಸಾಂಗತ್ಯಮಕ್ಕುಂ ॥ ೨೦ ॥

ಮೋಹನ ಗೀತಿ

ಓಜಪಾದದೆ ನಾಲ್ಕು ದನುಜಮರ್ದನಗಣ ॥
ಮೋಜೆಯೊಳೊಡನೊಂದಿ ನಿಲೆ ಯುಗ್ಮ ಪದದೆ ।
ರಾಜೀವಾಂಬಕ ಗಣತ್ರಯಮಬ್ಜಭವಗಣಂ ।
ರಾಜಿಸೆ ಮೋಹನಗೀತಿ ರಂಜಿಪುದು ॥ ೨೧ ॥

ಶೋಭನಗೀತಿ

ಜಲಜಾಕ್ಷ ಗಣಚತುಷ್ಟಯಮೋಜ ಚರಣದೆ ।
ನೆಲೆಗೊಂಡು ನಿಂದಿರೆ ಸಮಪಾದದೆ ॥
ಬಲಿವಿಭಂಜನ ಗಣದ್ವಯಮೀಶಗಣಮೊಂದು ।
ನೆಲಸಿರೆ ಶೋಭನ ಗೀತಿಯಕ್ಕುಂ ॥ ೨೨ ॥

ರುಚಿರಗೀತಿ

ವಾರಿಜಲೋಚನ ಗಣಚತುಷ್ಟಯಮೊಂದುಂ ।
ಸೇರಿರೆ ವಿಷಮಾಂಘ್ರಿಗೆ ।
ಮಾರಜನಕ ಕಾಮರಿಪುಗಣಂ ಸಮಕೊಪ್ಪೆ ।
ರಾರಾಜಿಪುದು ರುಚಿರಂ ॥ ೨೩ ॥

ಆಂದೋಲಿಕಾಗೀತಿ

ರತಿಪತಿ ಪಿತಗಣ ತ್ರಯಮೊಂದುಗೂಡೆ ।
ಚತುರಾಸ್ಯ ಗಣಮೊಂದು ತುದಿಗೊಂದಿ ಮೂಡೆ ।
ಚತುರಂಘ್ರಿಯಿಂದೊಪ್ಪುವುದು ಸುಪ್ರಸಿದ್ಧಂ ।
ಶ್ರುತಿಹಿತಮಾಂದೋಲಾ ಗೀತಿತಾಸಿದ್ಧಂ ॥ ೨೪ ॥

ಮಂಜುಳಗೀತಿ

ದನುಜವಿರೋಧಿ ಬ್ರಹ್ಮ ಮುರಾರಿ ।
ವನರುಹಪೀಠ ಗಣಮಿಂತು ಸೇರಿ ।
ಘನಪಾದಕೊಪ್ಪೆ ಮಂಜುಳ ಲಯದೆ ।
ಜನಿಯಿಪುದೆಂದುಂ ಮಂಜುಳಾಹ್ವಯದೆ ॥ ೨೫ ॥

ಭದ್ರಾಗೀತಿ

ಸರಸಿಜಾಸನ ದೈತ್ಯವಿರೋಧಿ ।
ನರಕಮರ್ದನ ವಿಧಿಗಣಮೊಂದಿ ।
ಬೆರೆಯೆ ಕಣ್ಗೊಳಿಪುದು ಚೆಲ್ವಿನಿಂದಂ ।
ಪರಮ ಪದಭದ್ರಂ ಭದ್ರಾಖ್ಯ ಛಂದಂ ॥ ೨೬ ॥

ರಮ್ಯಾಗೀತಿ

ಮುರಹರ ಗಣಯುಗಂ ನಿಂದು ।
ಪರಮೇಷ್ಠಿ ಗಣವೊಂದು ಬಂದು ।
ಚರಣದೊಳಿರೆ ನಿಸ್ಸಂಶಯದೆ ।
ಪರಿಶೋಭಿಪುದು ರಮ್ಯಾಹ್ವಯದೆ ॥ ೨೭ ॥

ಮಂಗಳಗೀತಿ

ಅಂಗಜಪಿತ ಸಂಜ್ಞಾ ಸುಗಣ ಚತುಷ್ಟಯಂ ।
ತುಂಗ ಪಾದದೆ ಸೇರೆ ವರ ಸಮಗತಿಲಯಂ ।
ಭಂಗವಿಲ್ಲದೆ ತೋಱೆ ಸೊಗಯಿಕುಂ ನಿರ್ಣಯಂ ।
ಮಂಗಳ ಗೀತಿ ಮಂಗಳ ಸತ್ಪದಾಶ್ರಯಂ ॥ ೨೮ ॥

ಮಧುರಗೀತಿ

ವಿಧಿಗಣಾಳಿ ನಾಲ್ಕೀ ವಿಧದೆ ।
ವಿಧಿಯ ತಪ್ಪದೆಸೆಯೆ ಪದದೆ ।
ಮಧುರ ವಾಕ್ಯ ಸನ್ನಿಹಿತದೆ ।
ಮಧುರ ಗೀತಿಯೆಸೆಗುಂ ಹಿತದೆ ॥ ೨೯ ॥

ರಾಸಗೀತಿ

ಬಿಸಜ ಜಾತ ಗಣಸಮೂಹ ।
ಮುಸಮ ಪದಕೆ ನಾಲ್ಕುಂ ।
ಎಸೆವ ಸಮಪದಕ್ಕೆ ಮೂಱುಂ ।
ಬೆಸೆಯೆ ರಾಸಮಕ್ಕುಂ ॥ ೩೦ ॥

ಉಜ್ವಲಗೀತಿ - ದ್ವಿಪದಿ

ಜಲನಿಧಿ ಪರಿಮಿತ ಬಲಿಭೇದಿ ಗಣಚಯಂ ।
ನೆಲಸೆ ಸಂಜನಿಕುಮುಜ್ವಲಗೀತಿ ನಿಶ್ಚಯಂ ॥ ೩೧ ॥

ಮನೋಹರಗೀತಿ - ದ್ವಿಪದಿ

ಹರಿಗಣ ತ್ರಯಮಾಣೀ ವರಗಣವೊಗೆಯೆ ।
ಪರಿರಂಜಿಪುದು ಮನೋಹರ ಗೀತಿಬಗೆಯೆ ॥ ೩೨ ॥

ಆಂಧ್ರವಿಷಯ ಜಾತಿ ಪ್ರಕರಣಂ

ಸುಂದರ ತರಾಂಧ್ರ ಭಾಷಾ ।
ಛಂದೋರೀತಿಗನುಸರಿಸಿ ಕರ್ಣಾಟಕದೊಳ್ ।
ಕುಂದದೆ ಮಾಡುವ ಗೀತಿಗ ।
ಳಂದವ ವರಲಕ್ಷ್ಯ ಪದ್ಯದೊಳ್ ಬಣ್ಣಿಸುವೆಂ ॥ ೩೩ ॥
ಶ್ರುತಿಮಾಶಾಸ್ರಸಮ್ಮಿಶ್ರಿತ ।
ಚತುರಾನನ ಗಣವ ರಸಕಲಾನ್ವಿತ ದಿತಿಜಾ ॥
ಹಿತಗಣವ ವಸುಕಲಾಶ್ರಿತ ।
ರತಿಪತಿ ರಿಪುಗಣವ ಬರೆವುದನುಚಿತಮಿವಱೊಳ್ ॥ ೩೪ ॥

ವಿಷಮಗೀತಿ ಪ್ರಭೇದಂ

ಎತ್ತುಗೀತಿ

ಮಧುರಿಪು ಗಣದ ಮುಂದೆ ।
ವಿಧಿಗಣ ಯುಗ್ಮವೊಂದೆ ।
ವಿಧಿಯಂತೆ ಮಾಡುವುದತಿ ।
ಮಧುರೋಕ್ತಿಯೆತ್ತುಗೀತಿ ॥ ೩೫ ॥

ಪ್ರಗೀತಿ

ಅಸಮ ಪದದೊಳೆಂದು - ಮಜಗಣ ತ್ರಯದೊತ್ತಿ ।
ಗಸುರವೈರಿ ಗಣಯು - ಗಂಗಳೊಗೆದು ॥
ಬೆಸೆಯೆ ಯುಗ್ಮ ಪದದೆ - ಬಿಸಜಜಗಣವೈದು ।
ಎಸೆಯೆ ತಾಂ ಪ್ರಗೀತಿ - ಯೆಂದೆನಿಪುದು ॥ ೩೬ ॥

ಮೇಲನಗೀತಿ

ಶರಜ ಭವಗಣಂಗಳೇೞು - ಚರಣದಲ್ಲಿ ಪರೆದು ।
ನಿರತಮುಚಿತರೀತಿಯಿಂದೆ - ನೆರೆಯೆ ಕೂಡಿ ಬೆರೆದು ।
ವರ ಚತುರ್ಥ ಗಣಕೆ ತುದಿಗೆ - ಬರೆ ವಿರಾಮಮೊಸೆದು ।
ಪರಮ ಮೇಲನಾಖ್ಯ ಗೀತಿ - ಭರದೊಳುದಯಿಸುವುದು ॥ ೩೭ ॥

ಸಮಗೀತಿ ಪ್ರಭೇದಂ

ತೇಟಗೀತಿ

ಜಲಜ ಸಂಭವ ಹರಿ ದನು - ಜಾತ ವೈರಿ ।
ಸಲಿಲಜಾಸನ ವಿಧಿಗಣಂ - ಸಮದೆ ಸೇರಿ ।
ನೆಲಸೆ ಸಂಜನಿಯುಸುವುದು ನೇಮಮೊಂದೆ ।
ಲಲಿತ ತರತೇಟ ಗೀತಿ ವಿ - ಲಾಸದಿಂದೆ ॥ ೩೮ ॥

ಆಟವೆಲದಿ

ಅಜಗಣತ್ರಯಂಗ - ಳಚ್ಯುತ ಗಣಯುಗ - ಮಬ್ಜಭವ ಗಣಂಗಳೈದು ಪೊರ್ದಿ ।
ನಿಜಪದಕ್ಕೆ ನೆರೆಯೆ ನಿಜದೊಳೀ ತೆಱದೆ ಮುಂ - ದರ್ಧ ಮೆಸೆಯೆ ಮೆಱೆವುದಾಟವೆಲದಿ ॥ ೩೯ ॥

ತರುಪೋಜಬಂಧಂ

ಮುರವಿಭಂಜನಗಣಂ ಮೂಱಾದಿಗೆಸೆಯೆ - ಶರಜಜ ಗಣವೊಂದು ಸನಿಹದೆ ಬೆಸೆಯೆ ॥
ನರಕಮರ್ದನಗಣಂ ಮತ್ತೆ ಮೂಱೊಗೆಯೆ - ಪರಮೇಷ್ಠಿ ಗಣವೊಂದು ಪರಕೊಂದಿ ಬಿಗಿಯೆ ॥
ಚರಣದೊಳುಚಿತ ವಿಶ್ರಮವೊಳ್ಪಿನಿಂದೆ - ವರಪದಮಧ್ಯಕೆ ಬಲಿಕಂತ್ಯಕೊಂದೆ ॥
ತರುಪೋಜ ಬಂಧಮುತ್ತಮಮಚೋಲಯದೆ - ಪರಿಶೋಭಿಪುದು ಕರಂ ಬಗೆಯೆ ನಿಶ್ಚಯದೆ ॥ ೪೦ ॥

ಸಮಸೀಸಂ

ಸರಸಿಜ ಲೋಚನ ಸ್ಮರಪಿತ ಮಾಧವ - ನರಸಿಂಹ ಕೇಶವ ನರಕವೈರಿ ।
ಪರಮೇಷ್ಠಿ ವಿಧಿಗಣಂ ಪರಿಪಡಿಯಿಂ ದೀರ್ಘ - ಪರಮ ಸತ್ಪಾದದೆ ಪರೆದು ಸೇರಿ ।
ಕರವೊಪ್ಪೆ ಪ್ರಾಸದಕ್ಷರಮಥವಾ ವಡಿ - ಮೆಱೆವೋಜ ಗಣದಲ್ಲಿ ನೆರೆದು ಮೂಡೆ ।

ವಿರತಿ ಮಧ್ಯಾಂತ್ಯಕವಿರತಮಂಘ್ರಿಯೊಳೊಂದೆ - ವರ ಚತುಶ್ಚರಣ
ಮಾವರಿಸಿ ಕೂಡೆ ॥
ಭರದೊಳುರುತೇಟ ಗೀತಿ ತತ್ಪರಕೆ ಹಿತದೆ ।
ಬೆರೆದು ಸೇರೆ ತಪ್ಪಡಥವಾ ಪೆಱತುಚಿತದೆ ।
ನಿರತವೊಡನಾಟ ವೆಲದಿ ತಾನಿರೆಸುವಿಧದೆ ।
ಸರಸ ಸಮಸೀಸಮೆಸೆವುದು ಸರಳ ಪದದೆ ॥ ೪೧ ॥

ವಿಷಮಸೀಸಂ

ವಿದಿತ ಪುರ ಕಲಾನಿಬದ್ಧ - ವಿಧಿಗಣಾಳಿ ಸಪ್ತಕಂ ।
ಪದನೊಳೊಂದೆ ಸುಗುರು ಸೇರೆ - ಪದದೆ ವಿರತಿ ಸಂಜ್ಞಕಂ ।
ಪುದಿದು ಭಾನುಮಾತ್ರೆಯಡೆಗೆ - ಪುದುಗಿ ತೋಱೆ ನುಣ್ಪಿನಿಂ ।
ಮೃದು ಚತುಷ್ಪದಂಗಳೊಂದಿ - ಮೊದಲೊಳೊಪ್ಪೆ ಗುಣ್ಪಿನಿಂ ।
ತುದಿಯೊಳಾಟವೆಲದಿ ತೋಱೆ ಕುಂದದಥವಾ ।
ಪದೆದು ತೇಟಗೀತಿ ಪರದೊಳೊಂದೆ ।
ಸದಭಿರಮ್ಯತರ ವಿಷಮ ಸೀಸ ನಾಮಕ ।
ಮುದಯಿಸುವುದು ಸಿದ್ಧವೊಳ್ಪಿನಿಂದೆ ॥ ೪೨ ॥

ಸಪ್ತಮಾಧ್ಯಾಯಂ

ಅಕಳಂಕೋಜ್ವಳ ಕರ್ಣಾ ।
ಟಕಭಾಷೆಯೊಳೊಗೆವ ಸತ್ಕಳಾಶ್ರಿತ ಪದ್ಯ ।
ಪ್ರಕರದ ವರ ಲಕ್ಷಣಮಂ ।
ಪ್ರಕಟದೊಳಱವಂತೆ ಲಕ್ಷ್ಯ ರೂಪದೆ ಪೇೞ್ವೆಂ । ॥ ೧ ॥
ಪರಿಶುದ್ಧ ತಾಳ ಲಯದಿಂ ।
ಪರಿಶೋಭಿಪ ಗೀತಕೆಸೆವ ಮಾತ್ರಾಗಣದೊಳ್ ।
ಪರಿಕಿಸೆ ಲಘುವಾದಿಗೆ ಗುರು ।
ಪರಕ್ಕೆ ನಿಲ್ವ ಗಣವೊಗೆಯಲಾಗದು ಸಿದ್ಧಂ ॥ ೨ ॥

ಷಟ್ಪದೀಪ್ರಕರಣಂ

ನುತ ಷಟ್ಪದಿಯೊಳ್ ಪ್ರಥಮ ।
ದ್ವಿತೀಯಕ ಚತುರ್ಥ ಪಂಚಮಾಂಘ್ರಿ ಪ್ರಚಯಂ ।
ಸತತಂ ಸರಿಯಾಗಿರ್ಕುಂ ।
ತೃತೀಯ ಷಷ್ಠಾಂಘ್ರಿಗಳ್ ಸವಣ್ಬೊಳಿರ್ಕುಂ ॥ ೩ ॥
ಸುರುಚಿರ ತರ ಷಟ್ಪದಿಯೊಳ್ ।
ಕರಮೆಸೆವ ತೃತೀಯ ಷಷ್ಠ ಚರಣದ ತುದಿಯೊಳ್ ।
ವಿರಮಣವಿರ್ಕುಂ ಲಘ್ವ ।
ಕ್ಷರಮಿವ ಜಂತ್ಯಕ್ಕೆ ನಿಂದೊಡಂ ಗುರುವೆನಿಕುಂ ॥ ೪ ॥

ಶರಷಟ್ಪದಿ

ನಿಗಮ ಕಲಾಗಣ ।
ಯುಗದ ಪದಮೆರಡು ॥
ಯುಗ ಮಾತ್ರಾಂಶ ತ್ರಯ ಗುರುವಿಂ ।
ಸೊಗಯಿಪ ಪದಮೊಂ ।
ದೊಗೆಯೆ ನಿಜಾರ್ಧದೆ ।
ಬಗೆಗೊಳ್ಗುಂ ಶರ ಷಟ್ಪದಿಕೆ ॥ ೫ ॥

ಕುಸುಮಷಟ್ಪದಿ

ಶರಕಲಾ ಗಣಯುಗದ ।
ಚರಣಮೆರಡುಂ ಮತ್ತೆ ।
ಶರಕಲಾಂಶತ್ರಿತಯ ಗುರುವರ್ಣದ ॥
ವರದೀರ್ಘ ಪದವೊಂದು ।
ಮೆಱೆಕದೆ ನಿಜಾರ್ಧದೊಳ್ ।
ಬರೆ ಕರಂ ಕುಸುಮಷಟ್ಪದಿಯೆನಿಪುದು ॥ ೬ ॥

ಭೋಗಷಟ್ಪದಿ

ಪುರ ಕಲಾಸುಗಣ ಚತುಷ್ಕ ।
ದುರುತರಾಂಘ್ರಿಯೆರಡುಮೊಡನೆ ।

ಪುರ ಕಲಾಂಶ ಷಟ್ಕ ಗುರುವನಾಂತ ಪಾದಮುಂ ॥
ಪರ ನಿಜಾರ್ಧ ಭಾಗದಲ್ಲಿ ।
ನೆರೆಯೆ ಚರಣಮಾಜಿರಿಂದೆ ।
ಬೆರೆದು ಸಂಭವಿಪುದು ಚೆಲ್ವ ಭೋಗ ಷಟ್ಪದಿ ॥ ೭ ॥

ಭಾಮಿನೀಷಟ್ಪದಿ

ನಗರ ಯುಗ ಶಿಖಿ ಪಾರ್ಧಿ ಮಾತ್ರಾ ।
ಸುಗಣದಿಂದೆಸೆವಂಘ್ರಿಯೆರಡುಂ ।
ನಗರ ಗತಿ ಶಿಖಿ ಯುಗ ಪುರಾಬ್ಧಿ ಕಲಾಂಶ ಗುರುವಿಂದೆ ॥
ಬಿಗಿದೆಸೆವ ಪದವೊಂದು ಮೆಜಿಕದೊ ।
ಳಗಲದೊಡನುಭಯಾರ್ಧಕೊಂದಿರೆ ।
ಸೊಗಯಿಪುದು ಚೆಲ್ವಿಂದೆ ಭಾಮಿನಿ ಪೆಸರಿ ಷಟ್ಪದಿಕೆ ॥ ೮ ॥

ಪರಿವರ್ಧಿನೀಷಟ್ಪದಿ—

ಶರಧಿ ಕಲಾಂಶ ಚತುಷ್ಕಮನೊಂದಿದ ।
ಚರಣಂಗಳೆರಡುಮಾಗಮ ಮಾತ್ರಾ ।
ಧರಗಣಷಟ್ಕ ಪ್ರೋಜ್ಜ್ವಲ ಗುರುವಿಂದೊಪ್ಪುವ ಪದವೊಂದುಂ ।
ನಿರತಂ ತನ್ನುಭಯಾರ್ಧದೊಳುದಯಿಸೆ ।
ಪರಮೋಜ್ವಲ ಪದ ಷಟ್ಕವ ತಾಳುತೆ ।
ಪರಿವರ್ಧಿನಿಯೆನಿಸುವ ಪರಿನಿರ್ಮಲ ಷಟ್ಪದಿಯುದಯಿಪುದು ॥ ೯ ॥

ವಾರ್ಧಿಕಷಟ್ಪದಿ

ವಿಮಲತರ ಬಾಣ ಮಾತ್ರಾಗಣ ಚತುಷ್ಟಯುವ ।
ಸಮನಾಗಿ ತಳೆದಿರ್ಪ ಪದಮೆರಡುಮವಜಿಂದೆ ।
ಸಮನಂತರಂ ಭೂತ ಮಾತ್ರಾಂಶ ಷಟ್ಕ ಗುರುವಂ ತಾಳ್ದ ಪಾದವೊಂದುಂ।
ಕ್ರಮದಿಂದೆ ತನ್ನಯುಭಯಾರ್ಧದೊಳ್ ನೆಜಿನೆರೆಯೆ ।
ಸಮುದಿತ ವಿಶಾಲಾಂಘ್ರಿ ಷಟ್ಕಮಂ ಸಲೆತಳೆದು ।
ಸಮನಿಕುಂ ತಾಳಲಯ ಬದ್ಧ ವಾಕ್ಯಾಶ್ರಯಂ ವಾರ್ಧಿಕಾ
ಹ್ವಯ ಷಟ್ಪದಿ ॥ ೧೦ ॥

ಉದ್ದಂಡಷಟ್ಪದಿ

ಕರ ಸಾಗರ ಯುಗ ಭುಜ ವೇದಾಂಬುಧಿ ಮಾತ್ರಾ ।
ಧರಗಣದಿಂದೆಸೆವಂಘ್ರಿಗಳೆರಡುಂ ಭುಜಯುಗ ।
ಶರನಿಧಿ ಪಕ್ಷ ಶ್ರುತಿ ಗತಿ ಕರ ನಿಗಮಾಗಮ ಮಾತ್ರಾ ಗಣ ಗುರುವಿಂದಂ ।
ಕರಮೊಪ್ಪುವ ಪದಮೊಂದುಂ ತನ್ನುಭಯಾರ್ಧದೊ ।
ಳಿರೆ ತಾನುದ್ದಂಡ ಸುಪದ ಷಟ್ಕಮನೊಂದುತೆ ।
ಪರಿರಂಜಿಕುಮುದ್ದಂಡಾಹ್ವಯ ಷಟ್ಪದಿ ನಿರುಪಮ

ಮೃದುಲಯುಗತಿಯಿಂದೆ ॥ ೧೧ ॥

ಗಣಸಮಚತುಷ್ಪದೀಪ್ರಕರಣಂ

ಚಿತ್ರತರ ತಾಳ ಗಣನಾ ।
ಸೂತ್ರದೆ ಸಮಪದ ಚತುಷ್ಪದಿಕೆಯಂಘ್ರಿಗಳೊಳ್ ।
ಶ್ರೋತ್ರ ಹಿತಮಪ್ಪ ತೆಱದಿಂ ।
ಮಾತ್ರಾಗಣತತಿ ಸಮಾನ ಸಂಖ್ಯೆಯೊಳೆಸೆಗುಂ ॥ ೧೨ ॥
ವಿತತ ಸಮಚತುಷ್ಪದಿಯೊಳ್ ।
ಯತಿ ಸೂಚಿತ ಮಾತ್ರೆಗಂ ಪದಾಂತ್ಯಕಮಿರ್ಕುಂ ।
ನುತ ಚರಣಾಂತ್ಯ ಪ್ರಾಸಂ ।
ಹಿತಕರಮೆನಿಪಂತೆ ರಂಜಿಕುಂ ಬಹುಳತೆಯಿಂ ॥ ೧೩ ॥

ವಿದಗ್ಧಕ ಚತುಷ್ಪದಿ – ೨ ತ್ರಿಗೆ

ಪುರ ಕಲಾಗಣಂ ।
ಪುರ ಕಲಾಗಣಂ ।
ಗುರು ವಿಲಂಬಕಂ ।
ಬರೆ ವಿದಗ್ಧಕಂ ॥ ೧೪ ॥

ಪ್ರಗುಣಚತುಷ್ಪದಿ – ೨ಚ

ನಿಗಮ ಕಲಾಂಶಂ ।
ಯುಗ ಮಾತ್ರಾಂಶಂ ।
ಬಿಗಿದಿರೆ ಹೃದ್ಯಂ ।
ಪ್ರಗುಣ ಸುಪದ್ಯಂ ॥ ೧೫ ॥

ವಿಮಲಚತುಷ್ಪದಿ - ಪ. ದ್ವಿ. ಗ.

ಶರಕಲಾ ಸುಗಣಂ ।
ಕರಕಲಾ ಸುಗಣಂ ।
ಗುರುವೆಸೆಯೆ ವಿಮಲಂ ।
ಮೆಱೆದಪುದು ವಿಮಲಂ ॥ ೧೬ ॥

ಚಿತ್ರಚತುಷ್ಪದಿ - ತ್ರಿ.ಚ.ಗ.

ನಗರ ಮಾತ್ರಾಂಶಂ ।
ನಿಗಮ ಮಾತ್ರಾಂಶಂ ।
ಸುಗುರುವಿರೆ ಚಿತ್ರಂ ।
ಸೊಗಯಿಕುಂ ಚಿತ್ರಂ ॥ ೧೭ ॥

ಸುರುಚಿರಚತುಷ್ಪದಿ - ೨ಚ ಗ.

ಶರಧಿಕಲಾಂಶಯುಗಂ ।
ಗುರು ಸಲೆ ಸಂಯೋಗಂ ।
ಬೆರೆವಕ್ಕುಂ ಸುಕರಂ ।
ಸುರುಚಿರಮತಿರುಚಿರಂ ॥ ೧೮ ॥

ಚಾರುಗತಿಚತುಷ್ಪದಿ - ೨ಪ

ಶರಕಲಾಗಣಯುಗಂ ।
ಚರಣದೆಡೆಗಾವಗಂ ।
ಬರೆ ರಂಜಿಪುದು ಗೀತಿ ।
ನಿರುಪಮಂ ಚಾರುಗತಿ ॥ ೧೯ ॥

ತ್ವರಿತಲಯಚತುಷ್ಪದಿ - ೩ತ್ರಿ.ಗ.

ಪುರಕಳಾಗಣತ್ರಯಂ ।
ಗುರು ಸುಪದದೊಳಾಶ್ರಯಂ ।
ನೆರೆದೊಡಕ್ಕುಮವ್ಯಯಂ ।
ತ್ವರಿತಲಯ ಸಮಾಹ್ವಯಂ ॥ ೨೦ ॥

ಜಯೋತ್ಸವಚತುಷ್ಪದಿ - ೪ತ್ರಿ

ಸರಳಪದದೆ ಶರಧಿಮಿತದೆ ।
ಪುರಕಲಾಂಶವೊಂದಿ ಹಿತದೆ ।
ನೆರೆಯೆ ತಪ್ಪದುದಯಿಸುವುದು ।
ವರ ಜಯೋತ್ಸವಾಖ್ಯಮೆಸೆದು ॥ ೨೧ ॥

ಚಿತ್ರಪದ ಚತುಷ್ಪದಿ - ೨ ಚ. ದ್ವಿ. ಗ.

ಶರಧಿಕಳಾಂಶಯುಗಂಗಳ್ ।
ಕರಮಾತ್ರಾಗಣ ಗುರುಗಳ್ ।
ಚರಣದೊಳೊಂದಿರೆ ನಿಸದಂ ।
ಕರಮೆಸೆಗುಂ ಚಿತ್ರಪದಂ ॥ ೨೨ ॥

ಉದಯ ಚತುಷ್ಪದಿ - ೨ ಪ.ಗ.

ವಿಶಿಖ ಮಾತ್ರಾಂಶದ್ವಯಂ ।
ವಿಶದ ಗುರು ವರ್ಣೋದಯಂ ।
ನಶಿಸದೊಪ್ಪಿರೆ ನಿರ್ಣಯಂ ।
ಕುಶಲದಿಂದೆಸೆಗುಮುದಯಂ ॥ ೨೩ ॥

ಅಮೃತಗತಿ ಚತುಷ್ಪದಿ - ೨ ಪ

ಋತುಕಲಾಂಶ ಯುಗ್ಮಂಗಳ್ ।
ಪ್ರತಿಪದಕೊಂದಿದೊಡಾಗಳ್ ।
ಹಿತದೊಳುದಯಿಕುಂ ಖ್ಯಾತಂ ।
ವಿತತಮಮೃತಗತಿಗೀತಂ ॥ ೨೪ ॥

ಸರಳ ಚತುಷ್ಪದಿ - ತ್ರಿ.ಚ,ತ್ರಿ.ಗ.

ಪುರ ಯುಗಾಗ್ನಿ ಕಳಾಗಣಂ ।
ಗುರು ಸುತಾಳಕ್ಕಸುಗುಣಂ ।
ನೆರೆಯೆ ರಂಜಿಕುಮುಜ್ವಳಂ ।
ಸರಳ ಪದ್ಯಮನಾಕುಳಂ ॥ ೨೫ ॥

ಕಾಮನಾಚತುಷ್ಪದಿ – ತ್ರಿ.ಪ.ತ್ರಿ.ಗ.

ನಗರ ಶರ ಶಿಖಿ ಕಲಾಗಣಂ ।
ಸುಗುರು ಸಲೆ ಸೂತ್ರಲಕ್ಷಣಂ ।
ಬಿಗಿದು ಪದಕೊಪ್ಪೆ ನಿಶ್ಚಯಂ ।
ಸೊಗಯಿಕುಂ ಕಾಮನಾಹ್ವಯಂ ॥ ೨೬ ॥

ಪವಿತ್ರಾಚತುಷ್ಪದಿ – ೩ಚ.ಗ.

ಉದಧಿಕಲಾಂಶ ತ್ರಯಂ ಗುರುಗಳ್ ।
ಪದದೊಳ್ ತಪ್ಪದೆ ಸದ್ವಿಧಿಯೊಳ್ ।
ಪುದಿದಿರೆ ಸೊಗಯಿಪುದೊಳ್ಪಿಂದಂ ।
ವಿದಿತ ಪವಿತ್ರಾಖ್ಯಂ ಛಂದಂ ॥ ೨೭ ॥

ಸುಲಲಿತಚತುಷ್ಪದಿ – ೨ಪ.ದ್ವಿ.ಗ.

ವರ ವಿಶಿಖ ಮಾತ್ರಾಂಶಯುಗಲಂ ।
ಕರಕಲಾಂಶಂ ಗುರು ವಿಶಾಲಂ ।
ನೆರೆಯೆ ರಂಜಿಸುಗುಮನವದ್ಯಂ ।
ಸುರುಚಿರಂ ಸುಲಲಿತಂ ಪದ್ಯಂ ॥ ೨೮ ॥

ಸುಭದ್ರಿಕಾಚತುಷ್ಪದಿ – ೨ಷ.ಗ.

ರಸಮಾತ್ರಾಗಣ ಯುಗ ಗುರುಗಳ್ ।
ಲಸದಂಘ್ರಿಯೊಳೊಡನೆ ಮಿಶ್ರದೊಳ್ ।
ಪಸರಿಸೆ ಘಟಿಸುವುದು ನಿಶ್ಚಯಂ ।
ಸಸಿನದಿಂ ಸುಭದ್ರಿಕಾಹ್ವಯಂ ॥ ೨೯ ॥

ಅಶೋಕಚತುಷ್ಪದಿ – ತ್ರಿ.ಚ.ತ್ರಿ.ಚ.

ವಿತತಪಾದದ ಪುರಕಲಾಂಶಂ ।
ಶ್ರುತಿಕಲಾಂಶಂ ಶಿಖಿಕಲಾಂಶಂ ।
ಗತಿಕಲಾಗಣವೊಗೆಯೆ ಸತತಂ ।
ಹಿತದೊಳೆಸೆಗುಮಶೋಕಗೀತಂ ॥ ೩೦ ॥

ಉಜ್ವಲಾಚತುಷ್ಪದಿ – ೨ಪ.ತ್ರಿ ಗ.

ಪರಮಾಂಬು ಮಾತ್ರಾಂಶ ಯುಗ್ಮಕಂ ।
ಪುರಕಲಾಂಶಂ ಸುಗುರು ಸಂಜ್ಞಕಂ ।
ಚರಣದೊಳ್ ನೆರೆಯೆ ನಿಸ್ಸಂಶಯಂ ।
ಪರಿರಂಜಿಸುಗುಮುಜ್ವಲಾಹ್ವಯಂ ॥ ೩೧ ॥

ಮಂದಾನಿಲ ಚತುಷ್ಪದಿ - ೪ಚ

ವನಧಿಕಲಾಂಶ ಚತುಷ್ಕಂ ನಿಯತಂ ।
ಘನತರ ಚರಣದೊಳೊಂದಿರೆ ನಿರತಂ ।
ಜನಿಯಿಸುಗುಂ ಸುಮಧುರ ಪದಬಂಧಂ ।
ವಿನುತಂ ಮಂದಾನಿಲ ಸಚ್ಛಂದಂ ॥ ೩೨ ॥

ಕಾಮದಾಚತುಷ್ಪದಿ - ತ್ರಿ.ಪ.ತ್ರಿ.ಪ.

ಜ್ವಲನ ಭೂತ ಪುರ ಶರ ಕಲಾಗಣಂ ।
ವಿಲಸದಂಘ್ರಿಯೊಳ್ ಸೂತ್ರಕನುಗುಣಂ ।
ನೆಲಸೆ ರಂಜಿಕುಂ ಮಧುರ ಪದಮಯಂ ।
ಲಲಿತಸಲ್ಲಯಂ ಕಾಮದಾಹ್ವಯಂ ॥ ೩೩ ॥

ರತಿಚತುಷ್ಪದಿ - ೨ಷ. ದ್ವಿ. ಗ.

ಋತುಮಾತ್ರಾ ಸಂಯುತ ಗಣಯುಗಲಂ ।
ವಿತತ ಭುಜಕಲಾಂಶಂ ಗುರುವಚಲಂ ।
ಪ್ರತಿಪದದೊಳ್ ನಿಲೆ ಸತ್ಪದ ನಿಚಿತಂ ।
ರತಿಸಮಾಖ್ಯಮುದಯಿಸುಗುಂ ಖಚಿತಂ ॥ ೩೪ ॥

ಕುಸುಮದಳ ಚತುಷ್ಪದಿ - ೩ ಪ.ಗ.

ವಿಶಿಖ ಮಾತ್ರಾಗಣ ತ್ರಿತಯ ಗುರುಗಳ್ ।
ನಶಿಸದಂಘ್ರಿಯೊಳೊಂದೆ ಯತಿ ನಿಯತಿಯೊಳ್ ।
ದಶಮಕಲೆಗಿರೆ ರಂಜಿಪುದು ಛಂದದೊಳ್ ।
ವಿಶದಪದ್ಯಂ ಕುಸುಮದಳಮಂದದೊಳ್ ॥ ೩೫ ॥

ಸುಮಂಗಲೀ ಚತುಷ್ಪದಿ - ೬ತ್ರಿ

ಅನಲ ಮಾತ್ರಿಕಾಂಶ ಷಟ್ಕಮೆಜಿಕದಿಂದೆ ।
ಘನತರಾಂಘ್ರಿಯಲ್ಲಿ ಬೆರೆದು ತಪ್ಪದೊಂದೆ ।
ವನಜ ಮಿತ್ರ ಕಲೆಗೆ ವಿರತಿ ತೋಱೆ ಮುಂದೆ ।
ಜನಿಯಿಪುದು ಸುಮಂಗಲೀ ಸಮಾಖ್ಯೆಯಿಂದೆ ॥ ೩೬ ॥

ಪ್ರಮುದಾ ಚತುಷ್ಪದಿ - ೨ಷ ಚ ಗ.

ರಸಕಲಾಂಶ ಯುಗ್ಮಂಶ್ರುತಿ ಮಾತ್ರಾಂಶಂ ।
ಲಸದುಜ್ವಲ ಗುರುವುದಯಿಸೆ ಪದಕನಿಶಂ ।
ಬಿಸಜಮಿತ್ರ ಕಲೆಗೆ ವಿರತಿ ಬರೆ ಭರದಿಂ ।
ದೆಸೆಗುಂ ಪ್ರಮುದಾಖ್ಯಂ ಲಯನಿರ್ಝರದಿಂ ॥ ೩೭ ॥

ಲಲಿತಪದ ಚತುಷ್ಪದಿ - ೩ಪ ದ್ವಿ.ಗ.

ಶರಕಲಾಂಶತ್ರಯಂ ಭುಜಕಲಾಸುಗಣಂ ।
ಗುರುವರ್ಣಮಂಘ್ರಿಯೊಳ್ ನೆಲಸೆ ವಿಶ್ರಮಣಂ ।
ನಿರತಮಾಶಾಮಾತ್ರೆಗಿರೆ ಸುಪ್ರಸಿದ್ಧಂ ।
ನಿರುಪಮಂ ಲಲಿತಪದಮುದಯಿಕುಂ ಸಿದ್ಧಂ ॥ ೩೮ ॥

ಭೋಗಿನೀ ಚತುಷ್ಪದಿ - ೬ತ್ರಿಗ

ನಗರಮಾತ್ರಿಕಾಂಶ ಷಟ್ಕ ಗುರುವಲಂಪಿನಿಂ ।
ಬಿಗಿದು ಚರಣದಲ್ಲಿ ನೆಲಸೆ ವಿರತಿ ಸೊಂಪಿನಿಂ ।
ಖಿಗಕಲಾಂತ್ಯಕೊಗೆಯೆ ತಾಳಕೊಂದೆ ಪೆಂಪಿನಿಂ ।
ಸೊಗಯಿಸುವುದು ಭೋಗಿನೀಸಮಾಖ್ಯೆಯಿಂಪಿನಿಂ ॥ ೩೯ ॥

ಲಲಿತಚತುಷ್ಪದಿ - ೪ಪ.

ಲಲಿತತರ ಬಾಣಮಾತ್ರಾಗಣ ಚತುಷ್ಟಯಂ ।
ನೆಲೆವಡೆಯೆ ಚರಣದೊಳ್ ಪರವಿಶ್ರಮಾಶ್ರಯಂ ।
ನೆಲಸೆ ದಿಙ್ಮಾತ್ರೆಗೊಡನುದಯಿಕುಂ ನಿಶ್ಚಯಂ ।
ಲಲಿತಾಹ್ವಯಂ ಲಸನ್ಮಧುರ ಪದಸಂಚಯಂ ॥ ೪೦ ॥

ಪುಷ್ಪಲತಾಚತುಷ್ಪದಿ - ೩ಷ ಗ.

ಋತುಮಾತ್ರಾಂಶತ್ರಿತಯಂ ಗುರುವತಿಹಿತದಿಂ ।
ಪ್ರತಿಚರಣದೊಳೊಂದೆ ವಿಧಿಯುತಪ್ಪದುಚಿತದಿಂ ।
ಯತಿ ರವಿಕಲೆಗೊಪ್ಪೆ ಸೊಗಯಿಸುಗುಂ ನಿರ್ವಾದಂ ।
ಹಿತದಿಂ ಪುಷ್ಪಲತಾಖ್ಯಂ ಸುಮಧುರನಾದಂ ॥ ೪೧ ॥

ರಾಗಿಣೀಚತುಷ್ಪದಿ - ೩ತ್ರಿ.

ದಹನಮಾತ್ರಿಕಾಂಶಮೇಟು ಭಂಗವಾಗದೊಡನೆ ।
ವಿಹಿತವಿಧಿಯೊಳಂಘ್ರಿಯಲ್ಲಿ ನೆಲಸೆ ವಿರತಿಯೊಡನೆ ।
ಮಿಹಿರಮಾತ್ರೆಗೆಸೆಯೆ ರಂಜಿಸುವುದು ವಿಮಲಜಾತಿ ।
ಬಹುಮನೋಜ್ಞಲಯವಿಭಾಸಿ ರಾಗಿಣೀಸುಗೀತಿ ॥ ೪೨ ॥

ಅಂಗನಾಚತುಷ್ಪದಿ - ತ್ರಿ.ಚ.ತ್ರಿ.ಚ,ತ್ರಿ.ದ್ವಿ.ಗ.

ಪುರವನಧಿ ಶಿಖಿ ವೇದ ಪಾವಕ ಭುಜಕಲಾಂಶಂ ।
ಗುರು ಸದಂಘ್ರಿಯೊಳೊಂದಿ ನಿಂದಿರೆ ಯತಿವಿಶೇಷಂ ।
ತುರಗಗಿರಿಕಲೆಗೊಗೆಯೆ ರಂಜಿಪುದಂದದಿಂದಂ ।
ವರ ಚತುಷ್ಪದಿಯಂಗನಾಹ್ವಯ ಜಾತಿಬಂಧಂ ॥ ೪೩ ॥

ಸುಖದಾಚತುಷ್ಪದಿ - ೩ ಷ.ದ್ವಿ.ಗ.

ರಸಕಲಾಗಣತ್ರಯ ಭುಜಮಾತ್ರಾಗಣ ಗುರುಗಳ್ ।
ಪಸರಿಸಿ ಸತ್ಪದಕೆ ಬೆಸೆಯೆ ವಿರತಿ ವಿಹಿತ ವಿಧಿಯೊಳ್ ।
ಬಿಸರುಹ ಸಖಕಲೆಗಿರೆ ಶೋಭಿಸುಗುಂ ಚೆಲ್ವಿಂದಂ ।
ರಸವಚ್ಛ್ರುತಿಸುಖನಾದಂ ಸುಖದಾಖ್ಯಂ ಛಂದಂ ॥ ೪೪ ॥

ಉತ್ಸವಚತುಷ್ಪದಿ - ೭ತ್ರಿ.ಗ.

ಜ್ವಲನ ಮಾತ್ರಿಕಾಂಶಮೇಟಿಮಲಿನ ಗುರು ಮಹಾಕ್ಷರಂ ।
ಜ್ವಲದುದಗ್ರ ಪದದೆ ಬೆರೆದು ನೆಲಸೆ ವಿಶ್ರಮಾಕರಂ ।
ಜಲಜಮಿತ್ರ ಮಾತ್ರೆಗೊಂದಿ ನಿಲೆ ವಿರಾಜಿಕುಂ ಕರಂ ॥
ಲಲಿತ ಪದ್ಯಮುತ್ಸವಾಖ್ಯ ಮಲಘು ಸತ್ಪದೋತ್ಕರಂ ॥ ೪೫ ॥

ಭಾವಾಚತುಷ್ಪದಿ - ತ್ರಿ.ಚ.ತ್ರಿಚ.ತ್ರಿ ಚ.ಗ.

ಅನಲ ಗತಿ ಪುರ ನಿಗಮ ಪಾವಕ ಯುಗಕಳಾಸುಗಣಂ ।
ಘನ ವಿಶದ ಗುರು ವರ್ಣಮಂಘ್ರಿಯೊಳೆಸೆಯೆ ವಿಶ್ರಮಣಂ ।
ಮನುಕಲಾಂತ್ಯಕೆ ವಿದಿತ ವಿಧಿಯಿಂ ಸಂಘಟಿಸೆ ಸತತಂ ।
ವಿನುತ ಭಾವಾಹ್ವಯ ಚತುಷ್ಪದಿಯುದಯಿಪುದು ಖಚಿತಂ ॥ ೪೬ ॥

ಘನೋತ್ಸವಚತುಷ್ಪದಿ – ೮ತ್ರಿ

ಪುರಕಲಾಗಣಾಷ್ಟಕಂ ಸುಚರಣದಲ್ಲಿ ಬೆರೆದು ಸೇರೆ ।
ವಿರತಿ ವಿಹಿತ ರೀತಿಯಿಂದೆ ಶರಜಮಿತ್ರ ಕಲೆಗೆ ತೋಱೆ ।
ಪರಮ ತಾಳ ಗಣನೆಯೊಪ್ಪೆ ನಿರತಮೆಸೆವ ನಾಲ್ಕು ಪದದೆ ।
ವರ ಘನೋತ್ಸವಾಖ್ಯಗೀತಿ ಮೆಱೆವುದಮಳ ಮಧುರ ಪದದೆ ॥ ೪೭ ॥

ವಿದ್ಯಾಧರೀಚತುಷ್ಪದಿ – ೫ಚ.ದ್ವಿ.ಗ.

ಉದ್ಯತ್ಪದದೊಳ್ ಪಂಚ ಪಯೋನಿಧಿ ಮಾತ್ರಾ ಸುಗಣಂ ।
ಹೃದ್ಯದ್ವಿಕಳಾಂಶಂ ಗುರುವೊಂದಿರೆ ಸೂತ್ರಾನುಗುಣಂ ।
ಸದ್ಯತಿ ವಸು ಗಜ ಕಲೆಗಿರೆ ಸೊಗಯಿಸುಗುಂ ನಿರವದ್ಯಂ ।
ವಿದ್ಯಾಧರಿ ಪರಿಶುದ್ಧ ಚತುಷ್ಪದಿ ವಿಶ್ರುತ ಪದ್ಯಂ ॥ ೪೮ ॥

ಲೋಲಾಚತುಷ್ಪದಿ – ತ್ರಿ.ಪ.ತ್ರಿ ಪ ತ್ರಿ,ತ್ರಿ.ಗ.

ಪುರ ಕಲಂಬ ಶಿಖಿ ವಿಶಿಖ ನಗರಾಗ್ನಿ ಮಾತ್ರಿಕಾಗಣಂ ।
ಗುರು ಸದಂಘ್ರಿಯೊಳ್ ವಿಹಿತ ವಿಧಿಯಿಂದೆ ನೆರೆಯೆ ವಿರಮಣಂ ।
ದ್ವಿರದ ವಸು ಕಲೆಗೆ ತಪ್ಪದೊಡನೆಸೆಯೆ ನಿಯತ ರೀತಿಯೊಳ್ ।
ಭರದೆ ಲೋಲಾಖ್ಯ ಪದ್ಯ ಮುದಯಿಸುಕುಂ ವಿಮಲ ಜಾತಿಯೊಳ್ ॥ ೪೯॥

ಧವಳಾಚತುಷ್ಪದಿ – ೩ಷ.ಚ,ಗ.

ಋತುಮಾತ್ರಾಂಶ ತ್ರಯ ಗತಿಮಾತ್ರಾಗಣ ಗುರುವೃಂದಂ ।
ವಿತತೋನ್ನತ ಘನಪದದೊಳ್ ನೆಲಸಿರೆ ಸದ್ವಿಧಿಯಿಂದಂ ।
ಯತಿ ದಿನಪತಿ ಮಾತ್ರೆಗೆಸೆಯೆ ಸುರುಚಿರ ಲಯಸಂಸಿದ್ಧಂ ।
ಶ್ರುತಿರಮಣೀಯಂ ಧವಳಾಹ್ವಯಮುದಯಿಸುಗುಂ ಸಿದ್ಧಂ ॥ ೫೦ ॥

ಪರಿವರ್ಧನಚತುಷ್ಪದಿ – ೬ಚ.ಗ.

ಶರನಿಧಿ ಮಾತ್ರಾಧರಗಣಷಟ್ಕಂ ಗುರುವರ್ಣಂ ಹಿತದಿಂ ।
ಚರಣದೊಳೈಕ್ಯಪತಳೆದೊಡನೊದವಿರೆ ವಿರಮಣವೊಚ್ಚತದಿಂ ।
ಧರಣೀಶ್ವರಕಲೆಗುದಯಿಸೆ ಮಾತ್ರಾಪರಿವರ್ಧನ ಬಂಧಂ ।
ಪರಿವರ್ಧನ ಸುಚತುಷ್ಪದಿಯೊಗೆಗುಂ ನಿರುಪಮಲಯದೀದಂ ॥ ೫೧ ॥

ತರಂಗಿಣೀಚತುಷ್ಪದಿ – ತ್ರಿ.ಪ ತ್ರಿ.ಪ ತ್ರಿ.ಪ.ಗ.

ನಗರ ಮಾರ್ಗಣ ಜ್ವಲನ ಭೂತ ಶಿಖಿ ಶರ ಕಲಾಂಶೋತ್ಕರಂ ।
ಸುಗುರು ವರ್ಣವೊಡನಂಘ್ರಿಯೊಳ್ ನೆರೆಯೆ ಸದ್ವಿರಾಮಂ ಕರಂ ।
ಬಿಗಿದು ವಸು ಹಸ್ತಿ ಮಾತ್ರೆಯೊಳ್ ನಿಯತಿಯಿಂದೆಸೆಯೆ ನಿರ್ಣಯಂ ।
ಸೊಗಯಿಕುಂ ತರಂಗಿಣಿಯಭಂಗಸತ್ಪದ ತರಂಗಾಶ್ರಯಂ ॥ ೫೨ ॥

ಗೀತಿಕಾಚತುಷ್ಪದಿ – ತ್ರಿ.ಚ.ತ್ರಿ ಚ ತ್ರಿ.ಚ.ತ್ರಿ.ಗ.

ಪುರ ನಿಗಮ ನಗರಾಬ್ಧಿ ಶಿಖಿ ಯುಗ ಪುರಕಳಾಗಣ ಸಂಕುಳಂ ।
ಗುರು ಮಹಾಕ್ಷರಮಮಳಪದದೊಳ್ ನೆರೆಯೆ ತಪ್ಪದೆ ನಿಶ್ಚಳಂ ।
ವಿರತಿ ಸಲೆ ಮನು ಮಾತ್ರೆಗುದಯಿಸೆ ವರ ಪದೌಘಸಮಾಕುಳಂ ।
ಸರಸ ಗೀತಿಕೆ ಗೀತಿಕಾಖ್ಯಂ ಭರದೊಳೊಗೆವುದನಾಕುಳಂ ॥ ೫೩ ॥

ವನಮಾಲಾಚತುಷ್ಪದಿ – ೬ಚ. ದ್ವಿ. ಗ.

ವನನಿಧಿ ಮಾತ್ರಾನ್ವಿತ ಗಣಷಟ್ಕಂ ವಿನುತ ದ್ವಿಕಳಾಸುಗಣಂ ।
ಘನತರ ಗುರುವರ್ಣಂ ಬೆರೆದಂಘ್ರಿಯೊಳನುವಿಡಿದಿರೆ ವಿಶ್ರಮಣಂ ।
ಜನಪತಿ ಮಾತ್ರೆಗೆ ನೆಲಸಿರೆ ನಿರತಂ ಜನಿಯಿಸುಗುಂ ನಿರ್ಧಾರಂ ।
ವನಮಾಲಾಹ್ವಯ ಚಾರು ಚತುಷ್ಪದಿ ಸುನಿಯತ ಮಾತ್ರಾಧಾರಂ ॥ ೫೪॥

ಮಣಿದಾಮಚತುಷ್ಪದಿ – ತ್ರಿ.ಚ.ತ್ರಿ.ಚ.ತ್ರಿ ಚ.ತ್ರಿ.ಚ.

ಪುರ ಪಯೋನಿಧಿ ನಗರ ಗತಿ ಶಿಖಿ ಶರಧಿ ವಹ್ನಿ ಶತ್ರ್ರಿಕಲಾಂಶಂ ।
ಚರಣದೊಳ್ ಸಮ್ಮಿಶ್ರದಿಂದಂ ಬೆರೆದು ನೆಲೆಸಿರೆ ತಪ್ಪದನಿಶಂ ।
ವಿರಮಣಂ ಮನು ಮಾತ್ರೆಗೊಪ್ಪಿರೆ ಕರಮುದಯಿಕುಂ ನಿರ್ವಿವಾದಂ ।
ನಿರುಪಮಂ ಮಣಿದಾಮಪದ್ಯಂ ಸರಸ ಸುಮನೋಹರ ನಿನಾದಂ ॥ ೫೫ ॥

ತರಂಗಚತುಷ್ಪದಿ – ತ್ರಿ.ಪ.ತ್ರಿ.ಪ ತ್ರಿ.ಪ.ತ್ರಿ.ಗ.

ಪುರಕಲಾಂಬಾಗ್ನಿ ಭೂತ ಸಪ್ತಾರ್ಚಿ ಶರ ಹುತಾಶನ ಕಲಾಗಣಂ ।
ಗುರು ವಿಲಂಬಕಂ ರುಚಿರ ಚರಣದೊಳ್ ಬೆರೆದು ಸೇರೆ ಸದ್ವಿರಮಣಂ ॥
ಕರಿ ಭುಜಂಗಕಲೆಗುಚಿತವಿಧಿಯಿಂದಮಿರೆ ವಿರಾಜಿಕುಂ ನಿರ್ಮಳಂ ।
ಸ್ಫುರಿತ ಪವತರಂಗಂ ತರಂಗಾಖ್ಯ ವರ ಚತುಷ್ಪದಿಯನಾಕುಳಂ ॥ ೫೬ ॥

ಬಂಧುರಚತುಷ್ಪದಿ – ೭೫ ಗ.

ಉವಧಿ ಕಳಾಗಣ ಸಪ್ತಕದಂತ್ಯದೆ ಸದಮಳ ಗುರುವರ್ಣಂ ಸ್ಥಿರದಿಂ ।
ಪದದೊಳ್ ನಿಶ್ಚಿತ ಪದ್ಧತಿಯಂ ಬಿಡದೊದವಿರೆ ಯತಿಯತಿಶಯತರದಿಂ।
ಪವಿನಾಜಿನೆಯು ಕಲಾಂತ್ಯಕೆ ಸತತಂ ಪುದಿದೊಪ್ಪಿರೆ ನಿಸ್ಸಂಶಯದಿಂ ।
ಮುದಯಿಸುಗುಂ ಬಂಧುರ ಸುಚತುಷ್ಪದಿ ಮೃದುತರ ಬಂಧುರ
ಪದಚಯದಿಂ ॥ ೫೭ ॥

ನವಕೋಕಿಲಾಚತುಷ್ಪದಿ – ೫ಪ.ತ್ರಿ,ಗ

ಪ್ರವಿಲಸತ್ಪಂಚಮಾತ್ರಾಂಶ ಪಂಚಕಮುಗಲದವತರಿಸೆ ನಿಯತಿಯೊಳ್ ।
ಪ್ರವಿದಿತ ತ್ರಿಕಳಾಗಣಂ ನೆಲಸೆ ಗುರುತುದಿಗೆ ಸವನಿಸೆ ಸುರೀತಿಯೊಳ್ ।
ಸುವಿರಾಮಮಾಸಾದಿಶಾಕಲೆಗೆ ತೋಱೆ ಸಂಭವಿಸುಗುಂ ನಿಶ್ಚಯಂ ।
ನವಕೋಕಿಲಾಹ್ವಯಂ ನವಲಯಸಮನ್ವಯಂ ವಿವಿಧಸುಪದಾಶ್ರಯಂ॥೫೮

ರಂಜನಚತುಷ್ಪದಿ – ೮೫.

ಶ್ರುತಿಮಾತ್ರಾಶ್ರಿತ ಸುಗಣಾಷ್ಟಕವೊಡನತಿಶಯ ಲಯಕೊಂದುತೆ
ವಿಸ್ತರದೊಳ್ ।
ಪ್ರತಿಚರಣದೆ ನೆಱೆ ನೆರೆದಿರೆ ನಿಶ್ಚಿತ ಯತಿ ನಿಯತಿಯು ವಿಜಿಡದೆ
ಸುಸ್ಥಿರದೊಳ್ ।
ಕ್ಷಿತಿಪತಿ ಮಾತ್ರೆಗೆ ಸಲೆ ನೆಲೆಗೊಂಡಿರೆ ಸತತಂ ರಂಜಿಸುಗುಂ ಚೆಲ್ವಿಂದಂ ।
ಶ್ರುತಿರಂಜನ ಮೃದುಪದ ರಚಿತಂ ವಿಶ್ರುತಪದ್ಯಂ ರಂಜನ ಸಚ್ಛಂದಂ॥೫೯॥

ವರ್ಧಮಾನಚತುಷ್ಪದಿ – ೬ಪ.ಗ

ಪರಿಶುದ್ಧ ಪಂಚಮಾತ್ರಾಬದ್ಧ ಗಣಷಟ್ಕಗುರುವರ್ಣವೊಡನಂದದೊಳ್।
ಚರಣದೊಳ್ ಸವಿಸ್ಮಲನಮಂ ತಳೆದು ಸಂತತಂ ನೆರೆಯೆ ಪದ್ಧತಿ
ಯಂದದೊಳ್ ।
ವಿರಮಣಂಗಳ್ ದಿಶಾದಿಙ್ಮಾತ್ರೆಗುದ್ಭವಿಸೆ ವರ ಮಧುರಪದವೃಂದದೊಳ್।
ಪರಿಶೋಭಿಕುಂ ವರ್ಧಮಾನಾಹ್ವಯಂ ರುಚಿರತರ ಚತುಷ್ಪದ
ಬಂಧದೊಳ್ ॥ ೬೦ ॥

ಚಿತ್ರಕಚತುಷ್ಪದಿ - ತ್ರಿ.ಪ.ತ್ರಿ.ಪ ತ್ರಿ.ಪ ತ್ರಿ.ಪ.

ಪುರ ಶಿಲೀಮುಖ ಜ್ವಲನ ಭೂತಾಗ್ನಿ ಶರ ಪುರಾಂಬು
ಮಾತ್ರಾಗಣೋತ್ಕರಂ ।
ವರ ವಿಶಾಲತರ ಚರಣದೊಳ್ ಬೆರೆದು ನೆರೆಯೆ ಸಪ್ರೀತಿಯಿಂ ನಿರಂತರಂ।
ವಿರತಿ ಧರಣೀಶ ಮಾತ್ರೆಯಂತ್ಯದೊಳ್ ಬರೆ ವಿರಾಜಿಕುಂ ನೋಡೆ
ನಿರ್ಣಯಂ ।
ಸರಸ ಮಧುರ ಪದಸಂಚಯಂ ಚಿತ್ರತರ ಲಯಾಶ್ರಯಂ ಚಿತ್ರ
ಕಾಹ್ವಯಂ ॥ ೬೧ ॥

ಲಲಿತಗತಿಚತುಷ್ಪದಿ - ೬ಪ.ದ್ವಿ ಗ.

ಅತಿಶಯೋಜ್ವಲ ಬಾಣ ಮಾತ್ರಾಂಶ ಷಟ್ಕಮುಂ ನುತ ಬಾಹು
ಮಾತ್ರಾಂಶವೊಂದುಂ ।
ವಿತತ ಗುರು ವರ್ಣವೊಂದುಂ ಮಿಶ್ರದಿಂದಮುನ್ನತ ಪದದೊಳೊಂದೆ
ತಾವೊಂದುಂ ।
ಯತಿ ದಶಮ ದಶಮ ಮಾತ್ರೆಗಳೆಡೆಗೆ ವಿಹಿತ ನಿಶ್ಚಿತವಿಧಿಯೊ
ಳೊಡನೊಗೆಯೆ ಸಿದ್ಧಂ ।
ಹಿತಕರ ಮನೋಜ್ಞಪದದಿಂದೊಪ್ಪುಗುಂ ಲಲಿತಗತಿ
ಲಲಿತಗತಿಲಯನಿಬದ್ಧಂ ॥ ೬೨ ॥

ಕಾಮಲೀಲಾಚತುಷ್ಪದಿ - ೭ಪ ತ್ರಿ ಗ.

ಕೋಮಲ ವಿಶುದ್ಧ ಶರಮಾತ್ರಾಂಶ ಷಟ್ಕಮುದ್ದಾಮತರ ವಹ್ನಿ
ಮಾತ್ರಾಗಣಂ ।
ವ್ಯಾಮಿಶ್ರ ಗುರುವರ್ಣಮೊಡಗೂಡಿ ಪಾದದೊಳ್ ತಾಮೊಪ್ಪೆ
ನಿರ್ದಿಷ್ಟ ವಿರಮಣಂ ।
ರಾಮಣೀಯಕ ಲಯದೆ ದಿಗ್ದಿಶಾಮಾತ್ರೆಗಿರೆ ನೇಮಮಂ
ಬಿಡದೊಪ್ಪುವಂದದೊಳ್ ।
ಕಾಮಲೀಲಾಹ್ವಯಂ ರಂಜಿಕುಂ ಮಾತ್ರಿಕಾ ಸ್ತೋಮಸಂಬದ್ಧ
ಸಚ್ಛಂದದೊಳ್ ॥ ೬೩ ॥

ಕುಸುಮಮಂಜರಿಚತುಷ್ಪದಿ - ೭ಪ.ಗ

ವಿಮಲ ಮಾರ್ಗಣ ಕಲಾಗಣ ಸಪ್ತಕದ ಪರದೊಳಮಲ ಗುರು
ವರ್ಣಮೊಡನೊಂದಿ ಕಡೆಯೊಳ್ ।
ಕ್ರಮಮನನುಸರಿಸಿ ನಿಜ ಚರಣದೊಳ್ ನೆರೆಯೆ ವಿಶ್ರಮಮೊಡನೆ
ವಿಂಶತಿ ಕಲಾಂತ್ಯದೆಡೆಯೊಳ್ ।
ಸಮುಚಿತ ವಿಧಾನದಿಂ ಮೆಯ್ದೋಱಿ ಪರಿಶುದ್ಧ ರಮಣೀಯ
ತಾಳಲಯಕೊಪ್ಪಿ ನಿರತಂ ।
ಸಮನಿಕುಂ ಕುಸುಮಮಂಜರಿ ಸಮಾಹ್ವಯ ಚತುಷ್ಪದಂ ಸುಮಧುರ
ಮನೋಜ್ಞಪದ ನಿವಹಭರಿತಂ ॥ ೬೪ ॥

ಲಲಿತಲಯಚತುಷ್ಪದಿ - ೭ಪ.ದ್ವಿ.ಗ.

ಲಲಿತ ಸಾಯಕಕಲಾಗಣ ಸಪ್ತಕಂ ಸಮುಜ್ವಲ ಭುಜಕಲಾಗಣಂ
ವಿಶದಗುರು ವರ್ಣಂ ।
ವಿಲಸತ್ಸುಪಾದದೊಳ್ ಸಮ್ಮಿಲನಮಂ ತಳೆದು ನೆಲಸೆ ವಿಂಶತಿ
ಕಲೆಗೆ ನಿಯತವಿಶ್ರಮಣಂ ।
ಚಲಿಸದೊಚ್ಚತದಿಂದೆ ತಲೆದೋಱಿ ವಿಹಿತನಿರ್ಮಲತಾಳ
ಘಾತಕೊಡನೊಪ್ಪೆ ಮೃದುಲಯದಿಂ ।
ಲಲಿತಲಯಮೆಂಬಮಳ ನಿರುಪಮಚತುಷ್ಪದಿಕೆ ಸಲೆಕಣ್ಗೊಳಿಪುದಮಳ
ಮಧುರಪದಚಯದಿಂ ॥ ೬೫ ॥

ಸುತಾರಾಚತುಷ್ಪದಿ - ೮೫

ನಾರಾಚ ಮಾತ್ರಾಗಣಾಷ್ಟಕಂ ಪಾದದೊಳ್ ಸೇರೆ ಸಮ್ಮಿಶ್ರಮಂ
ತಾಳ್ದು ವಿಸ್ತರದೊಳ್ ।
ಚಾರುತರ ವಿರಮಣಂ ವಿಂಶತಿಕಲಾಂತ್ಯದೊಳ್ ತೋಱಿ
ಸಂತತಮುಚಿತ ಸೂತ್ರಾನುಸಾರದೊಳ್ ।
ಸಾರತರ ತಾಳಗತಿಗೊಪ್ಪುವಂತೆಸೆವ ಗಂಭೀರಲಯ ಭರಿತ ಮೃದುವಾಕ್ಯ
ಸಂಸ್ಕಾರದೊಳ್ ।
ರಾರಾಜಿಪುದು ರುಚಿರ ಮಾತ್ರಾಚತುಷ್ಪದಿ ಸುತಾರಾಹ್ವಯಂ
ಚತುಶ್ಚರಣ ಪ್ರಸಾರದೊಳ್ ॥ ೬೬ ॥

ಅರ್ಧಸಮಚತುಷ್ಪದೀಪ್ರಕರಣಂ

ಸದಮಳಿನಾರ್ಧಸಮಚತು ।
ಷ್ಪದಿಕೆಯ ವಿಷಮಾಂಘ್ರಿಯೊಳ್‌ಸಮಾನಕಳಾಂಶಂ ।
ಪುದಿದಿರ್ಕುಂ ಮತ್ತಂ ಸಮ।
ಪದದೆ ಸಮಾನತರ ಮಾತ್ರಿಕಾಗಣಮಿರ್ಕುಂ ॥ ೬೬ ॥

ಅಮಳಾರ್ಧಸಮಚತುಷ್ಪದಿ ।
ಗಮದೊರ್ಡನೊಪ್ಪುವ ಸಮಾಂಘ್ರಿಯಂತ್ಯದೆ ಲಘು ತಾಂ ।
ಸಮನಿಸಿದೊಡಂ ವಿಕಲ್ಪ ।
ಕ್ರಮದಿಂ ಗುರುವೆನಿಪುದಲ್ಲಿ ವಿರಮಣಮೊಗೆಗುಂ ॥ ೬೭ ॥

ವರ್ಧನಚತುಷ್ಪದಿ

ಪುರಕಲಾಸುಗಣಚತುಷ್ಕ ।
ಪುರಕಲಾಗಣತ್ರಯಂ ।
ಗುರುನಿಜಾರ್ಧಭಾಗಕೆಸೆಯೆ ।
ಮೆಱೆವುದೊಡನೆ ವರ್ಧನಂ ॥ ೬೮ ॥

ಕುಂತಳ ಚತುಷ್ಪದಿ

ವಿದಿತ ಪುರಕಲಾಂಶಮುಸಮ ।
ಪದದೊಳೊಡನೆ ನಾಲ್ಕು ।
ಒದವೆ ಯುಗ್ಮ ಪದದೆ ಮೂಱು ।
ಪುದಿಯೆ ಕುಂತಳಾಖ್ಯೆ ॥ ೬೯ ॥

ಭೋಗಚತುಷ್ಪದಿ

ಅಷ್ಟನಗರ ಮಾತ್ರಿಕಾಂಶಮೋಜಪದದೆ ಮಿಶ್ರದಿಂದ ।
ವಿಷ್ಟಮಪ್ಪ ತೆಜಿದೆ ನೆಲಸೆ ಯುಗ್ಮ ಪಾದದೆ ॥
ಸ್ಪಷ್ಟಮಾಗಿ ಶಿಖಿಕಲಾಂಶ ಷಟ್ಕ ಗುರುಗಳೊಡನೆ ಸೇರೆ ।
ಸೃಷ್ಟಿಯಕ್ಕುಮೊಡನೆ ಭೋಗಮೆನಿಪ ಚೌಪದಿ ॥ ೭೦ ॥

ಜಯಚತುಷ್ಪದಿ

ಆಗಮಮಾತ್ರಾ ಸುಗಣ ಚತುಷ್ಕಂ ।
ಬೀಗೆ ವಿಷಮಪದದೆ ॥
ಸಾಗರ ಮಾತ್ರಾಂಶದ್ವಯ ಗುರು ಸಮ ।
ಕಾಗಿರೆ ಜಯಮೆನಿಕುಂ ॥ ೭೧ ॥

ವಿಜಯಚತುಷ್ಪದಿ

ನಿಗಮ ಕಲಾಂಶ ಚತುಷ್ಟಯಮಸಮದೊ ।
ಳೊಗೆಯೆ ಸಮಾಂಘ್ರಿಯೊಳೆಂದುಂ ॥
ಯುಗ ಮಾತ್ರಾಂಶ ಯುಗಂ ದ್ವಿಕಳಾಂಶಂ ।
ಸುಗುರುಮೆಸೆಯೆ ವಿಜಯಾಖ್ಯಂ ॥ ೭೨ ॥

ಶರಚತುಷ್ಪದಿ

ಶರಧಿಕಲಾಂಶ ಚತುಷ್ಟಯಮೋಜಕೆ ।
ನೆರೆದಿರೆ ತಪ್ಪದೆ ಸಮಪದದೆ ॥
ಶರನಿಧಿ ಮಾತ್ರಾಂಶತ್ರಯ ಗುರುಮಿರೆ ।
ಶರನಾಮದೆ ಚೌಪದಿಯೆಸೆಗುಂ ॥ ೭೩ ॥

ಜಯಂತಚತುಷ್ಪದಿ

ಪುರಕಲಂಬ ಶಿಖಿ ಶರಕಲಾಗಣಂ ।
ನೆರೆಯೆ ವಿಷಮಪದಕೆ ।
ಪುರ ಶಿಲೀಮುಖಕಲಾಂಶ ಗುರು ಸಮಕೆ ।
ಬರೆ ಜಯಂತಮೆನಿಕುಂ ॥ ೭೪ ॥

ಮಕರಂದಚತುಷ್ಪದಿ

ಜ್ವಲನ ಯುಗ ಪುರ ಶರಧಿ ಕಲೆಗಳ್ ।
ನಿಲೆ ವಿಷಮಪದಕೆ ।
ಜ್ವಲನ ಗತಿಕಲೆ ಗುರು ಸಮಾಂಘ್ರಿಗೆ ।
ನೆಲಸೆ ಮಕರಂದಂ ॥ ೭೫ ॥

ಮಾಧವೀಚತುಷ್ಪದಿ

ನಗರ ಗತಿ ಶಿಖಿ ನಿಗಮ ಕಲೆಗಳ್ ।
ಸೊಗಯಿಸಿರೆ ವಿಷಮಾಂಘ್ರಿಗೆ ।
ನಗರ ಯುಗ ಪುರ ಮಾತ್ರೆ ಗುರು ಸಮ ।
ಕೊಗೆಯೆ ಮಾಧವಿಯೆನಿಪುದು ॥ ೭೬ ॥

ಕಲ್ಯಾಣಚತುಷ್ಪದಿ

ಬಾಣಮಾತ್ರಾಗಣ ಚತುಷ್ಟಯಮಸಮಪದದೆ ।
ತಾಣಮಾಂತಿರೆ ಯುಗ್ಮದೊಳ್ ।
ಬಾಣಮಾತ್ರಾಗಣ ದ್ವಯಗುರುಗಳೊಂದೆ ಕ ।
ಲ್ಯಾಣಮಕ್ಕುಂ ಛಂದದೊಳ್ ॥ ೭೭ ॥

ನಿರ್ಮಲಾಚತುಷ್ಪದಿ

ಪರಮ ಮಾರ್ಗಣಕಲಾಗಣ ಚತುಷ್ಟಯಮೋಜ ।
ಚರಣಕಾವರಿಸೆ ಸಮಪದಕೆ ।
ಶರಕಲಾಗಣಯುಗ್ಮ ಬಾಹುಮಾತ್ರಾಂಶ ಗುರು ।
ವಿರೆ ರಂಜಿಪುದು ನಿರ್ಮಲಾಖ್ಯಂ ॥ ೭೮ ॥

ಕುಸುಮಚತುಷ್ಪದಿ

ಅಸಮಾಂಘ್ರಿಯೊಳ್ ನಾಲ್ಕು ಪಂಚಮಾತ್ರಾಗಣಂ ।
ಪಸರಿಸಿರೆ ಮುಂದೆ ಸಮಪದದೊಳೊಸೆದು ॥
ಲಸದಂಬುಮಾತ್ರಾಗಣತ್ರಯಂ ಗುರುವೆಸೆಯೆ ।
ಕುಸುಮನಾಮಕ ಚತುಷ್ಪದಿಯೆಸೆವುದು ॥ ೭೯ ॥

ವೀರಶೇಖರಚತುಷ್ಪದಿ

ಪಂಚಮಾತ್ರಾಗಣ ಚತುಷ್ಕಮಸಮಾಂಘ್ರಿಯೊಳ್ ।
ಚಂಚಲಿಸದೊಪ್ಪೆ ಸಮಪಾದದೊಳ್ ಬೆಸೆದು ।
ಪಂಚಮಾತ್ರಾಗಣ ತ್ರಯ ಭುಜಕಲಾಂಶ ಗುರು ।
ಸಂಚಯಿಸೆ ವೀರಶೇಖರಮುದಯಿಸುವುದು ॥ ೮೦ ॥

ಕುಸುಮವತೀಚತುಷ್ಪದಿ

ಶರಕಲಾಂಶ ತ್ರಿತಯ ಕರಕಲಾಂಶಗೆೞ್ ।
ಗುರುವರ್ಣವೊಡನೊಪ್ಪೆ ವಿಷಮಪದದೊಳ್ ।
ಶರಕಲಾಂಶ ತ್ರಿತಯ ಗುರು ಸಮಾಂಘ್ರಿಗಳೊಳ್ ।
ಬರೆ ರಂಜಿಕುಂ ಕುಸುಮವತಿಯಿಂಪಿನೊಳ್ ॥ ೮೧ ॥

ರತಿಲೀಲಾಚತುಷ್ಪದಿ

ವಿತತ ವಿಷಮ ಪದದೊಳ್ ರಸಮಾತ್ರಾಂಶ ಚತುಷ್ಟಯಮು ।
ನ್ನತಿಯಿಂದಿರೆ ಸಮಪಾದದೆ ಬಟೀಕಂ ॥
ಋತುಕಳಾಂಶ ಯುಗಳಂ ಭುಜಮಾತ್ರಾಂಶಂ ಗುರುವುದಯಿಸೆ ।
ರತಿಲೀಲಾಹ್ವಯವೊಡನುದಯಿಸುಗುಂ ॥ ೮೨ ॥

ಮದನಲೀಲಾಚತುಷ್ಪದಿ

ಅಸಮಾಂಘ್ರಿಗೆ ಋತುಮಾತ್ರಾಗಣ ಚತುಷ್ಟಯಂ ಕ್ರಮದಿಂ ।
ಬೆಸೆದಿರೆ ಸಮಚರಣಕೆ ನಿಶ್ಚಿತ ಪದ್ಧತಿಯಿಂದಂ ।
ರಸಕಲಾಗಣ ತ್ರಿತಯಂ ಭುಜಮಾತ್ರಾಂಶಂ ಗುರುತಾ ।
ಮೆಸೆಯೆ ಕರಂ ರಂಜಿಕುಂ ಮದನಲೀಲಾಛಂದಂ ॥ ೮೩ ॥

ವಿಷಮಚತುಷ್ಪದೀಪ್ರಕರಣಂ

ಅತಿಶಯ ವಿಧಿಯಿಂದೆ ವಿಷಮ ।
ಚತುಷ್ಪದಿಕೆಯೊಳ್ ಕಳಾಂಶ ಸಂಖ್ಯಾವಳಿನಿ ।
ಶ್ಚಿತ ಪಾದವೊಳಸಮತೆಯಿಂ ।
ದಿತರಾಂಘ್ರಿಗಳೊಳ್ ಸಮಪ್ರಮಾಣದೊಳಿರ್ಕುಂ ॥ ೮೪ ॥

ವಿದಿತೋಜ್ವಲ ವಿಷಮಚತು ।
ಷ್ಪದಿಯೊಳ್ ವಿಶ್ರಾಮವಿರ್ಪ ನಿಶ್ಚಿತ ಪದದೊಳ್ ।
ತುದಿಗೆ ವಿಕಲ್ಪದೆ ಲಘುತಾ ।
ನೊದವಿದೊಡಂ ದೀರ್ಘವಾಗಿ ಗುರುವೆಂದೆನಿಕುಂ ॥ ೮೫ ॥

ತಾರಕಚತುಷ್ಪದಿ

ಪುರಕಲಾಗಣಾಳಿ ನಾಲ್ಕು ।
ನೆರೆಯೆ ಮೂಱು ಚರಣಕುಭಯ ।
ಪುರಕಲಾಂಶ ಗುರುಪರಕ್ಕೆ ।
ಬೆರೆಯೆ ತಾರಕಂ ॥ ೮೬ ॥

ಜಯತಿಲಕಚತುಷ್ಪದಿ

ಉದಧಿಕಲಾಂಶ ತ್ರಯ ಗುರುಗಳ್ ।
ಪದಯುಗಕಂತ್ಯಾಂಘ್ರಿಗೆ ಹಿತದೊಳ್ ।
ಪುದಿದಿರೆ ಯುಗಮಾತ್ರಾಂಶ ಚತುಷ್ಟಯ ।
ಮೊದವೆ ತೃತೀಯಕೆ ಜಯತಿಲಕಂ ॥ ೮೭ ॥

ಜಯಮಂಗಳ ಚತುಷ್ಪದಿ

ಶ್ರುತಿಮಾತ್ರಾಂಶ ಚತುಷ್ಕಂ ಚರಣ ।
ತ್ರಿತಯಕೆ ನಿಯತಿಯೊಳೆಸೆಯೆ ಚತುರ್ಥಕೆ ।
ಗತಿಮಾತ್ರಾಂಶ ತ್ರಯಗುರು ಪೊಲ್ದಿರೆ ।
ನುತ ಜಯಮಂಗಳಮುದಯಿಸುಗುಂ ॥ ೮೮ ॥

ಚಂಡಚತುಷ್ಪದಿ

ಪುರ ನಿಗಮ ಶಿಖಿ ಗತಿಕಲಾಗಣ ।
ಮುರು ಪದತ್ರಯಕೊಂದೆ ಪಾವಕ ।
ಕರಕಲಾಗಣ ಗುರು ಚತುರ್ಥಕೆ ।
ನೆರೆಯೆ ಚಂಡಂ ॥ ೮೯ ॥

ದೀಪಕಚತುಷ್ಪದಿ

ನಗರ ಗತಿ ಶಿಖಿ ವಾರ್ಧಿ ಮಾತ್ರಾ ।
ಸುಗಣಮಂಘ್ರಿ ತ್ರಯಕೆ ಬರೆ ಪುರ ।
ನಿಗಮ ವಹ್ನಿ ಕಲಾಂಶ ಗುರು ತುದಿ ।
ಗೊಗೆಯೆ ಮೆಱೆವುದು ದೀಪಕಂ ॥ ೯೦ ॥

ಹಂಸೀಚತುಷ್ಪದಿ

ಶರಕಲಾಗಣಯುಗದ ।
ಚರಣತ್ರಿತಯಕೊಂದಿ ।
ಶರ ಭುಜ ಕಲಾಂಶ ಗುರು ।
ಬರೆ ಹಂಸಿಯಕ್ಕುಂ ॥ ೯೧ ॥

ಪದ್ಮಿನೀಚತುಷ್ಪದಿ

ಶರಕಲಾಗಣ ಚತುಷ್ಟಯಮಸಮಪದಕೆಸೆಯೆ ।
ವರ ಶರಕಲಾಂಶತ್ರಯಂ ಭುಜಕಲಾಂಶಂ ।
ಗುರುತಾಂ ದ್ವಿತೀಯಕಿರೆ ಶರಕಲಾಂಶತ್ರಯಂ ।
ಗುರು ಚತುರ್ಥಕಿರೆ ಪದ್ಮಿನಿಯೆನಿಪುದು ॥ ೯೨ ॥

ನಳಿನೀಚತುಷ್ಪದಿ

ಶರಕಲಾಂಶಚತುಷ್ಕಮೋಜಕಿರೆಯೆರಡನೆಯ ।
ಚರಣದೊಳ್ ಭೂತಮಾತ್ರಾಂಶತ್ರಯಂ ।
ಗುರುವಿರೆ ಚತುರ್ಥದೊಳ್ ಶರಕಲಾಂಶತ್ರಯಂ ।
ಕರಕಲಾಂಶಂ ಸುಗುರುವಿರೆ ನಳಿನಿಯಕ್ಕುಂ ॥ ೯೩ ॥

ಕುಮುದಿನೀಚತುಷ್ಪದಿ

ವಿಶಿಖಮಾತ್ರಾಗಣ ಚತುಷ್ಟಯಂ ನಿಯತಿಯೊಳ್ ।
ನಶಿಸದೆ ಪದತ್ರಯದೊಳಿರೆ ಚತುರ್ಥಾಂಘ್ರಿಯೊಳ್ ।
ವಿಶಿಖ ಮಾತ್ರಾಂಶತ್ರಯಂ ಭುಜಕಲಾಗಣಂ ।
ವಿಶದ ಗುರುವೆಸೆಯೆ ಕುಮುದಿನಿ ರಂಜಿಸುವುದು ॥ ೯೪ ॥

ಮಾತ್ರಾತ್ರಿಪದಿ

ಪುರಕಲಾಧರಗಣಂ –
ಬರೆ ಷಷ್ಠ ದಶಮಕ್ಕೆ ।
ಶರಕಲಾಸುಗಣಮುೞಿದ ನವನಿಲಯಕಿರೆ ।
ವರ ಕಲಾತ್ರಿಪದಿ ಸೊಗಯಿಕುಂ ॥ ೯೫ ॥
ವಿದಿತಮಾತ್ರಾತ್ರಿಪದಿ –
ಗುದಯಿಪುವ ವರಚತು ।
ಷ್ಪದಕೆ ಭುಜ ನೇತ್ರ ಪುರ ನಿಗಮ ಮಿತಗಣಂ ।
ಪುದಿದಿರ್ಕುಮುಚಿತ ವಿಧಿಯಿಂದೆ ॥ ೯೬ ॥

ಲಲಿತಶೀರ್ಷಕಂ

ಪರಮು ಶರಮಾತ್ರಾನಿಕರಯುಕ್ತ ಗಣಷಟ್ಕಮುರುಪದದೊಳಾದಿಯೊಳ್
ನೆರೆಯೆ ಬೇರೆ ॥
ಪುರಕಲಾಶ್ರಿತಗಣಂ ಕರಕಲಾನ್ವಿತಗಣಂ ಗುರುವೊಡನೆ ತುದಿಯಲ್ಲಿ
ಬೆರೆದು ಸೇರೆ ॥
ಸರಸವಳಿಯುಥವಾ ರುಚಿರತರ ಪ್ರಾಸದಕ್ಷರಮುಸಮು ಗಣದೆಡೆಗೆ
ನಿರತಮೆಸೆಯೆ ॥
ವಿರತಿ ವಿಂಶತಿಕಲೆಗೆ ಚರಣಾಂತ್ಯಕುದ್ಭವಿಸೆ ಮೇಣೆಂಟುಪಙ್ಕ್ತಿಗಳ್ ನಾಲ್ಕು
ಪರೆದು ಬೆಸೆಯೆ ॥
ಶರ ವಿಷಯ ಭೂತ ಪುರ ಕರ ಕಲಾಗಣದ ಪರದೆ ॥
ಗುರುವನೊಂದಿದ ಪದಂ ನೆಱೆ ನಾಲ್ಕು ಸೇರೆ ಭರದೆ ॥
ಸ್ಫುರಿತಾಷ್ಟಪದದಿಂದೆ ಪರಿಶೋಭಿಸುವುದು ಸಿದ್ಧಂ ।
ವರ ಲಲಿತ ಶೀರ್ಷಕಂ ಪರಿಶುದ್ಧ ಲಯ ನಿಬದ್ಧಂ ॥ ೯೭ ॥

ಸಂಕೀರ್ಣಜಾತಿಬಂಧಲಕ್ಷಣನಿರೂಪಣಂ

ಸೂಚನೆ

ಲಲಿತ ಸಮಾನ ಲಯಾನ್ವಿತ ।
ಕಲಾಗಣದೊಳೆಸೆವನೇಕ ಚರಣಂ ತಮ್ಮೊಳ್ ।
ಮಿಲನಂಗೊಂಡೆಱಕದೆ ನಿ ।
ರ್ಮಲತರ ಸಂಕೀರ್ಣ ಜಾತಿಗಳ್ ಸಂಭವಿಕುಂ ॥ ೯೮ ॥

ಸಮದ್ವಿಪದೀಲಕ್ಷಣಂ

ವಿತತ ಸಮಾನ ಪದಾಶ್ರಿತ ।
ಚತುಷ್ಪದೀ ಬಂಧದಂಘ್ರಿಯುಗಲಂ ಮಾತ್ರಂ ।
ಮಿತಿಗೊಂಡಿರೆ ತತ್ಸಂಜ್ಞಾಂ ।
ಕಿತದಿಂ ದ್ವಿಪದೀಪ್ರಭೇದಮಾವಿರ್ಭವಿಕುಂ ॥ ೯೯ ॥

ಸಮತ್ರಿಪದೀಲಕ್ಷಣಂ

ದ್ವಿಪದೀಬಂಧಕೆ ಮತ್ತಂ ।
ಸುಪಾದಮೊಂದೊಡನೆ ಸೇರ್ದು ಮುಂತೊಪ್ಪಲೊಡಂ ।
ವಿಪುಳ ವಿಭೇದದೆ ವಿಮಲ ।
ತ್ರಿಪದೀಬಂಧಂಗಳುದಯಿಕುಂ ಕ್ರಮದಿಂದಂ ॥ ೧೦೦ ॥

ಪಂಚಪದೀಲಕ್ಷಣಂ

ಸಂಚಿತ ಚತುಷ್ಪದಿಗೊಡನೆ ।
ಚಂಚಲಿಸದೆ ಮತ್ತಮೊಂದು ಚರಣಂ ಚೆಲ್ವಿಂ ।
ಮಿಂಚುವ ತೆಱದಿಂದೊಂದಿರೆ ।
ಪಂಚಪದೀಜಾತಿ ಪುಟ್ಟುಗುಂ ಬಹುವಿಧದೊಳ್ ॥ ೧೦೧ ॥

ಸಮಷಟ್ಪದೀಲಕ್ಷಣಂ

ಸದಮಳ ಸಮಪಾದ ಚತು ।
ಷ್ಪದಿಯೊಡನೇಕ ದ್ವಿಪದಿಕೆಯಾದಿಯೊಳಥವಾ ।
ತುದಿಯೊಳ್ ನಿಲೆ ಸಮಷಟ್ಪದಿ ।
ಯುದಯಿಸುವುದನೇಕ ಭೇದದಿಂ ಸದ್ವಿಧಿಯೊಳ್ ॥ ೧೦೨ ॥

ಸಪ್ತಪದೀಲಕ್ಷಣಂ

ಅತಿಶಯ ವಿಧಿಯಿಂ ನಿರ್ಮಲ ।
ಚತುಷ್ಪದಿಕೆಯಂತ್ಯದೊಳ್ ತ್ರಿಪದಿಕಾಬಂಧಂ ।
ಹಿತದಿಂದೊಂದಿರೆ ವಿಮಲೋ ।
ನ್ನತ ಸಪ್ತಪದೀವಿಭೇದಮೊಡನುದ್ಭವಿಕುಂ ॥ ೧೦೩ ॥

ಅಷ್ಟಪದೀಲಕ್ಷಣಂ

ಸಮಪಾದ ಚತುಷ್ಪದಿಕೆಯ ।
ಸಮನಂತರದೊಳ್ ಚತುಷ್ಪದಿಕೆಯೊಂದೆಣೆಯೊಳ್ ॥
ಸಮುಚಿತ ವಿಧಿಯಿಂ ಕೂಡಿರೆ ।
ಸಮುದ್ಭವಿಪುದಷ್ಟಪದಿ ವಿಶಿಷ್ಟಕ್ರಮದೊಳ್ ॥ ೧೦೪ ॥

ದಶಪದೀಲಕ್ಷಣಂ

ವಿಶದ ವಿಶುದ್ಧಾಷ್ಟಪದಿಗೆ ।
ವಿಶೇಷದಿಂ ದ್ವಿಪದಿ ಮೊದಲೊಳಥವಾ ಕಡೆಯೊಳ್ ।
ನಶಿಸದ ತೆಱದಿಂ ಸೇರಿರೆ ।
ದಶಪದಿ ನಾನಾಪ್ರಕಾರದಿಂ ಜನಿಯಿಸುಗುಂ ॥ ೧೦೫ ॥

ದ್ವಾದಶಪದೀಲಕ್ಷಣಂ

ಅಷ್ಟಪದೀಛಂದಕೆ ನಿ ।
ರ್ದಿಷ್ಟ ಚತುಷ್ಪದಿಕೆಯೊಂದು ತಪ್ಪದೆ ಮತ್ತಂ ।
ಸ್ಪಷ್ಟದೆ ಬೆರೆದೊಡೆ ವಿಮಲೋ ।
ತ್ಕೃಷ್ಟ ದ್ವಾದಶ ಪದೀಪ್ರಭೇದಂ ತೋರ್ಕುಂ ॥ ೧೦೬ ॥

ಚತುರ್ದಶಪದೀಲಕ್ಷಣಂ

ದ್ವಾದಶ ಪದಿಯೊಳ್ ದ್ವಿಪದಿಕೆ ।
ಯೊದಿಯೊಳಥವಾ ತದಂತ್ಯದೊಳ್ ಸೇರಲೊಡಂ ।
ಪಾದಚತುರ್ದಶದಿಂ ನಿ ।
ರ್ವಾದಮುದಯಿಕುಂ ಚತುರ್ದಶಪದೀಬಂಧಂ ॥ ೧೦೭ ॥

ಷೋಡಶಪದೀಲಕ್ಷಣಂ

ನೋಡೆ ಮಹಾಷ್ಟಪದಿಯೊಳೊಡ ।
ಗೂಡಿ ಸದಷ್ಟಪದಿಯೊಂದು ಬೆರೆದೊಪ್ಪಲೊಡಂ ।
ಮೂಡುವುದತಿಶಯಮೆನಿಸುವ ।
ಷೋಡಶ ಪದಿ ವಿವಿಧ ವಿಧದೆ ಜಾತಿ ವ್ರಜದೊಳ್ । ೧೦೮ ॥

ಅಷ್ಟಮಾಧ್ಯಾಯಂ

ಅತ್ಯುಜ್ವಲ ಪದ್ಯಂಗಳ್ ।
ಪ್ರತ್ಯೇಕ ಕ್ರಮದೊಳಿರ್ಪ ಕತದಿಂದವಱೊಳ್ ।
ವ್ಯತ್ಯಾಸಮನೀಕ್ಷಿಸೆ ಷ ।
ಟ್ಪ್ರತ್ಯಯಭೇದವ ನಿದರ್ಶನದೆ ಸೂಚಿಸುವೆಂ ॥ ೧ ॥

ಪ್ರಸ್ತಾರಪ್ರತ್ಯಯಂ – ಸಮುದ್ರಪ್ರಸ್ತಾರಂ

ಗುರುಸಂಯೋಜಿತ ಪಾದದಾದಿ ಗುರುಸದ್ವರ್ಣಕ್ಕಧೋಭಾಗದೊಳ್ ।
ವರಲಘ್ವಕ್ಷರವೊಂದನಿಟ್ಟು ಪರದೊಳ್ ಮೇಲಿರ್ಪವೊಲ್ ಸಂಜ್ಞೆಯಂ ।
ಬರೆಯುತ್ತುಂ ಲಘುವಿಂದೆ ಹಿಂತೆ ಗುರುವಂ ತಂದೊಟ್ಟುತಂ ಲೆಕ್ಕದ ।
ಕ್ಕರಮೆಲ್ಲಂ ಲಘುವಾಗುವನ್ನಮಿಡೆ ತಾಂ ಪ್ರಸ್ತಾರಮಕ್ಕುಂ ಕರಂ ॥ ೨ ॥

ಅಥವಾ – ಛಂದವ ಲೆಕ್ಕಿಸಿ ಗುರುಲಘು ।
ವೊಂದೊಂದಂ ಸಾಲೊಳಿರಿಸಿ ಬೞಿಕ್ಕಂ ।
ಮುಂದಣ ಪಙ್ಕ್ತಿಯೊಳಿಮ್ಮಡಿ ।
ಯಿಂದವಱಿಂ ಬರೆಯೆ ಪುಟ್ಟುಗುಂ ಪ್ರಸ್ತಾರಂ ॥ ೨ ॥

೧–S S S S	೯–S S S I
೨–I S S S	೧೦–I S S I
೩–S I S S	೧೧–S I S I
೪–I I S S	೧೨–I I S I
೫–S S I S	೧೩–S S I I
೬–I S I S	೧೪–I S I I
೭–S I I S	೧೫–S I I I
೮–I I I S	೧೬–I I I I

ಸಮವೃತ್ತಪ್ರಸ್ತಾರವಿಧಿ

ಸಮವೃತ್ತದೆ ಚತುರಂಘ್ರಿಗೆ
ಸಮಾನಮಾಗಿ ಸಮರೂಪದಕ್ಷರ ನಿಕರಂ ।
ಸಮವಾಯದೊಳೊಗೆವುದಱಿಂ ।
ಸಮನಿಕುಮೇಕ ಪದದೆಣಿಕೆಯಿಂ ಪ್ರಸ್ತಾರಂ ॥ ೩ ॥

ಅತ್ಯುಕ್ತಾಛಂದೋವರ್ಗದಪ್ರಸ್ತಾರಂ

೧- s s
೨- । s
೩- s ।
೪- । ।

ಅತ್ಯುಕ್ತಾ ಛಂದೋವರ್ಗದೊಳ್ ನಾಲ್ಕು ವೃತ್ತ ಭೇದಂಗಳಕ್ಕುಂ ॥

ಅರ್ಧಸಮಪ್ರಸ್ತಾರವಿಧಿ

ಅರ್ಧಸಮವೃತ್ತದೊಳ್ ತ ।
ನ್ನರ್ಧಕೆ ಮೆಯ್ದೋಱುವಕ್ಕರದ ಸಂಖ್ಯೆಗಳಂ ।
ನಿರ್ಧರಿಸಿ ಪೂರ್ವ ವಿಧಿಯೊಳ್ ।
ವರ್ಧಿಪವೋಲಿರಿಸೆ ಪೊರ್ದುಗುಂ ಪ್ರಸ್ತಾರಂ ॥ ೪ ॥
ಸುಂದರ ಸಮವೃತ್ತದ ತೆಱ ।
ದಿಂದಂ ಗೋಚರಿಪ ರೂಪಮಂ ತೋಱಿದಿವಱೊಳ್ ।
ಕುಂದಿಲ್ಲದನ್ಯಭೇದವ ।
ಷೆಂದಣ ವಿಧಿಯಂತೆ ಲೆಕ್ಕಿಪುದು ನಿರ್ಣಯದಿಂ ॥ ೫ ॥

ದ್ವ್ಯಕ್ಷರ ಪಾದದಅರ್ಧಸಮವೃತ್ತ ಪ್ರಸ್ತಾರಂ

೧) - s s ; s s
೨) - । s ; s s
೩) - s । ; s s
೪) - । । ; s s
೫) - s s ; । s
೬) - । s ; । s
೭) - s । ; । s
೮) - । । ; । s
೯) - s s ; s ।
೧೦) - । s ; s ।

೧೧) - ꜱ । ; ꜱ ।
೧೨) - । । ; ꜱ ।
೧೩) - ꜱ ꜱ ; । ।
೧೪) - । ꜱ ; । ।
೧೫) - ꜱ । ; । ।
೧೬) - । । ; । ।

ಪ್ರಸ್ತಾರದೊಳ್ ಪ್ರಥಮ ಷಷ್ಠ ಏಕಾದಶ ಷೋಡಶ ಭೇದಂಗಳ್ ।
ಸಮವೃತ್ತಂಗಳಕ್ಕುಂ ಈ ಚತುರ್ಭೇದಂಗಳಂ ಕಳೆದೊಡೆ ।
ಉಳಿದ ಪನ್ನೆರಡು ಭೇದಂಗಳ್ ಅರ್ಧಸಮವೃತ್ತಂಗಳಕ್ಕುಂ ।

ವಿಷಮವೃತ್ತಪ್ರಸ್ತಾರವಿಧಿ

ವಿತತ ವಿಷಮ ವೃತ್ತಂಗಳ ।
ಚತುಶ್ಚರಣದೊಳ್ ನಿಗುಂಬಿಸಿದಖಿಳ ವರ್ಣ
ಪ್ರತತಿಯ ಲೆಕ್ಕಿಸಿ ಸತ್ಪ ।
ದ್ಧತಿಯಿಂದದೊಳಿರಿಸೆ ಸಮನಿಕಂ ಪ್ರಸ್ತಾರಂ ॥ ೬ ॥
ಪರ ಸಮವೃತ್ತದ ರೂಪವ ।
ತೊರೆದಮಲಾರ್ಧಸಮವೃತ್ತ ರೂಪಮನಿಪಱಿೊಳ್ ।
ಪರಿವರ್ಜಿಸಿ ಮತ್ತಮಿತರ ।
ಪರಿಭೇದಮನೆಣಿಸಿ ನೋಳ್ಪುದುಚಿತ ಕ್ರಮದಿಂ ॥ ೭ ॥

ದ್ವ್ಯಕ್ಷರಪಾದದ ವಿಷಮ ವೃತ್ತಪ್ರಸ್ತಾರಂ

೧ - ꜱ ꜱ, ꜱ ꜱ, ꜱ ꜱ, ꜱ ꜱ.
೨ - । ꜱ, ꜱ ꜱ, ꜱ ꜱ, ꜱ ꜱ.
೩ - ꜱ ।, ꜱ ꜱ, ꜱ ꜱ, ꜱ ꜱ.

ಪ್ರಸ್ತಾರದೊಳ್ ೨೫೬ ಭೇದಂಗಳಕ್ಕುಂ ಇದಱಿಂದಂ ।
ಪದಿನಾಱು ಸಮಾರ್ಧಸಮವೃತ್ತಭೇದಂಗಳಂ ಕಳೆದೊಡೆ ।
ಉಳಿದ ೨೪೦ ಭೇದಂಗಳ್ ವಿಷಮವೃತ್ತಂಗಳಕ್ಕುಂ ।

ನಷ್ಟಪ್ರತ್ಯಯಂ

ಸುಲಲಿತ ವೃತ್ತದಕ್ಷರದ ಸಂಖ್ಯೆಯನರ್ಧಿಸಲಾದೊಡಾಗಳು ।
ಜ್ವಲ ಲಘು ವರ್ಣಮೆಂದಱಿವುದರ್ಧಿಸಲಾಗದೊಡೊಂದನಿಟ್ಟು ಸಂ ।
ಕಲನವ ಮಾಡುತರ್ಧಿಸಲದಾದೊಡೆ ತಾಂ ಗುರುವೆಂದೆಣಿಪ್ಪುದೀ ।
ಸುಲಭ ವಿಧಾನದಿಂ ತಿಳಿಯಲಪ್ಪುದು ವೃತ್ತದ ನಷ್ಟ ವರ್ಣಮಂ ॥ ೮ ॥

ಪ್ರತಿಷ್ಠಾಛಂದದ ಏೞನೆಯ ವೃತ್ತಸ್ವರೂಪಂ

೭+೧÷೨=೪ - ಗುರು   ೪÷೨=೨ - ಲಘು

೨÷೨=೧-ಲಘು   ೧+೧÷೨=೧ - ಗುರು

ವೃತ್ತಸ್ವರೂಪಂ s । । s

ಉದ್ದಿಷ್ಟಪ್ರತ್ಯಯಂ

ವರ ವೃತ್ತಾಂಘ್ರಿಯ ವರ್ಣದೊಳ್ ದ್ವಿಗುಣಮಪ್ಪಂತಿಟ್ಟು ಸಂಖ್ಯೌಘಮಂ ।
ಗುರುವೊಳ್ ತೋಱುವ ಸಂಖ್ಯೆಯಂ ತೊರೆದು ಚೆಲ್ವಿಂದಂ ಲಘು ವ್ರಾತದೊಳ್ ।
ನೆರೆದಿರ್ಪಂಕೆಗಳಂ ಬೞಿಕ್ಕೆ ತುದಿಗಿನ್ನೊಂದಂಕೆಯಂ ಕೂಡಿಸಲ್ ।
ಸ್ಫುರದುದ್ದಿಷ್ಟ ಸುವೃತ್ತದಂಕೆಯೆಣಿಸಲ್ ಬರ್ಕುಂ ಲಸಚ್ಛಂದದೊಳ್ ॥ ೯ ॥

ಪ್ರತಿಷ್ಠಾ ಛಂದೋವರ್ಗದೊಳ್ ಸುಂದರೀ ವೃತ್ತದ ಸಂಖ್ಯಾ ಜ್ಞಾನಂ

೧ ೨ ೪ ೮

ಇಂದುಮ್ಮೃಡರ್

೨+೪=೬   ೬+೧=೭

ಸುಂದರೀವೃತ್ತಂ ಪ್ರತಿಷ್ಠಾ ಛಂದೋವರ್ಗದೊಳ್ ಏೞನೆಯ ।
ವೃತ್ತಮಕ್ಕುಂ

ಲಗಕ್ರಿಯಾಪ್ರತ್ಯಯಂ – ವರ್ಣಮೇರುಪ್ರಸ್ತಾರಂ

ಛಂದದ ವರ್ಣಸಂಖ್ಯೆಗಳ ಕೋಷ್ಠಕಮಂ ಬರೆದಾದಿಯಾಲಯ ॥
ಕ್ಕೊಂದನಿಡುತ್ತುಮಂತ್ಯಗೃಹಕೊಂದನೊಡರ್ಚುತುಮನ್ಯ ಧಾಮದೊಳ್

ಜಿಂದಣ ಶೀರ್ಷ ಕೋಷ್ಠಯುಗಳಾಂಕದ ಪೊತ್ತಮನಿಟ್ಟು ತುಂಬಿಸಲ್
ಕುಂದದೆ ಬರ್ಕುಮೇಕಯುಗಳಾದಿ ಲಗಾಶ್ರಿತ ವೃತ್ತ ಸಂಖ್ಯೆಗಳ್ ॥ ೧೦ ॥

೧ | ೧	ಉಕ್ತಾಛಂದದ ವೃತ್ತಂಗಳ್
೧ | ೨ | ೧	ಅತ್ಯುಕ್ತಾಛಂದದ ವೃತ್ತಂಗಳ್
೧ | ೩ | ೩ | ೧	ಮಧ್ಯಾಛಂದದ ವೃತ್ತಂಗಳ್
೧ | ೪ | ೬ | ೪ | ೧	ಪ್ರತಿಷ್ಠಾಛಂದದ ವೃತ್ತಂಗಳ್

ಸಂಖ್ಯಾನಪ್ರತ್ಯಯಂ

ಸಮವೃತ್ತಕ್ಕೆಸೆವಂಕ್ತಿಯೊಳ್ ನಿಯತಿಯಿಂ ಸದ್ವರ್ಣಪ್ರ[illegible]
ಕ್ರಮಿಸಿರ್ಪಂದದೊಳಂಕೆಯಂ ದ್ವಿಗುಣಮಪ್ಪಂತಿಟ್ಟು ತತ್ಸಂಖ್ಯೆಯಂ ॥
ಸಮನಪ್ಪಂದದೆ ಮತ್ತೆ ಸಂಕಲಿಸಿ ಬೇರೊಂದಂಕೆಯಂ ಕೂಡಿಸಲ್ ।
ಕ್ರಮದಿಂದೊಂದುವ ಪೊತ್ತದಿಂದಱಿಯಲಕ್ಕುಂ ವೃತ್ತ ಸಂಖ್ಯಾನಮಂ ॥ ೧೧ ॥

ಪ್ರತಿಷ್ಠಾಛಂದೋವರ್ಗದ ವೃತ್ತಸಂಖ್ಯೆ

೧ ೨ ೪ ೮
ಇಂದು ಮೃಡರ್
೧+೨+೪+೮=೧೫ ೧೫+೧=೧೬
ವೃತ್ತಸಂಖ್ಯೆ ೧೬
ಅಥವಾ – ನೋಡೆ ವಿನಿಶ್ಚಿತ ಛಂದದೆ ।
ಮೂಡುವ ವೃತ್ತದ ಲಗಕ್ರಿಯಾ ಸಂಖ್ಯೆಗಳಂ ।
ಜೋಡಿಸಿ ಬರೆದವಱಿಂ ಸಲೆ ।
ಕೂಡಿಸೆ ಸಮವೃತ್ತ ಸಂಖ್ಯೆ ತಪ್ಪದೆ ಬರ್ಕುಂ ॥ ೧೨ ॥
ಲಗಕ್ರಿಯಾಸಂಖ್ಯೆ:- ೧+೪+೬+೪+೧=೧೬ ವೃತ್ತಸಂಖ್ಯೆ

ಅರ್ಧಸಮವೃತ್ತ ಸಂಖ್ಯಾ ನಿರ್ಣಯಂ

ಸ್ವಸ್ಥಾನಾರ್ಧಸಮ (ಸಮಾನವರ್ಣಾರ್ಧಸಮ) ವೃತ್ತಸಂಖ್ಯೆ
ವಿದಿತ ಸಮವೃತ್ತ ಸಂಖ್ಯೆಯ ॥
ತದಂಕದಿಂ ಗುಣಿಸಿ ಮೂಲಮಂ ಕಳೆಯಲೊಡಂ ।
ಪದದೊಳ್ ಸಮಸಂಖ್ಯಾಕ್ಷರ ।
ಮೊದವಿರ್ಪರ್ಧಸಮವೃತ್ತ ಸಂಖ್ಯೆಯುದಯಿಕುಂ ॥ ೧೩ ॥

೧೬ × ೧೬ = ೨೫೬   ೨೫೬ — ೧೬ = ೨೪೦

ಪರಸ್ಥಾನಾರ್ಧಸಮ (ಅಸಮಾನವರ್ಣಾರ್ಧಸಮ) ವೃತ್ತಸಂಖ್ಯೆ

ಪರಮ ಸಮವೃತ್ತ ಸಂಖ್ಯೆಯ ।
ಬರೆವರ್ಧಕಸಮಸಮಾಂಘ್ರಿಯೊಳ್ ಗುಣಿಸಲೊಡಂ ।
ಭರದೊಳಸಮಾನ ವರ್ಣವ ।
ಬೆರೆದಿರ್ಪರ್ಧಸಮವೃತ್ತ ಸಂಖ್ಯೆಯೊದವುಗುಂ ॥ ೧೪ ॥

ವಿಷಮಸಮಪಾದದೊಳ್ ಮೂಱುನಾಲ್ಕುಅಕ್ಷರಂಗಳ್ ।
ಅಥವಾ ನಾಲ್ಕುಮೂರುಅಕ್ಷರಂಗಳಿರ್ಪಅರ್ಧಸಮ ।
ವೃತ್ತಸಂಖ್ಯೆ
೮×೧೬ =೧೨೮

ವಿಷಮವೃತ್ತಸಂಖ್ಯಾನಿರ್ಣಯಂ

ಸ್ವಸ್ಥಾನ (ಸಮಾನವರ್ಣ) ವಿಷಮವೃತ್ತಸಂಖ್ಯಾನಿರ್ಣಯಂ

ಸಮವರ್ಣದರ್ಧಸಮವೃ ।
ತ್ತಮೂಲಸಂಖ್ಯೆಗಳ ಗುಣಿಸಿ ಮೂಲವ ಕಳೆಯಲ್ ।
ಸಮಸಂಖ್ಯಾಕ್ಷರ ಪದಯುತ ।
ವಿಮಲ ವಿಷಮವೃತ್ತಚಯದ ಸಂಖ್ಯೆಗಳೊಗೆಗುಂ ॥ ೧೫ ॥

ನಾಲ್ಕುಅಕ್ಷರಂಗಳಪಾದಮಿರ್ಪವಿಷಮವೃತ್ತಸಂಖ್ಯೆ
೨೫೬×೨೫೬ =೬೫೫೩೬
೬೫೫೩೬ — ೨೫೬ =೬೫೨೮೦

ಪರಸ್ಥಾನ (ಅಸಮಾನವರ್ಣ) ವಿಷಮವೃತ್ತಸಂಖ್ಯಾನಿರ್ಣಯಂ

ವಿತತ ಸಮವೃತ್ತ ಸಂಖ್ಯೆಯ ।
ಚತುರಂಘ್ರಿಯೊಳಿಟ್ಟು ಬರೆದು ಗುಣಿಸಿದೊಡಮಱಿಂ ।
ಹಿತದಿಂದಸಮಾಕ್ಷರ ಪದ ।
ದತುಳ ವಿಷಮವೃತ್ತತತಿಯ ಸಂಖ್ಯೆಗಳಕ್ಕುಂ ॥ ೧೬ ॥

ಮೂರು - ನಾಲ್ಕು - ಐದು - ಆಱು ಅಕ್ಷರಂಗಳಪಾದಂಗಳಿರ್ಪ
ವಿಷಮವೃತ್ತಂಗಳಸಂಖ್ಯೆ
೮×೧೬×೩೨×೬೪ =೨೬೨೧೪೪

ಅಧ್ವಯೋಗಪ್ರತ್ಯಯಂ

ಸಂಗತ ಸಚ್ಛಂದದ ವೃ ।
ತ್ತಂಗಳ ಪರಿಸಂಖ್ಯೆಯುಂ ದ್ವಿಗುಣಿಸುತೊತ್ತಂದಂ ।
ಪಿಂಗಿಸಿ ಕಳೆದೊಡೆ ಬರ್ಪನಿ ।
ತಂಗುಲ ಪರಿಮಿತಿಯೊಳಧ್ವಯೋಗಂನಿಲ್ಗುಂ ॥ ೧೭ ॥

ನೆಲದೊಳ್ ವರ್ಣಮನೊಂದಂ ।
ಗುಲಗಾತ್ರದೊಳಿರಿಸಿ ಮತ್ತಮೊಂದಂಗುಲಮಂ ।
ತಲದೊಳ್ ಬಿಟ್ಟಕ್ಕರಮಂ ।
ವಿಲೇಖಿಸುವೊಡಧ್ವಯೋಗಮೊತೆಜಿನಕ್ಕುಂ ॥ ೧೮ ॥

ಪ್ರತಿಷ್ಠಾಛಂದೋವರ್ಗದಅಧ್ವಯೋಗಂ

ವೃತ್ತಸಂಖ್ಯೆ - ೧೬ ೧೬×೩೨

೩೨—೧ =೩೧ ಅಂಗುಲಂಗಳ್

ಅನುಬಂಧಂ

ಮಾತ್ರಾಗಣಪ್ರಸ್ತಾರಂ

ಸಮಧಿಕಗುರುಯುತಗಣದಿಂ ।
ಸಮಸ್ತಲಘುಯುಕ್ತಗಣದವರೆಗಂಮಾತ್ರಾ ।
ಸಮತೆಯುಗಣಮೊಗೆವಂತಿಡೆ ।
ಸಮಂತುತೋರ್ಕುಂಕಳಾಗಣಪ್ರಸ್ತಾರಂ ॥ ೧೯ ॥

ಸಮಮಾತ್ರಾಗಣಮುಚಿತ ।
ಕ್ರಮದೊಳ್ಸರ್ವಗುರುನಿಹಿತಗಣದಿಂಮತ್ತಂ ।
ವಿಮಳಿನವಿಷಮಕಳಾಂಶಂ ।
ಸಮುದಿತಲಘ್ವಾದಿಗಣದೆ ಗಣನೆಯುತಳೆಗುಂ ॥ ೨೦ ॥

ಪರಮಕಲಾಗಣದಾದಿಯು ।
ಗುರುವಿನಡಿಗೆಲಘುವನಿಟ್ಟುಪೂರ್ವದೆಮಾತ್ರಾ ।
ಪರಿಮಿತಿಗೊಂಡಿಸಿಲಘುವಂ ।
ಬರೆದುಪರದೆಮೇಲಿನಂತಿಡುವುದಕ್ಕರಮಂ ॥ ೨೧ ॥

ಪ್ರಕಟಾದಿಗುರುವಿನಡಿಯೊಳ್ ।
ವಿಕಳತೆಯಿಂನಿಲ್ವಲಘುಗೆಬಂತತಿಶಯದಿಂ ।
ದ್ವಿಕಳೆಗಳೊಗೆವೊಡೆಗುರುವಂ ।
ನಿಕಟದೊಳೊಂದಿಪುದುವಿದಿತಮಾತ್ರಾಗಣದೊಳ್ ॥ ೨೨ ॥
ಪ್ರಸ್ತುತಮಾತ್ರಾಗಣದೆಸ ।
ಮಸ್ತಗುರುಗಳಡಿಗೆಶುದ್ಧಲಘುಗಳಸುಕಳಾ ।
ವಿಸ್ತರದೆಣಿಕೆಯೊಳಿಡುತುಂ ।
ಪ್ರಸ್ತಾರಂಗೆಯ್ವುದಖಿಳಲಘುವೊಗೆವನ್ನಂ ॥ ೨೩ ॥

ಸಮಮಾತ್ರಾಗಣದೃಷ್ಟಾಂತಂ– ಚತುರ್ಮಾತ್ರಾಗಣಂ

S S
I I S
I S I
S I I
I I I I

ವಿಷಮಮಾತ್ರಾಗಣದೃಷ್ಟಾಂತಂ –ಪಂಚಕಲಾಗಣಂ

I S S
S I S
I I I S
S S I
I I S I
I S I I
S I I I
I I I I I

ಮಾತ್ರಾಗಣಸಂಖ್ಯಾನಿರ್ಣಯಂ

ಅಕಳಂಕಕಳಾನ್ವಿತಗಣ ।
ನಿಕಾಯಮಂನೋಜೆಯ್ವೊಡೇಕಮಾತ್ರಿಕೆಗೊಂದಂ ।
ದ್ವಿಕಳಾಂಶಭೇದಕೆರಡಂ ।
ವಿಕರ್ಷಿಪಂತಿಟ್ಟುಲೆಕ್ಕಿಪುದಿತರಗಣಮಂ ॥ ೨೪ ॥
ಗಣನೆಯೊಳಂತ್ಯೋಪಾಂತ್ಯದ ।
ಗಣಂಗಳವಿಕಲ್ಪಸಂಖ್ಯೆಯಂಸೇರಿಸಿಮು ।
ತ್ರೈಣಿಸಿದೊಡವಜಿಂತ್ರಿಕಳಾ ।
ಗಣಾದಿಗೊಂದುವವಿಕಲ್ಪಸಂಖ್ಯೆಗಳೊಗೆಗುಂ ೨೫ ॥

ವಿಕಲ್ಪಗಣಸಂಖ್ಯೆ ೧ ೨ ೩ ೫ ೮ ೧೩
ಮಾತ್ರಾಗಣಾ ೧ ೨ ೩ ೪ ೫ ೧೬

ಮಾತ್ರಾಗಣನಷ್ಟನಿರ್ಣಯಂ

ವಿಳಸತ್ಕಳಾಗಣದೆಸಂ ।
ಗಳಿಸಿರ್ಪವಿಕಲ್ಪಸಂಖ್ಯೆಯಂಬರೆದವಱಿಂ ।
ತಿಳಿಯುದಗಣಭೇದಾಂಕವ ।
ಕಳೆದೀಕ್ಷಿಪುದುೞಿದಶೇಷಸಂಖ್ಯೆಯುಮೊದಲೊಳ್ ॥ ೨೬ ॥
ಪರಮುಸಕಲಲಘುಗಣದೊಳ್ ।
ಬರೆದದಱವಿಕಲ್ಪಸಂಖ್ಯೆಯಂಶೇಷಾಂಕಂ ।
ನೆರೆದಲಘುವಪರಲಘುವೊಳ್ ।
ಬೆರೆಸುತೆಗುರುವೆಂದುಬಗೆದುಬರೆವುದುಗಣಮಂ ॥ ೨೭ ॥
ಪಂಚಮಾತ್ರಾಗಣದ್ವಿತೀಯಭೇದನಿರ್ಣಯಂ
೮—೨ =೬
೧ ೨ ೩ ೫ ೮
। । । । । ; ೬= ೧+೫
೧ ೩ ೫
ಗಣಸ್ವರೂಪಂ ऽ । ऽ = ಗಲಗ
೨ ೮

ಮಾತ್ರಾಗಣೋದ್ದಿಷ್ಟನಿರ್ಣಯಂ

ಪರಮಾತ್ರಾಗಣದೊಳ್ವಿ ।
ಸ್ತರದಿಂದೆವಿಕಲ್ಪಸಂಖ್ಯೆಯಂಬರೆದಿಡುತುಂ ।
ಗುರುಶೀರ್ಷಾಂಕವಸಂಖ್ಯೋ ।
ತ್ಕರದಿಂಕಳೆಯುಲೊಡನೊಗೆವುದುದ್ದಿಷ್ಟಾಂಕಂ ॥ ೨೮ ॥
ऽ । ऽ (ಗಲಗ) ಸಂಜ್ಞಾಪಂಚಮಾತ್ರಾಗಣಭೇದಂ
೧ ೩ ೫
ऽ । ऽ ೧+೫ =೬ . ೮—೬ =೨
೨ ೮
ऽ । ऽ (ಗಲಗ) ಗಣಂದ್ವಿತೀಯಭೇದಮಕ್ಕುಂ

ಮಾತ್ರಾಮೇರು ಪ್ರಸ್ತಾರಂ

ಸಮಕೋಷ್ಠಮನೆರಡೆರಡಂ ।
ಸಮವಿಷಮಕಲಾಗಣಾಂಕಮಂತುಂಬುವವೊಲ್ ।
ಸಮದೊಂದಿಸಿಪಙ್ಕ್ತಿಯು ।
ಸಮರ್ಚಿಸೇರಿಸುವುದಡಿಗೆವರ್ಧಿಪತೆಱದಿಂ ॥ ೨೯ ॥

ಏಕಾಂಕಮನಂತ್ಯಕ್ಕಿನಿ ।
ಗಾಕುಳದಿಂದೆಬರೆದಾದಿಗೇಕದ್ವ್ಯಕ ।
ತ್ರ್ಯಕಾದಿಸಂಖ್ಯೆಯುಂಮ ।
ಶ್ತಾಕೋಷ್ಠದೊಳಿಡುವದಡಿಂತೆ ೞೊಂದುವಪರಿಯೊಳ್ ॥ ೩೦ ॥

ಷರಿಕಿಸಿಶೇಷಸ್ಥಾನಕೆ ।
ಶಿರದೊಳ್ನಿಂದಂಕೆಯುಂಪರಾಂಕದತಲೆಯೊಳ್ ।
ನೆರೆದಂಕೆಯನೊಡಗೂಡಿಸಿ ।
ಬರೆಯುತೆತುಂಬುವುದುಕೋಷ್ಠದಂತಸ್ಥಳದೊಳ್ ॥ ೩೧ ॥
ವಿಲಸತ್ಕೋಷ್ಠದೊಳಂತ್ಯಕೆ ।
ನೆಲೆವಡೆದೊಂದಂಕೆಸರ್ವಲಘುಗಣಮೆಂದುಂ ।
ಕೆಲದಂಕೆಗಳೇಕಾದ್ಯ ।
ಜ್ವಲಗುರುಯುಕ್ತಗಣಮೆಂದುಮೆಣಿಸುವುದಿವಱೊಳ್ ॥ ೩೨ ॥

೧ | ೧	ದ್ವಿಮಾತ್ರಾಗಣಂ
೨ | ೧	ತ್ರಿಮಾತ್ರಾಗಣಂ
೧ | ೩ | ೧	ಚತುರ್ಮಾತ್ರಾಗಣಂ
೩ | ೪ | ೧	ಪಂಚಮಾತ್ರಾಗಣಂ
೧ | ೬ | ೫ | ೧	ಷಣ್ಮಾತ್ರಾಗಣಂ

ಷಟ್ಕಲಾಗಣವಿವರಂ :- ೧ ಸರ್ವಲಘುಗಣಂ – ೫ ಏಕಗುರುಗಣಂ – ೬ ದ್ವಿಗುರುಗಣಂ -೧ಸರ್ವಗುರುಗಣಂ

* * * * *

ಜಾತಿ ಪ್ರಸ್ತಾರವಿಧಿ

ಚಾರುತರಜಾತಿಗುದಯಿಪ ।
ಭೂರಿಗುರುವನಾಂತಮಾತ್ರಿಕಾಗಣಮಂವಿ ।
ಸ್ತಾರದೊಳಿಟ್ಟುಕರಂಪ್ರ ।
ಸ್ತಾರಮನೆಸಗುವುದುನೋಡಿಛಂದದ ಬಗೆಯಂ ॥ ೩೩ ॥

ಕಂದದಪ್ರಸ್ತಾರವಿಧಿ

SS-SS-SS-
SS-SS-|S|-SS-SS-
SS-SS-SS-
SS-SS|S|-SS-SS

ಮಾತ್ರಾಗಣಪ್ರಸ್ತಾರವಿಧಿಯಿಂದಿದಱೊಳ್‌ವಿಕಲ್ಪ ।
ಗಣಂಗಳನಿಟ್ಟು ಪ್ರಸ್ತಾರಮಂಮಾಬ್ಬುದು ।

ಜಾತಿಸಂಖ್ಯಾನಿರ್ಣಯಂ

ನಿರವದ್ಯಜಾತಿಪದ್ಯದ ।
ಚರಣಂಗಳೊಳೆಸೆವ ಸಕಲಮಾತ್ರಾಗಣದೊಳ್ ।
ಬರೆಯುತೆ ವಿಕಲ್ಪ ಸಂಖ್ಯೆಯ ।
ಪರಸ್ಪರಂಗುಣಿಸೆ ಭೇದ ಸಂಖ್ಯೆಗಳೊಗೆಗುಂ ॥ ೩೪ ॥

ಅತಿಶಯುಪದ್ಯದೊಳಂಶ ।
ಪ್ರತಿಷೇಧಮನಿಯುಮಮಿರೆ ತದಂಕವಕಳೆದಾ ।
ಶ್ರಿತಗಣ ವಿಕಲ್ಪ ಸಂಖ್ಯಾ ।
ತತಿಯುನಿರಿಸಿಗುಣಿಸಿಲೆಕ್ಕಿಪುದು ಜಾತಿಗಳಂ ॥ ೩೫ ॥

ಕಂದದ ಪ್ರಭೇದ ಸಂಖ್ಯೆ

೪×೫×೪×
೫×೪×೨×೪×೨
೪×೫×೪×
೫×೪×೨×೪×೨ =೧,೦೬,೪೯,೬೦,೦೦೦

ಗುರುಲಘುಜ್ಞಾನೋಪಾಯಂ

ಛಂದದೊಳೆಡೆಗೊಂಡಕ್ಷರ ।
ಸಂದೋಹದೆಗುರುವಕಳೆದೊಡುೞಿದುವುಲಘುಗಳ್
ಕುಂದಿಲ್ಲದ ಶುದ್ಧಾಕ್ಷರ ।
ವೃಂದದೆ ಲಘುತತಿಯ ತೆಗೆದೊಡುೞಿದುವುಗುರುಗಳ್ ॥ ೩೬ ॥
೫೨—೧೨ =೪೦ಲಘು   ೫೨—೪೦ =೧೨ಗುರು
ಸೊಗಯಿಪ ಸಕಲಾಕ್ಷರಮಂ ।
ದ್ವಿಗುಣಿಸಿಮಾತ್ರೆಗಳಕಳೆದೊಡೊಗೆವುವು ಲಘುಗಳ್ ।
ಬಗೆಯೆಕಲಾಘುದೆವರ್ಣವ ।
ತೆಗೆದೊಡೆ ಗುರುವೊಗೆಗು ಮಣಿಸೆ ಜಾತಿ ವ್ರಜದೊಳ್ ॥ ೩೭ ॥
೫೫×೨ =೧೧೦, ೧೧೦—೬೪ =೪೬-ಲಘು
೬೪—೫೫ =೯ಗುರು

ಮಾತ್ರಾಪಿಂಡಂ

ಗುರುಲಘುವರ್ಣವಬೆರೆದ ।
ಕ್ಷರಪಿಂಡದೊಳಿರ್ಪಗುರುಗಳಂದ್ವಿಗುಣಿಸಿಸಂ ।
ಸ್ಕರಿಸಿ ಲಘುಗಳಂ ಕೂಡಿಸೆ ।
ದೊರಕೊಳ್ಗುಂ ಛಂದಕೆಸೆವ ಮಾತ್ರಾಪಿಂಡಂ ॥ ೩೮ ॥

ಅಂಶಿಗಣಪ್ರಸ್ತಾರಂ

ಸಾರತರಗಾನ ವಿಧಿಗನು ।
ಸಾರದೆ ಭುಜನಗರ ವಾರಿನಿಧಿಗುರುವಂಪ್ರ ।
ಸ್ತಾರಂಗೆಯ್ದೊಡೆ ಬರ್ಕುಂ ।
ಸಾರಸಭವವಿಷ್ಣು ರುದ್ರಗಣದವಿಭೇದಂ ॥ ೩೯ ॥
ಗುರುಗಳ ಗಣಮಂಬರೆಯುತೆ ।
ವರಲಘುವಂಪ್ರಥಮಗುರುವಿನಡಿಗಿರಿಸುತ್ತುಂ ।
ಪರದೊಳ್ ಮೇಗಣತೆಱದಿಂ ।
ಬರೆಯುತ್ತುಂಪೂರ್ವಕಿಡುವುದೊಂದುಸುಲಘುವಂ ॥ ೪೦ ॥

ಪ್ರೋದಿತ ಗುರುವಿನ ತಳದೆಲ ।
ಘೊದಯು ಮಪ್ಪಂತೆ ಸರ್ವಲಘುವೊಗೆವನ್ನಂ ॥
ಭೇದದೊಳಿಡುವುದು ವರಗಣ ।
ದಾದಿಯುಗುರುವಿನಡಿಗಿಕ್ಕುವುದು ಲಘುಯುಗಮಂ ॥ ೪೧ ॥

ದೃಷ್ಟಾಂತಂ:- ಬ್ರಹ್ಮಗಣಪ್ರಸ್ತಾರಂ

s s
। । s
s ।
। । ।

ಅಂಶಿಗಣಸಂಖ್ಯಾ ನಿರ್ಣಯಂ

ಪರಿಶುದ್ಧಾಖಿಳಗುರ್ವ ।
ಕ್ಷರಯುತ ಮೂಲಗಣದಕ್ಕರದ ಪರಿಮಿತಿಯೊಳ್ ।
ಕರಸಂಖ್ಯೆಯನಿಟ್ಟವಜಿಂ ।
ಪರಸ್ಪರಂ ಗುಣಿಸೆ ಗಣದಲೆಕ್ಕಂಬರ್ಕುಂ ॥

ಬ್ರಹ್ಮಗಣಂ s s ೨×೨ =೪

ಕರ್ಣಾಟ ಜಾತಿಪ್ರಸ್ತಾರವಿಧಿ

ವಿಳಸಚ್ಛಂದದೆ ನಿಯುತಾ ।
ತುಳಗುರುಯುಕ್ತಗಣತತಿಯು ನಿರಿಸುತೆಸಹಜಾ ।
ಖಿಳ ಲಘು ಗಣವೊಗೆವಿನೆಗಂ ।
ತಳದೊಳ್ ಪ್ರಸ್ತಾರವೆಸಗುವುದು ವಿಸ್ತರದಿಂ ॥

ದೃಷ್ಟಾಂತಂ;- ಏಳೆ s s s - s s s - s s s - s s s
s s s - s s - । । s s

ಅಂಶಿಗಣ ಪ್ರಸ್ತಾರರೀತಿಯಿಂದಿದಱೊಳ್ ವಿಕಲ್ಪ ।
ಗಣಂಗಳನಿಟ್ಟು ಪ್ರಸ್ತಾರಮಂ ಮಾಳ್ಪುದು ।

ಕರ್ಣಾಟ ಜಾತಿಸಂಖ್ಯಾನಿರ್ಣಯಂ

ಕ್ರಮದಿಂ ಛಂದದೊಳೊಂದುವ ।
ಸಮಗ್ರ ಗಣಭೇದಸಂಖ್ಯೆಯಂ ಬರೆದವಜಿಂ ।

ಿಪುವಾಯುದೆ ಗುಣಿಸಲೊಡಂ ।
ಸಮಸ್ತ ಪದ್ಯ ಪ್ರಭೇದ ಸಂಖ್ಯೆಗಳೊಗೆಗುಂ ।
೮×೮×೮×೮
೨×೪×೪ =೫೨೪೨೮೮

*   *   *   *

ಖ್ಯಾತ ಶಿಶಿಲಪುರವಾಸಂ ।
ಸೂತಳ ಸುಮನಸನನಂತ ಕೆದಿಲಾಯತನೂ ।
ಾತಂ ಲಕ್ಷ್ಮೀಪುತ್ರಂ ।
ಶಾರಾವಮಾಖ್ಯನೀಕೃತಿಯ ನಿರ್ಮಿಸಿದಂ ॥

*   –   *   –

ರೆಯೊಳ್ ನಿಶ್ಚಲ ಶಾಂತಿಯಿರ್ಕೆನಿರತಂ ಸತ್ಕಾಲದೊಳ್ ವೃಷ್ಟಿಯುಂ ।
ರದಂವರ್ಷಿಕೆಚಾರುಸಸ್ಯವಿಸರಂ ಪರ್ವಿರ್ಕೆ ಭೂಚಕ್ರದೊಳ್ ।
ವರಗೋಸಂತತಿ ಬಾಳ್ಗೆ ಪಕ್ಷಿನಿಕರಂ ವರ್ಧಿಕ್ಕೆ ನಿರ್ಭೀತಿಯಿಂ ।
ರಸಂದೋಹಕೆ ಸಂಭವಿಕ್ಕೆ ವಿಭವಂ ಶ್ರೇಯುಂ ಸುಖಂಮಂಗಳಂ ॥

ಸ
ೃ



ಛಂದೋದರ್ಪಣಂ: ಲಕ್ಷ್ಯಸಹಿತ ಲಕ್ಷಣಕಾವ್ಯ! ಕವಿ ಶ್ರೀ ಕ.ಪು. ಸೀತಾರಾಮ ಕೆದಿಲ್ಲಾಯ, ಶಿಶಿಲ ಅವರು ಛಲದಿಂದ ರಚಿಸಿದ ಈ ಛಂದೋಗ್ರಂಥವು, ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಇತಿಹಾಸ ನಿರ್ಮಿಸುವಂತಹ ಕೃತಿ.

ಸೂಕ್ತಿಮಂಜರಿ, ಯಕ್ಷಗಾನ ಛಂದಸ್ಸು, ದುರ್ಯೋಧನ ವಧೆ, ಛಂದೋದರ್ಪಣಂ-ಇವು ಇವರ ಪ್ರಕಟಿತ ಕೃತಿಗಳು. ವಾಲಿಸುಗ್ರೀವರ ಕಾಳಗ, ವಿದ್ಯುನ್ಮತೀ ಕಲ್ಯಾಣ - ಸಂಪಾದಿತ ಕೃತಿಗಳು. ಮುದ್ದಣ ಪ್ರಶಸ್ತಿ, ಯಕ್ಷಗಾನ ಪ್ರಕಾಶಿಕೆ, ಯಕ್ಷಗಾನ ಮಕರಂದ, ರಂಗಪ್ರೈಖರಿ-ಇತ್ಯಾದಿ ಅಭಿನಂದನ ಗ್ರಂಥಗಳಲ್ಲಿಯೂ, ಮೈಸೂರು ವಿಶ್ವವಿದ್ಯಾನಿಲಯ ಪ್ರಕಟಿಸಿದ ಕನ್ನಡ ಛಂದಸ್ಸಿನ ಚರಿತ್ರೆಯಲ್ಲಿಯೂ ಇವರ ಲೇಖನಗಳು ಪ್ರಕಟವಾಗಿವೆ. ಕನ್ನಡ ಛಂದಸ್ಸಿನ ಇತಿಹಾಸ, ಯಕ್ಷಗಾನ ಛಂದೋವಿವೇಕ, ವಿಚಾರಧಾರೆ (ಪ್ರಬಂಧ) ಧರ್ಮಪ್ರಚಾರ, ಶಿಶು ಗೀತಾವಳಿ, ಭಜನ ಗೀತಾಂಜಲಿ, ಹೀಗೆ ಹಲವು ಕೃತಿಗಳು ಪ್ರಕಟವಾಗಬೇಕಾಗಿವೆ.

ಶ್ರೀ ಶಿಶಿಲೇಶ್ವರ ದೇವರ ಭಕ್ತರಾಗಿ ಮಲೆನಾಡಿನ ಹಳ್ಳಿಯಾದ ಶಿಶಿಲದಲ್ಲಿ ಕೃಷಿ ಜೀವನ ನಡೆಸುತ್ತಿರುವ ಇವರು ಪ್ರತಿಭಾವಂತ ಕವಿ, ಯಕ್ಷಗಾನ ತಾಳಮದ್ದಳೆಗಳಲ್ಲಿ ಚೆನ್ನಾಗಿ ಅರ್ಥ ಹೇಳುವ ವಾಗ್ಮಿ, ಆತ್ಮೀಯತೆಯನ್ನು ಉಳಿಸಿ ಬೆಳೆಸಿಕೊಳ್ಳುವ ಗುಣವಂತ ವ್ಯಕ್ತಿ.

ಪ್ರಕಾಶಕ